ಶರಣ ಸಾಹಿತ್ಯ ಗ್ರಂಥಮಾಲೆ-೩.

ಮಹಾಕವಿ ರಾಘವಾಂಕ ವಿರಚಿತ

ವೀರೇಶ ಚರಿತೆ

ಸಂಪಾದಕರು :

…ಸ್ಥಾನ ವಿದ್ವಾನ್, ಪಂಡಿತರತ್ನಂ, ಪದ್ಮಶ್ರೀ

ಬಿ. ಶಿವಮೂರ್ತಿಶಾಸ್ತ್ರೀ

೧೯೬೬ ಬೆಲೆ ೩-೦೦

ಶರಣ ಸಾಹಿತ್ಯ ಗ್ರಂಥಮಾಲಾ–೩.

ಮಹಾಕವಿ ರಾಘವಾಂಕ
ವಿರಚಿತ

ವೀರೇಶ ಚರಿತೆ

ಸಂಪಾದಕರು

ಪಂಡಿತರತ್ನಂ, ಪದ್ಮಶ್ರೀ
ಬಿ. ಶಿವಮೂರ್ತಿ ಶಾಸ್ತ್ರೀ

೧೯೬೩

ಬೆಲೆ ೩-೦೦

ಪ್ರಥಮ ಮುದ್ರಣ (೧೦೦೦) ೧೯೪೨
ದ್ವಿತೀಯ ಮುದ್ರಣ (೧೦೦೦) ೧೯೬೬

ಪ್ರಕಾಶಕರು :
ಶರಣ ಸಾಹಿತ್ಯ ಕಾರ್ಯಾಲಯ, ಬೆಂಗಳೂರು-೨.

ಮುದ್ರಕರು
ಸ್ವತಂತ್ರ ಕರ್ನಾಟಕ ಮುದ್ರಣಾಲಯ
೧೪೧. ರಂಗಸ್ವಾಮಿಗುಡಿ ಬೀದಿ, ಬೆಂಗಳೂರು-೨.

ವಿಷಯ ಸೂಚಿಕೆ

ಚಿ ತ್ರ ಗ ಳು

ಅರಿಕೆ

ರಾಘವಾಂಕನ 'ವೀರೇಶ ಚರಿತೆಯು' ಪ್ರಥಮ ಮುದ್ರಣ (೧೯೪೨) ಮುಗಿದು ಹೋದುದರಿಂದ ಈಗ ದ್ವಿತೀಯ ಮುದ್ರಣವನ್ನು ಪ್ರಕಟಿಸಲಾಗಿದೆ. ಈಗ್ರಂಥವು ತುಮಕೂರು ಜಿಲ್ಲಾ ದಂಡಿನ ಶಿಬಿರದ ಕೈ॥ ಕಲ್ಲುಮಠದ ಕಲ್ಲಯ್ಯ ನವರು ಕೃಪೆಮಾಡಿ ಕೊಟ್ಟ ಒಂದು ತಾಳೆಯೋಲೆಯ ಸಹಾಯದಿಂದಲೂ, ರಾಯಚೂರು ವೇ॥ ಪಂಡಿತ ಸೂಗವೀರ ಶರ್ಮರು ಕಳುಹಿಸಿಕೊಟ್ಟ ಒಂದು ಕೈಬರೆಹದ ಪ್ರತಿಯ ಸಹಾಯದಿಂದಲೂ ಮುದ್ರಿತವಾಗಿದೆ. ನಮಗೆ ದೊರೆತ ಈ ಎರಡೂ ಪ್ರತಿಗಳಲ್ಲಿ ದೋಷಗಳು ಬಹಳವಾಗಿವೆ. ಆದುದರಿಂದ ಬೇರೊಂದು ಶುದ್ಧವಾದ ತಾಳೆಯಪ್ರತಿ ಸಿಗುವವರೆಗೆ ಈ ಗ್ರಂಥವನ್ನು ನಿರ್ದೋಷವಾಗಿ ಸಂಸ್ಕರಿಸಲು ಸಾಧ್ಯವಿಲ್ಲವಾಗಿದೆ. ಅದುಕಾರಣ ಕನ್ನಡ ಸಾಹಿತ್ಯ ಪ್ರೇಮಿಗಳಾದ ಮಹನೀಯರು ಎಲ್ಲಿಯಾದರೂ ಇದರ ತಾಳೆಯ ಪ್ರತಿ ಸಿಕ್ಕರೆ ನಮಗೆ ಕಳುಹಿಸಿ ಕೊಟ್ಟು ಉಪಕರಿಸಬೇಕೆಂದು ಬಿನ್ನಹ.

ಕವಿಕಾವ್ಯ ವಿಚಾರಗಳನ್ನು ಕುರಿತು ಸಂಗ್ರಹವಾಗಿ ಮುಂದೆ ಬರೆಯ ಲಾಗಿದೆ. ರಾಘವಾಂಕನ ಸಮಗ್ರ ವಿಷಯಗಳನ್ನು ತಿಳಿಯಲಿಚ್ಛಿಸುವವರು ಶರಣ ಸಾಹಿತ್ಯ ಗ್ರಂಥಮಾಲೆಯಲ್ಲಿ ಬೇಗನೆ ಪ್ರಕಟವಾಗಲಿರುವ 'ಹರಿಹರ-ರಾಘವಾಂಕ' ಎಂಬ ಗ್ರಂಥವನ್ನು ಅವಲೋಕಿಸಬೇಕೆಂದು ಕೋರಿಕೆ. ಗ್ರಂಥವಾಚಕರ ಸೌಕರ್ಯಕ್ಕಾಗಿಯೂ, ಪುಸ್ತಕದ ಸೌಂದರ್ಯವನ್ನು ಹೆಚ್ಚಿ ಸುವ ಸಲುವಾಗಿಯೂ ಈ ಪುಸ್ತಕದಲ್ಲಿ ಕವಿಯ ಇಷ್ಟದೇವತೆಯಾದ ಪಂಪಾ ವಿರೂಪಾಕ್ಷ ದೇವಾಲಯ, ಕಥಾನಾಯಕ ಓರುಂಗಲ್ಲು ವೀರೇಶ್ವರ, ಹಾಗೂ ಪ್ರಸನ್ನ ವೀರಭದ್ರ ದೇವರು, ಬೇಲೂರಿನಲ್ಲಿರುವ ರಾಘವಾಂಕನ ಸಮಾಧಿ ಈ ಚಿತ್ರಗಳನ್ನು ಪ್ರಕಟಿಸಲಾಗಿದೆ.

ಈ ಕಾವ್ಯದ ಪಾಠವನ್ನು ನಿರ್ಧರಿಸುವುದಲ್ಲಿ. ಕನ್ನಡ ನಿಘಂಟಿನ ಸಂಪಾ ದಕರಾದ ಶ್ರೀ ಎ ೯. ಬ ಸ ವಾ ರಾ ಧ್ಯ ಎಂ. ಎ; ರವರೂ, ಸಹಾಯ ಸಂಪಾದಕರಾದ ಶ್ರೀ ಪಂಡಿತ ದೇಶಿಕಾಚಾರ್ಯರೂ ತುಂಬ ಸಹಾಯ ಮಾಡಿದ ರೆಂದು ಹೇಳಲು ಸಂತೋಷವೆನಿಸಿದೆ. ಗೌರವೀಯರಾದ ಅವರಿಬ್ಬರಿಗೆ ನಮ್ಮ ಹಾರ್ದಿಕ ವಂದನೆಗಳು.

'ಓರುಂಗಲ್ಲು ವೀರಭದ್ರನ ವಿಗ್ರಹವು ಈಗ ಅಲ್ಲಿನ ಕೋಟೆಯ ಒಂದು ಶಿವಮಂದಿರದಲ್ಲಿ ಸಂರಕ್ಷಿಸಲ್ಪಟ್ಟಿದೆ. ವೀರೇಶನ ಗುಡಿಯು ಮಲ್ಲಿಕಾಪುರನ ದಂಗೆಯಲ್ಲಿ ಪುಡಿಪುಡಿಯಾಗಿದೆಯೆಂದು ಊಹಿಸಬಹುದು.


ರಾಘವಾಂಕನ ಸಮಾಧಿಯು ಬೇಲೂರಿನಲ್ಲಿ ವಿಜಯ ನಗರ ದಿಬ್ಬದ ಬದಿಯಲ್ಲಿದೆ. ಈಗ ಇದು ಹಾಳುಬಿದ್ದಿದೆ. ಕೆಲವರು ಇದನ್ನು 'ಪಾತಾಳೇಶ್ವರ'ಎಂದು ಕರೆಯುತ್ತಾರೆ. ಬಾಲಬಹ್ಮಚಾರಿಯೂ ಶಿವಯೋಗ ಸಂಪನ್ನನೂ ಮಹಾ ಕವಿಯೂ ಎನಿಸಿದ ರಾಘವಾಂಕನ ಈ ಸಮಾಧಿಯು ಕನ್ನಡ ಜನರಿಗೆ ಸುಕ್ಷೇತ್ರವೆನಿಸಿದೆ. ಇದನ್ನು ಜೀರ್ಣೋದ್ಧಾರಗೊಳಿಸಿ ಸುರಕ್ಷಿತಗೊಳಿಸುವುದೂ ಆಮಹಾಕವಿಗೆ ನಮ್ಮ ಭಕ್ತಿ-ಗೌರವಗಳನ್ನು ಸಲ್ಲಿಸುವುದೂ ನಮ್ಮ ಜನರ ಕರ್ತವ್ಯವಾಗಿದೆ. ಇದರಂತೆಯೇ ಯಳಂದೂರಿನಲ್ಲಿ ಷಡಕ್ಷರದೇವನ ಸಮಾಧಿ, ಕಳ್ಳಯದ ಬೆಟ್ಟದಲ್ಲಿ ಪಾಲ್ಕುರಿಕೆ ಸೋಮನಾಥನ ಸಮಾಧಿ, ಕೃಷ್ಣರಾಜಪೇಟೆ ಹತ್ತಿರ ಸ್ವತಂತ್ರಸಿದ್ಧಲಿಂಗೇಶ್ವರನ ಸಮಾಧಿ, ಮೈಸೂರಿನಲ್ಲಿ ಶಾಲ್ಯದ ಅರಸರು ಮತ್ತು ಬಸವಪ್ಪಶಾಸ್ತ್ರಿಗಳ ಸಮಾಧಿಗಳು ಉದಾಸೀನ ಮಾಡಲ್ಪಟ್ಟಿವೆ. ಶಂಭುಲಿಂಗನ ಬೆಟ್ಟದಲ್ಲಿ ನಿಜಗುಣ ಶಿವಯೋಗಿಯ ಸ್ಮಾರಕಗಳು; ಗುಬ್ಬಿಯಲ್ಲಿ ಮಲ್ಲಣಾಚಾರ್ಯನ ನೆನಪುಗಳು, ಗೂಳೂರಿನಲ್ಲಿ ಸಿದ್ಧವೀರಣಾಚಾರ್ಯನ ಸ್ಮಾರಕಗಳು, ಬಿಜ್ಜಾವರದಲ್ಲಿ ಬಿಜ್ಜಮಹಾದೇವಿ ಮೊದಲಾದವರ ಸ್ಮಾರಕಗಳು ಕಡೆಗಣಿಸಲ್ಪಟ್ಟಿವೆ.

ಪಾಶ್ಚಾತ್ಯ ದೇಶಗಳಲ್ಲಿ ಕವಿಗಳ ಹಾಗೂ ರಾಷ್ಟ್ರಪುರುಷರ ಸ್ಮಾರಕಗಳಿಗೆ ಬಹಳ ಗೌರವವಿದೆ. ಸರ್ಕಾರದವರೂ, ಸಾರ್ವಜನಿಕರೂ ಅವನ್ನು ಸಂರಕ್ಷಿಸಿ ಗೌರವಿಸುತ್ತಾರೆ. ಆದರೆ ಭಾರತದಲ್ಲಿ ಇಂತಹವರ ಬಗೆಗೆ ತಕ್ಕಷ್ಟು ಗಮನ ಹರಿದಿಲ್ಲವೆಂದು ಹೇಳಬಹುದು. ಇದು ನಮ್ಮ ಸಮಾಜದ ಹಾಗೂ ನಾಡಿನ ಅವನತಿಯ ಒಂದು ನಿದರ್ಶನವೆನಿಸಿದೆಯಲ್ಲವೆ ?

ಇಂತು

ತಾ|| ೧-೧೦-೧೯೬೭ ಬಿ. ಶಿವಮೂರ್ತಿ ಶಾಸ್ತ್ರೀ

ಬೆಂಗಳೂರು-೨. ಪ್ರಕಾಶಕ





ಶರಣ ಸಾಹಿತ್ಯ ಗ್ರಂಥಮಾಲೆಯ ಮಹಾಪೋಷಕರೂ
ಚಿನ್ಮೂಲಾದ್ರಿ ಶೂನ್ಯಸಿಂಹಾಸನಾಧೀಶ್ವರರೂ ಎನಿಸಿರುವ
ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳು,
ಚಿ ತ್ರ ದು ಗ ೯ .

ಅರ್ಪಣ

ಶ್ರೀ ಚಿನ್ಮೂಲಾದ್ರಿ ಶೂನ್ಯಸಿಂಹಾಸನಾಧೀಶ್ವರರೂ
ಶರಣ ಸಾಹಿತ್ಯ ಗ್ರಂಥಮಾಲೆಯ ಮಹಾ ಪೋಷಕರೂ
ಶಿವಾನುಭವ ಶಾಸ್ತ್ರ ವಿಶಾರದರೂ ಆಗಿರುವ
ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳ
ದಿವ್ಯ ಸನ್ನಿಧಿಗೆ ಗುರುಭಕ್ತಿ ಕಾಣಿಕೆ.

ಅರ್ಪಿಸಿದವನು:- ಬಿ. ಶಿವಮೂರ್ತಿಶಾಸ್ತ್ರೀ
ಸಂಪಾದಕ.


ಕವಿ-ಕಾಣಿಕೆ

ಉದ್ದಂಡ ಷಟ್ಪದಿ :

ಗುರುಭಕ್ತಿಯನಿಧಿ ನೀತಿಯ ನೆಲೆಮನೆ ಕೀರ್ತಿಯ
ಪುರ ಮೋಕ್ಷದ ಪುತ್ತ್ರಳಿ ಸುರುಚಿರ ಕವಿತಾಸುಂ
ದರಿವಲ್ಲಭ ನೂತನ ಕರ್ಣಾಟಕ ಕವಿಶೇಖರ ನಿರುಪಮ ಪಂಡಿತನು ॥
ಪರತರ ಹಂಪೆಯ ಪಾವನಯತಿವರ ಹರಿದೇ-
ವರಸುತ ಪುಣ್ಯಚರಿತ್ರನ ರಾಘವದೇವನ
ಚರಣದ್ವಯಮಿರಲೆನ್ನಯ ಹೃದಯಾಕಾಶದಿ ರವಿಶಶಿಗಳವೊಲ್ ನಿರುತಂ ॥

—ಶೂಲಪಾಣಿ

‘ ವೀರೇಶ ಚರಿತೆ ’




ಆಸ್ಥಾನ ವಿದ್ವಾನ್, ಪಂಡಿತ ರತ್ನಂ, ಕೀರ್ತನಾಚಾರ್ಯ, ಕರ್ನಾಟಕ ವಿಭೂಷಣ


ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು

ಸಂಪಾದಕರು :

ಶರಣ ಸಾಹಿತ್ಯ ಗ್ರಂಥಮಾಲಾ, ಬೆಂಗಳೂರು-2.



ಮಹಾಕವಿ ರಾಘವಾಂಕನ ಇಷ್ಟದೇವತೆ ಪಂಪಾವಿರೂಪಾಕ್ಷ ದೇವಾಲಯ
ಹೇಮಕೂಟ, ಶ್ರೀ ಪಂಪಾಕ್ಷೇತ್ರ



ಬೇಲೂರಿನಲ್ಲಿ ವಿಜಯನಗರ ದಿಬ್ಬದ ಪಕ್ಕದಲ್ಲಿರುವ
ಮಹಾಕವಿ ರಾಘವಾಂಕನ ಸಮಾಧಿ.

ಕವಿ-ಕಾವ್ಯ ವಿಚಾರ

ಕಂದ॥ ಅವಿಚಲಿತಬಲಮುದಾಚಲ ।
ಪವಿಯಂ ಪ್ರಣುತಪ್ರಬಂಧಪಂಕಜ ವಿಳಸದ್ ॥
ರವಿಯಂ ಚಲದಂಕ ಮಹಾ
ಕವಿಯಂ ಘನ ರಾಘವಾಂಕನಂ ನುತಿಗೆಯ್ವೆಂ ॥

—ಷಡಕ್ಷರದೇವ.

ಮಹಾಕವಿ ರಾಘವಾಂಕನು ಕನ್ನಡ ನಾಡಿನಲ್ಲಿ ಮನ್ನಣೆ ಪಡೆದಿರುವ ಪಂಪಾಕ್ಷೇತ್ರದವನು. ತುಂಗಭದ್ರೆಯ ಪಾವನಸಾನ್ನಿಧ್ಯದಿಂದ ಪುನೀತ ನಾದವನು. ಇವನ ತಂದೆ ವೀರಶೈವ ಧರ್ಮದಲ್ಲಿ ಕಡುನಿಷ್ಠೆಯುಳ್ಳ ಮಹಾ ದೇವಭಟ್ಟ. ತಾಯಿ ಸಾಧ್ವೀಮಣಿ ರುದ್ರಾಣೀದೇವಿ. ಈ ಪಾವನ ದಂಪತಿಗಳ ಸುಪುತ್ರನೇ ಕವಿ ರಾಘವಾಂಕ. ಈ ರಾಘವಾಂಕನ ಸೋದರ ಮಾವನು–ಕನ್ನಡ ಸಾಹಿತ್ಯದಲ್ಲಿ 'ಕವಿ ಚಕ್ರವರ್ತಿ' ಎನಿಸಿರುವ ಹರಿಹರ ದೇವನು. ರಾಘವಾಂಕನ ವಿದ್ಯಾಭ್ಯಾಸವು ಹಂಪೆಯಲ್ಲಿ ತುಂಗಭದ್ರಾ ತೀರ ದಲ್ಲಿದ್ದ ಹರೀಶ್ವರನ ಗುರುಕುಲದಲ್ಲಿಯೇ ನಡೆಯಿತು. ಹರಿಹರನು ಕವಿ ರಾಘ ವಾಂಕನಿಗೆ ಸೋದರ ಮಾವನೂ ಅಹುದು. ವಿದ್ಯಾಗುರುವೂ ಅಹುದು. ಕವಿಗೆ ಬಾಲ್ಯದಲ್ಲಿ ಮತಧರ್ಮ ಸಂಸ್ಕಾರಗಳಾದ, ಲಿಂಗಧಾರಣ, ಶಿವದೀಕ್ಷಾದಿ ಗಳು, ಗುರು ಹರಿಹರನಿಂದಲೇ ನಡೆದುವು. ಆದುದರಿಂದ ರಾಘವಾಂಕನಿಗೆ ವೀರಶೈವ ಪದ್ಧತಿಯಂತೆ, ಹರಿಹರನು-ವಿದ್ಯಾಗುರು, ದೀಕ್ಷಾಗುರು ಮತ್ತು ಮೋಕ್ಷಗುರು ಎನಿಸಿದ್ದಾನೆ.

ಕವಿಯ ಗ್ರಂಥಗಳು

ರಾಘವಾಂಕ ಪಂಡಿತನು (೧) ಹರಿಶ್ಚಂದ್ರ ಕಾವ್ಯ (೨) ಸಿದ್ಧರಾಮ ಪುರಾಣ (೩) ಸೋಮನಾಥ ಚರಿತೆ (೪) ವೀರೇಶ ಚರಿತೆ (೫) ಶರಭ ಚಾರಿತ್ರ (೬) ಹರಿಹರ ಮಹತ್ವ ಎಂಬ ಆರು ಗ್ರಂಥಗಳನ್ನು ಬರೆದಿದ್ದಾನೆ. ಇವು ಗಳಲ್ಲಿ ಮೊದಲ ನಾಲ್ಕು ಗ್ರಂಥಗಳು ಪ್ರಕಟವಾಗಿವೆ. ಕಡೆಯ ಎರಡು

ಗ್ರಂಥಗಳು ಕಾಲಗರ್ಭದಲ್ಲಿ ಅಡಗಿ ಕೂತಿವೆ. ಇವೆರಡೂ ಗ್ರಂಥಗಳು ಸಿಕ್ಕಿದ್ದರೆ ಕನ್ನಡ ನಾಡಿಗೆ ಮಹೋಪಕಾರವಾಗುತ್ತಿತ್ತು. 'ಹರಿಹರ ಮಹತ್ವ' ಎಂಬುದು ಕವಿಯು ತನ್ನ ಗುರುವಾದ ಹರಿಹರನನ್ನು ಕುರಿತು ಬರೆದಿರುವ ಕಾವ್ಯವೆಂದು ತಿಳಿದು ಬರುವುದರಿಂದ, ಆ ಗ್ರಂಥವು ಕನ್ನಡ ಸಾಹಿತ್ಯ, ಕರ್ಣಾಟಕದ ಚರಿತ್ರೆ ಮತ್ತು ವೀರಶೈವ ಧರ್ಮ ಇವುಗಳ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದುದು. ರಾಘವಾಂಕ ಕಾವ್ಯ, ಪದ್ಮರಾಜ ಪುರಾಣ, ಭೈರವೇಶ್ವರಕಾವ್ಯ, ಕಥಾಸೂತ್ರ ರತ್ನಾಕರ ಮೊದಲಾದ ಗ್ರಂಥಗಳಲ್ಲಿ ಬಂದಿರುವ ಹರಿಹರಕವಿಗೆ ಸಂಬಂಧಪಟ್ಟ ಚರಿತ್ರೆಗೆ, ರಾಘವಾಂಕನ ಹರಿಹರ ಮಹತ್ವವೇ ಆಧಾರವಾಗಿರಬೇಕು. ರಾಘವಾಂಕನಿಗೆ 'ಉಭಯ ಕವಿ ಕಮಲ ರವಿ' ಎಂಬ ಬಿರುದು ಇರುವುದರಿಂದ ಇವನು ಸಂಸ್ಕೃತದಲ್ಲಿಯೂ ಗ್ರಂಥಗಳನ್ನು ರಚಿಸಿರಬೇಕು. ಇಲ್ಲವಾದರೆ ಅವನ ಸಮಕಾಲೀನ ವಿದ್ವಾಂಸರು ಇವನಿಗೆ ಇಂತಹ ಘನವಾದ ಬಿರುದನ್ನು ಕೊಡುವುದಾಗಲಿ, ಅದನ್ನು ಜನರು ಒಪ್ಪಿಕೊಳ್ಳುವುದಾಗಲಿ ಅಸಂಭವ. ಆದುದರಿಂದ ಉಭಯ ಕವಿ ರಾಘವಾಂಕನು ಸಂಸ್ಕೃತದಲ್ಲಿಯೂ ಕೆಲವು ಕಾವ್ಯಗಳನ್ನು ಬರೆದಿರಬೇಕೆಂದು ನಾವು ತರ್ಕಿಸಬಹುದು. ರಾಘವಾಂಕನು ತೆಲುಗಿನಲ್ಲಿಯೂ ಗ್ರಂಥರಚನೆ ಮಾಡಿರಬಹುದು ಎಂದು ಕೆಲವರು ಹೇಳಿದ್ದಾರೆ. * ಆದರೆ ಅತನಿಗೆ ತೆಲುಗಿನ ಸಂಪರ್ಕ ಇತ್ತೆಂಬುದಕ್ಕೆ ಆಧಾರವಿಲ್ಲ. ಅವನು ಓರುಂಗಲ್ಲಿಗೆ ಹೋಗಿ ಬಂದುದು ಅಲ್ಲಿ ರಾಜಾಸ್ಥಾನದಲ್ಲಿ ಕನ್ನಡಕ್ಕೆ ಮನ್ನಣೆ ಇತ್ತೆಂಬ ಕಾರಣದಿಂದ. ಓರುಂಗಲ್ಲಿನ ಲಿಂಗವಂತ ರಾಜರು ತೆಲುಗಿನಂತೆ ಕನ್ನಡವನ್ನೂ ಪ್ರೀತಿಸುತ್ತಿದ್ದರೆಂಬುದು ಇಲ್ಲಿ ಗಮನಾರ್ಹವಾಗಿದೆ. ಅದೇ ಆಸ್ಥಾನದ ಕವಿಯಾಗಿದ್ದ ಪಾಲ್ಕುರಿಕೆ ಸೋಮನಾಥನು ತೆಲುಗು, ಸಂಸ್ಕೃತಗಳಲ್ಲದೆ, ಕನ್ನಡದಲ್ಲಿಯೂ ಗ್ರಂಥಗಳನ್ನು ಬರೆದಿರುವುದು ಇಲ್ಲಿ ಸ್ಮರಣಾರ್ಹವಾಗಿದೆ.

'ರವಿ ಕಾಣದುದನ್ನು ಕವಿ ಕಾಣುವನು' ಎಂದ ರಾಘವಾಂಕನು, ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ ಮತ್ತು ಸೋಮನಾಥ ಚರಿತೆಗಳನ್ನು ವಾರ್ಧಕ ಷಟ್ಪದಿಯಲ್ಲಿಯೂ, ವೀರೇಶ ಚರಿತೆಯನ್ನು

---

* ಮಹಾಕವಿ ರಾಘವಾಂಕ, ಪುಟ ೩೦

ಉದ್ದಂಡ ಷಟ್ಪದಿಯಲ್ಲಿಯೂ ಬರೆವಿದ್ದಾನೆ. ಈಗ ಉಪಲಬ್ಧವಿಲ್ಲದ 'ಹರಿಹರ ಮಹತ್ವ' ಮತ್ತು 'ಶರಭ ಚಾರಿತ್ರ' ಗಳಲ್ಲಿ ಯಾವುದಾದರೊಂದು ಶರ ಷಟ್ಪದಿಯಲ್ಲಿ ರಚಿತವಾಗಿರಬೇಕೆಂದು ಊಹಿಸಬೇಕಾಗಿದೆ. ಅನುಭವ ಶಿಖಾಮಣಿಯನ್ನು ಬರೆದ ನಾರಸಿಂಹನು ತನ್ನ ಕಾವ್ಯದ ಪೀಠಿಕೆಯಲ್ಲಿ 'ರಾಘವಾಂಕನ ಶರ ಷಟ್ಪದಿ ಕಾವ್ಯದ ಮಾರ್ಗವಿಡಿದು ತಾನು ಕಾವ್ಯವನ್ನು ಬರೆಯುವುದಾಗಿ ಪ್ರತಿಜ್ಞೆ ಮಾಡಿರುವುದು' ಮೇಲೆ ಕಂಡ ಊಹೆಗೆ ಆಧಾರ ವಾಗಿವೆ. (ಕ. ಕ. ಚ. ಭಾಗ ೧, ಪುಟ ೧೨೧) ಕನ್ನಡ ಸಾಹಿತ್ಯದಲ್ಲಿ ರಾಘವಾಂಕನೇ ಷಟ್ಪದಿಯಲ್ಲಿ ಕಾವ್ಯಗಳನ್ನು ಬರೆಯಲು ಮೊವಲಿಗನೆಂದೂ, ಷಟ್ಪದಿಯ ಆಚಾರ್ಯ ಪುರುಷನೆಂದೂ ಇದುವರೆಗೆ ನಡೆದ ಸಂಶೋಧನ ದಿಂದ ಸಿದ್ಧವಾಗಿದೆ.

ಕನ್ನಡ ನಾಡಿನ ಗಣ್ಯ ವಿದ್ವಾಂಸರಾಗಿದ್ದ ದಿ|| ಪ್ರೊ|| ಕೆ. ಜಿ. ಕುಂದಣಗಾರರು "ಷಟ್ಪದಿಕಾರ ರಾಘವಾಂಕನಿಗಿಂತ ಪೂರ್ವದಲ್ಲಿ ಷಟ್ಪದೀ ಕಾವ್ಯಗಳು ಇದ್ದಬಗ್ಗೆ ಆಧಾರಗಳು ದೊರೆತಿಲ್ಲ. ಷಟ್ಪದಿಗಳು ಮಾತ್ರ ಜನರ ಬಾಯಲ್ಲಿದ್ದುವು. ಮತ್ತು ಈಗಲೂ ಇರುವ ತ್ರಿಪದಿಗಳು ಇದನ್ನು ಪುಷ್ಟೀಕರಿಸುತ್ತವೆ.........ಷಟ್ಪದಿಗಳು ಸಂಗೀತಕ್ಕೆ ಸೇರಿದ ವಿಷಯಗಳಾದು ದರಿಂದ ರಾಘವಾಂಕನವರೆಗೆ ಕಾವ್ಯರಚನೆಗೆ ಅದನ್ನು ಯಾರೂ ಉಪ ಯೋಗಿಸಿದಂತೆ ತೋರಲಿಲ್ಲ. ಅವು ಜನರಬಾಯಲ್ಲಿದ್ದಿರಬಹುದು. ಅದಕ್ಕೆ ಆಧಾರವೂ ದೊರೆಯುತ್ತದೆ. ೧೨ ನೇ ಶತಮಾನದ ಜಯದೇವ ಕವಿ 'ಗೀತಗೋವಿಂದ' ದಲ್ಲಿ ಶರ, ಕುಸುಮ ಷಟ್ಪದಿಗಳನ್ನು ಉಪ ಯೋಗಿಸಿರುವನು. ಚಂದ್ರರಾಜನು (ಸು. ೧೦೭೫) ತನ್ನ ಮದನತಿಲಕ ದಲ್ಲಿ ಶರಷಟ್ಪದಿಯನ್ನು ಹೇಳಿದ್ದಾನೆ. ಚೆನ್ನಬಸವಣ್ಣನವರು ಕುಸುಮ- ಭೋಗಷಟ್ಪದಿಗಳನ್ನು ಉಪಯೋಗಿಸಿದ್ದಾರೆ. ಪರಿವರ್ಧಿನೀ ಷಟ್ಪದಿಯೂ ಆಗ ವ್ಯವಹಾರದಲ್ಲಿದ್ದಂತೆ ತೋರುತ್ತದೆ.

ಚಂದ್ರರಾಜನಿಂದ-ರಾಘವಾಂಕನವರೆಗೆ ಸುಮಾರು ೧೨೦ ವರ್ಷಗಳ ಅವಧಿಯಲ್ಲಿ ಷಟ್ಪದಿಗಳು ವಿಕಾಸಗೊಂಡಿವೆ. ಈಗ ಉಪಲಬ್ಧವಿರುವ ಸಾಹಿತ್ಯೇತಿಹಾಸದಿಂದ ರಾಘವಾಂಕನೇ ವಾರ್ಧಿಕ ಷಟ್ಪದಿಯಲ್ಲಿ ಆದಿ ಕವಿ

ಯೆಂದು ಹೇಳಬಹುದು. ಆದುದರಿಂದ ಕವಿಚರಿತ್ರೆ (ಭಾಗ ೧, ಪುಟ ೨೪೫) ಯಲ್ಲಿ ಹೇಳಿರುವ "ಷಟ್ಪದೀ ಕಾವ್ಯ ಬರೆಯುವುದಕ್ಕೆ ರಾಘವಾಂಕನೇ ಆದಿಕವಿಯೆಂದು ವೀರಶೈವ ಗ್ರಂಥಗಳಲ್ಲಿ ಹೇಳಿದೆ. ಇದು ಚರ್ಚಾಸ್ಪದ ವಿಷಯವು" ಎಂಬುದು ಮೇಲಿನ ವಿವೇಚನೆಯಿಂದ ನೆಲ ಊರಿ ನಿಲ್ಲುವುದಿಲ್ಲವೆನ್ನಬಹುದು" ಎಂದು ಹೇಳಿದ್ದಾರೆ. (ಕುಂದಣ, ಪುಟ-೧೨೫-೧೩೭) ಆದುದರಿಂದ ಬೇರೆ ಪ್ರಮಾಣಗಳು ಸಿಗುವವರೆಗೆ ರಾಘವಾಂಕನೇ ಷಟ್ಪದೀಕಾವ್ಯ ನಿರ್ಮಾತೃಗಳಲ್ಲಿ ಮೊದಲಿಗನೆಂದು ನಾವು ತಿಳಿಯಬಹುದು. ಇದೂ ಅಲ್ಲದೆ,"ರಾಘವಾಂಕನು ಷಟ್ಪದಿ ನಿರ್ಮಾಪಕನೆಂದು ಹೇಳಲಾಗದಿದ್ದರೂ 'ಷಟ್ಪದೀ ಸಂಪ್ರದಾಯ ಸ್ಥಾಪಕನೆಂದು' ಹೇಳಬಹುದು" ಎಂದು ಹರಿಶ್ಚಂದ್ರ ಕಾವ್ಯ ಸಂಗ್ರಹದ (ಹ. ಕಾ. ಸಂ. ಪೀಠಿಕೆ, ಪುಟ ೫೪) ಸಂಪಾದಕರಾದ ದಿ|| ಪ್ರೊ||. ಟಿ. ಎಸ್. ವೆಂಕಣ್ಣಯ್ಯನವರು ಮತ್ತು ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳು ಹೇಳಿದ್ದಾರೆ.

ಹರಿಶ್ಚಂದ್ರ ಕಾವ್ಯವು ಕರುಣರಸ ಪ್ರಧಾನವಾಗಿಯೂ, ಸಿದ್ಧರಾಮ ಪುರಾಣವು ಭಕ್ತಿರಸ ಪ್ರಧಾನವಾಗಿಯೂ, ಸೋಮನಾಥ ಚರಿತೆಯು ಶೃಂಗಾರ ಮತ್ತು ಕರುಣರಸ ಪೂರ್ಣವಾಗಿಯೂ, ವೀರೇಶ ಚರಿತೆಯು ವೀರ ರಸಪ್ರಧಾನವಾಗಿಯೂ ಇವೆ. ಇವನ ಶೈಲಿ ನಾರಿಕೇಳ ಪಾಕವೂ ಅಲ್ಲ. ದ್ರಾಕ್ಷಿಯ ಹಣ್ಣನ್ನು ಚಪ್ಪರಿಸಿದಂತೆ ಸುಲಭವಾದ ದ್ರಾಕ್ಷಾಪಾಕವೂ ಅಲ್ಲ. ಬಾಳೆಯ ಹಣ್ಣನ್ನು ಸುಲಿದು ತಿಂದಂತೆ ಸರಳವಾದ ಕದಳೀ ಪಾಕವಾಗಿ ಸುಲಭವಾಗಿದೆ. ಆದುದರಿಂದಲೇ ಕನ್ನಡದಲ್ಲಿ ಮುಂದೆ ಪ್ರಸಿದ್ಧರಾದ, ಭೀಮಕವಿ, ಚಾಮರಸ, ವಿರೂಪಾಕ್ಷ, ಪದ್ಮಣಾಂಕ, ಲಕ್ಷ್ಮೀಶ, ಕುಮಾರ ವ್ಯಾಸ, ಕನಕದಾಸ, ಮಲ್ಲಣಾರ್ಯಾದಿ ಮಹಾಕವಿಗಳೆಲ್ಲರೂ ರಾಘವಾಂಕನ ಸುಲಭ ಸುಂದರವಾದ ವರ್ಣಕ (ಷಟ್ಪದಿ) ಶೈಲಿಯಲ್ಲಿಯೇ ತಮ್ಮ ಗ್ರಂಥಗಳನ್ನು ಬರೆದು ಲೋಕೋಪಕಾರ ಮಾಡಿದ್ದಾರೆ.

ಇವನ ಕಾವ್ಯದಲ್ಲಿ ಆಗಿನ ಕಾಲದಲ್ಲಿ ಜನರ ಬಳಕೆಯಲ್ಲಿದ್ದ 'ನಾಣ್ಣುಡಿಗಳು' ಹೆಚ್ಚಾಗಿ ಸೇರಿವೆ. ಆದುದರಿಂದ ದೇಸಿಯ ಬೆಡಂಗನ್ನು ಇಲ್ಲಿ ನಾವು ಕಾಣಬಹುದು. ಶೈಲಿಯಲ್ಲಿ-ಕನ್ನಡ-ಸಂಸ್ಕೃತ ಶಬ್ದಗಳು

ಹದವರಿತು ಬಂದಿವೆ. ಉತ್ಪ್ರೇಕ್ಷೆ, ಶ್ಲೇಷೆ ಮೊದಲಾದ ಅಲಂಕಾರಗಳು ಕಡಿಮೆಯಾಗಿ, ದೃಷ್ಟಾಂತ, ಸ್ವಭಾವೋಕ್ತಿ, ಉಪಮೆ ಮೊದಲಾದ ಅಲಂಕಾರ ಗಳು ಹೆಚ್ಚಾಗಿವೆ. ಮುಖ್ಯವಾಗಿ ರಾಘವಾಂಕನು ತನ್ನ ಕಾವ್ಯಗಳಿಂದ ಕೇವಲ ರಾಜಾಸ್ಥಾನಗಳನ್ನು ಮೆಚ್ಚಿಸುವ ಧ್ಯೇಯವನ್ನಿಟ್ಟು ಕೊಳ್ಳದೆ, ಜನಸಾಮಾನ್ಯರ ಏಳಿಗೆಯ ದೃಷ್ಟಿಯನ್ನೂ ಇಟ್ಟುಕೊಂಡು ಬರೆದನೆಂಬುದಕ್ಕೆ ಅವನು ಕೈಗೊಂಡ ಷಟ್ಪದೀಶೈಲಿಯು ನಿದರ್ಶನವಾಗಿದೆ. ರಾಘವಾಂಕನ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೊಸಮಾರ್ಗವನ್ನು ಕಂಡುಹಿಡಿದ ಹಾಗೂ ಕ್ರಾಂತಿಕಾರಕನಾದ ಮಹಾಕವಿಯೆಂದು ಹೇಳಬಹುದು. ರಾಘ ವಾಂಕನು ತಾನು ಕೃತಿ ರಚಿಸಿದುದು 'ಜನ ಬದುಕಬೇಕು' ಎಂಬುದಕ್ಕಾಗಿ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. (ಹ.ಕಾ. ಸ್ಥಲ ೧೪, ಪದ್ಯ ೨೯) 'ಕೂಡಲ ಸಂಗನ ಶರಣರು ಸಕಲಜೀವಾವಳಿಯ ಲೇಸನೇ ಬಯಸುವರು, ಎಂಬ ಬಸವೇ ಶ್ವರನ ನೀತಿಗೆ ಅನುಗುಣವಾಗಿದೆ ರಾಘವಾಂಕನ ಈ ವಿನೂತನ ಘೋಷಣೆ.

ಕವಿಯ ಕಾಲ

ರಾಘವಾಂಕನ ಕಾಲದ ವಿಚಾರದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯ ಗಳು ಬಹಳವಾಗಿವೆ. ಡಾ|| ಕಿಟಲ್ ಕ್ರಿ.ಶ. ೧೨೯೦, ಶ್ರೀ ಆರ್. ನರಸಿಂಹಾ ಚಾರ್ಯ ಕ್ರಿ. ಶ. ೧೧೬೫, ಡಾ|| ವೆಂಕಟಸುಬ್ಬಯ್ಯ ಕ್ರಿ. ಶ. ೧೨೮೦, ಪ್ರೊ|| ಕುಂದಣಗಾರ್ ೧೨೧೬, ದಿ|| ಗೋವಿಂದ ಪೈ, ಕ್ರಿ ಶ. ೧೧೬೦ ರಿಂದ ೧೨೦೦, ಶ್ರೀ ಈ. ಪಿ. ರೈಸ್, ಕ್ರಿ.ಶ. ೧೧೪೧, ಪ್ರೊ|| ಎ.ಆರ್. ಕೃಷ್ಣಶಾಸ್ತ್ರೀ, ಕ್ರಿ.ಶ. ೧೨೯೦, ಶ್ರೀ ಡಿ. ಎಲ್. ನರಸಿಂಹಾಚಾರ್ ಕ್ರಿ. ಶ. ೧೨೦೦, ಶ್ರೀ ಲೂಯಿ ರೈಸ್ ಕ್ರಿ. ಶ. ೧೩೦೦, ಶ್ರೀ ಎಂ. ರಾಮಾನುಜಯ್ಯಂಗಾರ್ ಕ್ರಿ.ಶ. ೧೧೬೫ಕ್ಕೆ ಹಿಂದೆ, ಡಾ|| ಆರ್. ಸಿ. ಹಿರೇಮಠ ಕ್ರಿ. ಶ. ೧೨೫೫. ಈ ಮೇಲೆ ಹೇಳಿದ ಅಭಿಪ್ರಾಯಗಳು ಎಷ್ಟೊಂದು ಭಿನ್ನಾಭಿಪ್ರಾಯಗಳಿಂದ ಕೂಡಿವೆ ಯೆಂಬುದು ಓದುಗರಿಗೆ ಸ್ಪಷ್ಟವಾಗುವಂತಿದೆ. ನಮ್ಮ ಅಭಿಪ್ರಾಯದಲ್ಲಿ ಕನ್ನಡ ಕವಿಚರಿತ್ರೆಕಾರರ ಅಭಿಪ್ರಾಯವೂ ಮಾನ್ಯ ಗೋವಿಂದ ಪೈರವರ ಅಭಿಪ್ರಾಯವೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಗಿ ತೋರುವುದರಿಂದಲೂ, ರಾಘವಾಂಕನ ಜೀವನ ಚರಿತ್ರೆಯನ್ನು ಚೆನ್ನಾಗಿ ಪರಿಶೀಲಿಸುವುದರಿಂದ

ಉಂಟಾದ ಅನುಭವದಿಂದಲೂ ಕ್ರಿ. ಶ. ೧೧೬೫ ರಿಂದ ೧೨೨೦ ರ ವರೆಗೆ ರಾಘವಾಂಕನ ಜೀವಿತ ಕಾಲ ಆಗಿರಬಹುದೆಂದು ತೋರಿಬಂದಿದೆ.

ಕವಿಯ ಮತ

ರಾಘವಾಂಕನು ವೀರಶೈವನೆಂಬುದಕ್ಕೆ ಅವನ ಕಾವ್ಯಗಳಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಆದರೂ ಕೆಲವು ವಿದ್ವಾಂಸರು ಇವನು ವೀರಶೈವನಲ್ಲವೆಂದು ವಾದಿಸಿರುವುದು ಆಶ್ಚರ್ಯಕರವಾಗಿದೆ. ಶಿವಾಧಿಕ್ಯವನ್ನು ಸಾರುವ, ಶಿವಶರಣರನ್ನು ಹೊಗಳುವ, ಕೇವಲ ವೀರಶೈವ ಕವಿಗಳಿಂದ ಮಾತ್ರ ಶ್ಲಾಘಿಸಲ್ಪಟ್ಟಿರುವ ಈ ಕವಿಯು ವೀರಶೈವನಲ್ಲದೆ ಮತ್ತಾರು? ರಾಘವಾಂಕನ ಲಿಂಗವಂತಿಕೆಗೆ ಹೆಜ್ಜೆಹೆಜ್ಜೆಗೆ ನಿದರ್ಶನಗಳಿವೆ. ಈಗ ಒಂದೆರಡನ್ನು ಮಾತ್ರ ಗಮನಿಸೋಣ.

ಸೋಮನಾಥ ಚರಿತೆಯಲ್ಲಿ ಪಾರಿಸಶೆಟ್ಟಿಯ ಮಗಳಾದ ಪದ್ಮಾವತಿಗೆ ಓಜೇಶ್ವರದ ಆಚಾರ್ಯರಿಂದ ಲಿಂಗಧಾರಣ ಮಾಡಿಸಿ ಆದಿಶೆಟ್ಟಿಗೆ ಮದುವೆ ಮಾಡಿಸುವುದು, ವೀರೇಶ ಚರಿತೆಯಲ್ಲಿ ದಕ್ಷನ ಯಾಗಶಾಲೆಯನ್ನು ಹೋಲೆಗೇರಿಗೆ ಹೋಲಿಸುವುದು, ವೀರೇಶ ಚರಿತೆ ಮತ್ತು ಶರಭ ಚರಿತೆಗಳಲ್ಲಿ ಕೇವಲ ಶಿವಾಧಿಕ್ಯವನ್ನು ಸಾಧಿಸುವುದು, ವಿಷ್ಣುಭಕ್ತನಾದ ಹರಿಶ್ಚಂದ್ರನನ್ನು ಶಿವಭಕ್ತನಾಗಿ ಪರಿವರ್ತಿಸುವುದು ಇತ್ಯಾದಿ ಸಂದರ್ಭಗಳು ರಾಘವಾಂಕನ ಲಿಂಗವಂತಿಕೆಗೆ ಪ್ರಬಲವಾದ ಸಾಕ್ಷಿಗಳಾಗಿವೆ. ಲಿಂಗಧಾರಣವೂ ಯಜ್ಞವಿರೋಧವೂ ಕವಿಯ ಲಿಂಗವಂತಿಕೆಗೆ ನಿಜಕ್ಕೂ ಬಲವಾದ ಹೆಗ್ಗುರುತುಗಳು.

ಕೆಲವು ಮುಖ್ಯ ಸಂಗತಿಗಳು

ರಾಘವಾಂಕನು ಹಂಪೆಯ ದೇವರಾಯ, ಓರುಂಗಲ್ಲಿನ ಪ್ರತಾಪರುದ್ರ ಮಹಾರಾಜ, ಬೇಲೂರಿನ ಬಲ್ಲಾಳರಾಯ ಇವರುಗಳ ಆಸ್ಥಾನದಲ್ಲಿ ಗೌರವಾನ್ವಿತನಾದನು. ಬೇಲೂರಿನಲ್ಲಿ ಕೆರೆಯ ಪದ್ಮರಸನಿಂದ ತತ್ತ್ವೋಪದೇಶವನ್ನು ಹೊಂದಿ ತನ್ನ ಜೀವಿತದ ಕಡೆಗಾಲವನ್ನು–ಹರಿಹರನ ಅಪ್ಪಣೆ ವಿಡಿದು–ಬೇಲೂರಿನಲ್ಲಿಯೇ ಗುರು ಪದ್ಮರಸನ ಸನ್ನಿಧಿಯಲ್ಲಿ ಕಳೆದನು. ಕಡೆಗೆ ಬೇಲೂರಿನಲ್ಲಿಯೇ ಅವನು ಸಮಾಧಿಸ್ಥನಾದನು.

ಬೇಲೂರಿನಲ್ಲಿ ಪದ್ಮರಸನಿಗೂ ತ್ರಿಭುವನ ತಾತಸಿಗೂ ನಡೆದ ವಾದದಲ್ಲಿ ಗುರು ಪದ್ಮರಸನ ಪಕ್ಷವನ್ನು ವಹಿಸಿದ್ದನು. (ಕ. ಕ. ಚ. ಭಾಗ-೧

ಪುಟ ೨೪೭) ಓರುಂಗಲ್ಲಿನಲ್ಲಿ ವಿದ್ಯಾಮದದಿಂದ ಕೂಡಿದ್ದ, ಏಕಸಂಧಿಗ್ರಾಹಿ, ದ್ವಿಸಂಧಿಗ್ರಾಹಿ, ತ್ರಿಸಂಧಿಗ್ರಾಹಿ ಎಂಬ ಪಂಡಿತರ ಗರ್ವಭಂಗ ಮಾಡಿದನು. ಪಂಪಾ ವಿರೂಪಾಕ್ಷನನ್ನು ತನ್ನ ಭಕ್ತಿ ಸಾಮರ್ಥ್ಯದಿಂದ ಸಾಕ್ಷಾತ್ಕಾರ ಮಾಡಿಕೊಂಡನು. ಇತ್ಯಾದಿ ವಿಚಾರಗಳು ಕವಿಯ ಜೀವನಚರಿತ್ರೆಯಲ್ಲಿ ನೆನಪಿಡತಕ್ಕ ಸಂಗತಿಗಳಾಗಿವೆ. ಬೇಲೂರಿನಲ್ಲಿ ಕವಿಯ ಸಮಾಧಿಯು ಈಗಲೂ ಇದೆ.

ವೀರೇಶ ಚರಿತೆ

ರಾಘವಾಂಕನ ವೀರೇಶ ಚರಿತೆಗೆ ಆಧಾರಗ್ರಂಥವು ಮಹಾಕವಿ ಹರೀಶ್ವರನ ರಘಟಾಪ್ರಬಂಧದಲ್ಲಿರುವ 'ವೀರಭದ್ರದೇವರ ರಗಳೆ'. ಗುರು ಹರಿಹರನು ಲಲಿತ ರಗಳೆಯಲ್ಲಿ ಬರೆದ ವೀರಭದ್ರನ ಚರಿತೆಯನ್ನು, ಶಿಷ್ಯ ರಾಘವಾಂಕನು ಉದ್ದಂಡ ಷಟ್ಪದಿಯಲ್ಲಿ ಬರೆದಿದ್ದಾನೆ ಈ ಕಾವ್ಯದಲ್ಲಿ ೧೨೭ ಪದ್ಯಗಳಿವೆ. ಎರಡು ಸಂಧಿಗಳಿವೆ. ಶಿವದ್ವೇಷಿಯಾಗಿ ಯಾಗವನ್ನು ನಡೆಸುತ್ತಿದ್ದ ದಕ್ಷಬ್ರಹ್ಮನನ್ನು ಶಿವನ ಹಣೆಗಣ್ಣಿನಲ್ಲಿ ಹುಟ್ಟಿದ ವೀರಭದ್ರನು ನಾಶ ಮಾಡಿದ ಕತೆಯು ಇಲ್ಲಿ ಚಿತ್ರಿತವಾಗಿದೆ. ಈ ಕಥೆಯು, ಸ್ಕಾಂದಪುರಾಣ, ಶಿವಪುರಾಣ, ವಾಯವೀಯ ಸಂಹಿತೆ, ಲಿಂಗ ಪುರಾಣ, ಭಾರತ ಮತ್ತು ಭಾಗವತಾದಿ ಪ್ರಾಚೀನ ಪುರಾಣಗಳಲ್ಲಿ ಅಭಿವರ್ಣಿತವಾಗಿದೆ. ಕಥಾವಸ್ತುವು ಸ್ಕಾಂದಾದಿ ಪುರಾಣಗಳಿಂದ ಸಂಗ್ರಹಿಸಲ್ಪಟ್ಟಿದೆ. ಮೊದಲು ಇದನ್ನು ಕನ್ನಡದಲ್ಲಿ ಬರೆದವನು ಹರಿಹರನು. ಅನಂತರ ಅದನ್ನು ಷಟ್ಪದಿಯ ಶೈಲಿಯಲ್ಲಿ ರಚಿಸಿದವನು ರಾಘವಾಂಕನು. ಮುಂದೆ, ಕವಿ ವೀರಭದ್ರ ರಾಜನು (ಕ್ರಿ. ಶ. ೧೫೩೦) 'ವೀರಭದ್ರ ವಿಜಯ' ಎಂಬ ಗ್ರಂಥವನ್ನು ಚಂಪೂಶೈಲಿಯಲ್ಲಿ ರಚಿಸಿರುವುದು ಸರ್ವಶ್ರುತವಾಗಿದೆ. ಸಂಸ್ಕೃತದಲ್ಲಿ ವೀರಭದ್ರನನ್ನು ಕುರಿತಾದ ಕಾವ್ಯಗಳಿವೆ. ಮಹಾಕವಿ ಷಡಕ್ಷರದೇವನು, (೧೬೫೫) ವೀರಭದ್ರ ದಂಡಕ, ಉದಾಹರಣ ಗದ್ಯ ಮೊದಲಾದುವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ತೆಲುಗಿನಲ್ಲಿ ಬಮ್ಮೆರ ಪೋತನಾಮಾತ್ಯನೆಂಬ ಮಹಾ ಕವಿಯು* 'ವೀರಭದ್ರ ವಿಜಯಮು' ಎಂಬ ಚಂಪೂ ಗ್ರಂಥವನ್ನು ಬರೆದಿದ್ದಾನೆ. ಅದು ಆಂಧ್ರ ಸಾಹಿತ್ಯದಲ್ಲಿ ಸುಪ್ರಸಿದ್ಧವಾಗಿದೆ.

---

* ಕ್ರಿ.ಶ. ೧೩೦೦-೧೩೭೦. ಆಂಧ್ರ ಕವುಲ ಚರಿತ್ರಮು, ಪುಟ ೫೫೧.

ವೀರೇಶ ಚರಿತೆಯ ಛಂದಸ್ಸು ಇದು ವರೆಗೆ ಕನ್ನಡಿಗರಿಗೆ ಪರಿಚಯವಿಲ್ಲದುದಾಗಿದೆ. ಈ ಷಟ್ಪದಿಯ ೧-೨-೪-೫ ನೇ ಪಾದಗಳಲ್ಲಿ ಮೂರು ಮಾತ್ರೆಯ ೫ ಗಣಗಳೂ, ೩ ಮತ್ತು ೬ ನೆಯ ಪಾದಗಳಲ್ಲಿ ೪ ಮಾತ್ರೆಯ ೮ ಗಣಗಳೂ ಬರುತ್ತವೆ. ಪದ್ಯಗಳನ್ನು ಓದುವಾಗ ಒಂದು ಬಗೆಯ ಗತಿಯೂ, ಆವೇಶವೂ, ಸ್ಫೂರ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಇದು ವೀರರಸದ ದೇವತೆಯಾದ ವೀರಭದ್ರನಿಗೆ ಅನುಗುಣವಾದ ಶೈಲಿಯೆಂದು ಹೇಳಬಹುದು. ಕವಿಯು ಈ ಗ್ರಂಥಕ್ಕೆ 'ಮೊಸಲು ಕವಿತೆ' ಎಂಬ ಮತ್ತೊಂದು ಹೆಸರಿಟ್ಟಿದ್ದಾನೆ. ಪ್ರಾಚೀನ ವೀರಶೈವ ಗ್ರಂಥಗಳಲ್ಲಿ ಇದನ್ನು 'ಕವಿಮುಖ ಕವಾಟಶಾಸ್ತ್ರ' ಎಂದು ಹೇಳಿದೆ. (ಭೈ. ಕಾ. ಕ. ರ. ಭಾಗ ೧, ಪುಟ ೪೩) ರಾಘವಾಂಕನು ಷಟ್ಪದಿಗಳಲ್ಲಿ ಹೊಸಹೊಸ ಪ್ರಯೋಗಗಳನ್ನು ನಡೆಸುತ್ತಿದ್ದನೆಂಬುದಕ್ಕೆ ಈ ಗ್ರಂಥವು ನಿದರ್ಶನವಾಗಿದೆ. ಈ ಗ್ರಂಥದ ನಾಂದೀ ಪದ್ಯವು ಹರಿಶ್ಚಂದ್ರ ಕಾವ್ಯದ ನಾಂದೀಪದ್ಯವನ್ನು ಬರೆಯಲು ಮೊದಲ ಪ್ರಯತ್ನವೆಂಬಂತಿದೆ.

ರಾಘವಾಂಕನ ಕಾವ್ಯಗಳನ್ನು ಚೆನ್ನಾಗಿ ಪರಿಶೀಲಿಸಿದರೆ ಮೊಟ್ಟಮೊದಲು ವೀರೇಶ ಚರಿತೆಯನ್ನೂ, ಅನಂತರ ಸೋಮನಾಥ ಚರಿತೆ ಮತ್ತು ಸಿದ್ಧರಾಮ ಪುರಾಣಗಳನ್ನೂ, ಕಟ್ಟಕಡೆಯಲ್ಲಿ ಹರಿಶ್ಚಂದ್ರ ಕಾವ್ಯವನ್ನೂ ರಚಿಸಿರಬೇಕೆಂದು ತೋರುತ್ತದೆ. ಕವಿಚಕ್ರವರ್ತಿ ರನ್ನನ 'ಗದಾಯುದ್ಧದಂತೆ' ಹರಿಶ್ಚಂದ್ರ ಕಾವ್ಯವು ನಾಟಕೀಯತೆಗೆ ಹೆಸರಾದ ಇನ್ನೊಂದು ಕಾವ್ಯ. 'ಗದಾಯುದ್ಧ ನಾಟಕ' ಸಿದ್ಧವಾಗಿರುವಂತೆಯೇ 'ಹರಿಶ್ಚಂದ್ರಕಾವ್ಯ ನಾಟಕವೂ' ಪ್ರಸಿದ್ಧವಾಗಿದೆ.* ರಾಘವಾಂಕನ ಮತ್ತೆರಡು ಕೃತಿಗಳಾದ ಹರಿಹರ ಮಹತ್ವ ಹಾಗೂ ಶರಭ ಚಾರಿತ್ರಗಳು ಹರಿಶ್ಚಂದ್ರ ಕಾವ್ಯಕ್ಕೆ ಮೊದಲೋ ವೀರೇಶಚರಿತೆಯ ಅನಂತರವೋ ರಚನೆಯಾಗಿರಬೇಕು. ಉದ್ದಂಡ, ಶರ ಷಟ್ಪದಿಗಳಲ್ಲಿ ಕೃತಿರಚನೆ ಮಾಡಿದಮೇಲೆ ಕವಿಯು ತನ್ನ ಮೂರು ಮಹಾಕಾವ್ಯಗಳನ್ನು ಸುಪ್ರೌಢವಾದ ವಾರ್ಧಕದಲ್ಲಿ ರಚಿಸಿರಬೇಕು.

ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥನ ಬಸವಪುರಾಣವು ಪ್ರಥಮ ವೀರಶೈವ ಪುರಾಣವೆನಿಸಿದಂತೆ, ಕನ್ನಡದಲ್ಲಿ ರಾಘವಾಂಕನ ಸಿದ್ಧರಾಮ

* ನಮ್ಮ ಗ್ರಂಥಮಾಲೆಯಲ್ಲಿಯೇ ಅದು ಬೆಳಕು ಕಾಣಲಿದೆ. (ಸಂ)

ಣವು ಅಗ್ರಗಣ್ಯವೆನಿಸಿದೆ. ಸಂಸ್ಕೃತದಲ್ಲಿ ಭವಭೂತಿಯ ಉತ್ತರರಾಮ ತೆಯಂತೆ ಕನ್ನಡದಲ್ಲಿ ಹರಿಶ್ಚಂದ್ರ ಕಾವ್ಯವು ಕರುಣರಸಕ್ಕೆ ಪ್ರಸಿದ್ಧವಾಗಿದೆ.

ರಾಘವಾಂಕನು ತನ್ನ ಕಾವ್ಯಗಳಲ್ಲಿ ತನ್ನ ತಂದೆ ಮಹಾದೇವನೆಂದು ಷ್ಟವಾಗಿ ಹೇಳಿದ್ದಾನೆ. (ಹ. ಕಾ. ಸ್ಥಲ. ೧. ಪ. ೧೩) ತನ್ನ ಗುರು ಪರಂ ಯುಯು, ಹಂಪೆಯ ಶಂಕರಪ್ರಭು, ಹಂಪೆಯ ಮಾದಿರಾಜ, ಹಂಪೆಯ ಹಾದೇವ, ಹಂಪೆಯ ಹರೀಶ್ವರ ಎಂದು ಕ್ರಮವಾಗಿ ಹೇಳಿರುವನು. ರಿಶ್ಚಂದ್ರಕಾವ್ಯ, ಸ್ಥಲ ೧, ಪದ್ಯ ೯, ೧೦, ೧೧, ೧೨) ಕವಿಯು ತನ್ನ ವಿನಲ್ಲಿ ಮಿಗಿಲಾದ ಮಮತೆಯುಳ್ಳವನಾದುದರಿಂದ ತನ್ನನ್ನು 'ಹರಿಹರನ ಸುತ' ಎಂದು ಕೊಂಡಿರುವನು. ರಾಘವಾಂಕನು ತನ್ನ ಕಾವ್ಯಗಳಲ್ಲಿ ಭಟ, ಮಯೂರ, ಕಾಳಿದಾಸ, ಹಲಾಯುಧ, ಕೇಶಿರಾಜ, ಮಲುಹಣ, ಣ, ಭೋಜ, ಭಲ್ಲಟ, ಭಾರವಿ ಎಂಬಿಷ್ಟು ಕವಿಗಳನ್ನು ಸ್ಮರಿಸಿರುವನು. ಕಾ ಸ್ಥಲ ೧, ಪ. ೧೪) ಇವರಲ್ಲಿ ಷಡಕ್ಷರ ಕಂದವನ್ನು ರಚಿಸಿದ ಂಡುಗುಳಿ ಕೇಶಿರಾಜನೊಬ್ಬ ಮಾತ್ರ ಕನ್ನಡಿಗ, ಮತ್ತು ಲಿಂಗವಂತ. ಉಳಿದವರು ಶೈವರಾದ ಸಂಸ್ಕೃತದ ಮಹಾಕವಿಗಳೆನಿಸಿದ್ದಾರೆ.

ಶ್ರೀ ಬಸವಾದಿಗಳನ್ನು ತಮ್ಮ ಕಾವ್ಯಗಳ ಪ್ರಾರಂಭದಲ್ಲಿ ಸ್ಮರಿಸುವ ತಿ ೧೪ ನೆಯ ಶತಕದಿಂದ ಬಂದಿದೆ. ಅಂದರೆ ೧೩ ನೆಯ ಶತಕದಲ್ಲಿ ಈ ತಿ ಬಂದಿರಲಿಲ್ಲವೆಂದು ತೋರುತ್ತದೆ. ಈ ವಿಷಯದಲ್ಲಿ ಭೀಮ ಕವಿಯೇ ದಲಿಗನೆಂದು ತೋರುತ್ತದೆ. (ಕ್ರಿ.ಶ. ೧೩೬೯) ಹರಿಹರ, ರಾಘವಾಂಕ, ಗುಣ, ಪದ್ಮರಸ, ಕುಮಾರ ಪದ್ಮರಸರು ಬಸವಾದಿಗಳನ್ನು ತಮ್ಮ ಗ್ರಂಥ ಆದಿಯಲ್ಲಿ ಸ್ಮರಿಸದಿರುವುದು ಇಲ್ಲಿ ಗಮನಾರ್ಹವಾಗಿದೆ. ಇವರೆಲ್ಲರೂ ಮೂರನೆಯ ಶತಕದ ಪೂರ್ವಾರ್ಧದಲ್ಲಿ ಪ್ರಸಿದ್ಧರಾಗಿದ್ದ ವೀರಶೈವ ಹಾಕವಿಗಳು.

ಮಿಾಸಲುಗವಿತೆ

ವೀರೇಶಚರಿತೆಯ ಛಂದಸ್ಸಿಗೆ ದಂಡಿನ ಶಿಬಿರದ ಪ್ರತಿಯಲ್ಲಿ 'ಮಿಾಸಲು ತೆ' ಎಂದೂ, ರಾಯಚೂರು ಪ್ರತಿಯಲ್ಲಿ 'ಉದ್ದಂಡ ಷಟ್ಪದಿ' ಎಂದೂ ದೆ. ಹಿಂದಿನ ನಾಗವರ್ಮನ ಛಂದಸ್ಸು ಹಿಡಿದು, ಇಂದಿನ ಕನ್ನಡ

ಕೈಪಿಡಿಯುವರೆಗೆ ಯಾವ ಕನ್ನಡ ಛಂದೋಗ್ರಂಥದಲ್ಲಿಯೂ 'ಉದ್ದಂ ಷಟ್ಪದಿ' ಹೆಸರಿಲ್ಲ. 'ಷಟ್ಪದಿಗಳು ಆರು' ಎಂಬುದೇ ಸರ್ವತ್ರ ಪ್ರಚಾರದಲ್ಲಿರು ಸಂಗತಿ. (ಕ. ಕೈ. ಪುಟ, ೧೯೪. ಭಾಗ-೧) ಈಗ ವೀರೇಶಚರಿತೆ ಪ್ರಕ ವಾದ ಮೇಲೆ 'ಷಟ್ಪದಿಗಳು ಏಳು ಬಗೆಯಾಗಿವೆ'ಎಂಬುದು ತಿಳಿದುಬಂದಿತು

ರಾಘವಾಂಕನಾದಮೇಲೆ ಈ ಉದ್ದಂಡ ಷಟ್ಪದಿಯಲ್ಲಿ ಯಾರು ಕಾವ್ಯಗಳನ್ನು ಬರೆದಂತೆ ತೋರುವುದಿಲ್ಲ. ಆದರೆ ರಾಘವಾಂಕ ಚರಿ ಯನ್ನು ಬರೆದ ಹೂಲಿಯ ಕವಿ ಚಿಕ್ಕನಂಜಾಚಾರ್ಯನು ಮಾತ್ರ ತನ್ನ ಕಾವ್ಯ (ಸಂಧಿ ೧೯, ಪದ್ಯ ೪೨)ರಲ್ಲಿ 'ಏಳು ಬಗೆಯ ಷಟ್ಪದಿಗಳು ಅಡಕವಾ ವಾರ್ಧಕಷಟ್ಪದಿ' ಎಂದು ಹೇಳಿ ಒಂದು ಪದ್ಯ ಬರೆದಿದ್ದಾನೆ. ಅಲ್ಲದೆ ಒಂದ ಉದ್ದಂಡ ಷಟ್ಪದಿಯನ್ನೂ ವಿರಚಿಸಿದ್ದಾನೆ. ಆದ್ದರಿಂದ ಕವಿ ಚಿಕ್ಕನಂಜ ಚಾರ್ಯನಿಗೆ 'ಉದ್ದಂಡ ಷಟ್ಪದಿ' ಚೆನ್ನಾಗಿ ತಿಳಿದಿತ್ತೆಂದು ಹೇಳಬಹುದು.

'ಕೃತಿನಾಮಂ ವೀರೇಶ್ವರ ಚರಿತಂ, ಕೃತಿಯಂ ಮುದದಿಂ ಪೇಳ್ದವನ ಯತಿಪತಿ ಹಂಪೆಯ ಹರಿದೇವರ ಕಾರುಣ್ಯದ ಸುತ ಶಿವ ಕವಿಭೃತ್ಯಂ ಹಂಪೆಯ ರಾಘವ ಪಂಡಿತಂ' . ಎಂದು ಕಾವ್ಯದ ಮತ್ತು ಕವಿಯ ಹೆಸರುಗಳನ್ನು ಸ್ಪಷ್ಟವಾಗಿ ಕವಿಯೇ ಹೇಳಿದ್ದಾನೆ. (ಸಂ. ೧, ಪದ್ಯ ೮) ವಿಾಸಲು ಗ ತೆಯ ಚಿತ್ರೈಸುವುದು (ಸಂ. ೧, ಪದ್ಯ ೯) ಎಂಬಲ್ಲಿ ಈ ಗ್ರಂಥಕ್ಕೆ 'ವಿಾಸಲು ಕವಿತೆ' ಎಂಬ ಹೆಸರುಂಟೆಂಬುದನ್ನು ಕವಿ ಸ್ಪಷ್ಟಪಡಿಸಿದ್ದಾನೆ. 'ಕೆಂಡ ತೊಡಿಗೆಗೆ ಮನವಿಟ್ಟರಗಿನ ಪುತ್ತಳಿಯಂತೆ' ಧರಣೀಶನ ಮುಕುಟದ ಮುತ್ತು ತಾಂ ಜನಿಸಿದ ಸಿಂಪಂ ಕಂಡಂತೆ, ಬೆಟ್ಟೇರಿಯೆ ಮೃತ್ಯುವ ಕರೆವಂತೆ, 'ಕನ್ನ ಕುಂದುವುದೇಂ ಕುರುಡಂ ಕಾಣದಿರಲ್ಕೆ' 'ಸುಟ್ಟುದ ಸುಡುವಂತೆ' ಇತ್ಯಾ ಪ್ರಯೋಗಗಳು ಈ ಕಾವ್ಯದ ಸ್ವಾರಸ್ಯವನ್ನು ಹೆಚ್ಚಿಸುವುವಲ್ಲದೆ ಕವಿಯ ಲೋಕಾನುಭವಕ್ಕೆ ಮಿಗಿಲಾದ ನಿದರ್ಶನವಾಗಿವೆ. ಈಗ ವೀರೇಶಚರಿ ಯಲ್ಲಿರುವ ದಕ್ಷ ಮುತ್ತು ದಧೀಚಿ ಸಂವಾದ (ಸಂಧಿ ೧. ಪದ್ಯ ೪೬,೪೭,೪೮,) ವಿದಗ್ಧಮಂತ್ರಿ ಮತ್ತು ದಕ್ಷಬ್ರಹ್ಮ ಇವರ ಸಂವಾದ (ಸಂಧಿ ೧, ಪ. ೨೯, ೩೦, ೩೧) ಕವಿಯ ನಾಟಕೀಯತೆಗೆ ನಿದರ್ಶನವಾಗಿವೆ. ಹರಿಶ್ಚಂದ್ರ ಕಾವ್ಯದಲ್ಲಿರುವಂತೆಯೇ ಇದರಲ್ಲಿಯೂ ನಾಟಕೀಯತೆಯುಂಟು. ಮುಖ್ಯ

ವಾಗಿ ವೀರೇಶಚರಿತೆಯು ಪ್ರಾಚೀನ ಕಾಲದ ಕವಿಗಳ ಒಂದು ಖಂಡ ಕಾವ್ಯಕ್ಕೆ ಒಳ್ಳೆಯ ನಿದರ್ಶನವೆಂಬಂತಿದೆ. ಕನ್ನಡ ಸಾಹಿತ್ಯ ಪ್ರೇಮಿಗಳ ಅವಗಾಹನೆಗೆ ಅರ್ಹವಾಗಿದೆ. ಹರಿಹರನ 'ವೀರಭದ್ರ ದೇವರ ರಗಳೆ' ಗಿಂತಲೂ ರಾಘವಾಂಕನ 'ವೀರೇಶ ಚರಿತೆ' ಹಲವು ಸಂದರ್ಭಗಳಲ್ಲಿ ಸ್ವಾರಸ್ಯವಾಗಿದೆ ಎಂಬುದು ಆಧುನಿಕ ಪಂಡಿತರ ಮತ.

ರಾಘವಾಂಕನ ಘನತೆ

ರಾಘವಾಂಕನು ಕೇವಲ ಕವಿಯೇ ಅಲ್ಲದೆ, ಪವಾಡ ಪುರುಷನೂ ಆಗಿದ್ದನೆಂದು ಆತನ ಚರಿತ್ರೆಯಿಂದ ತಿಳಿದುಬರುತ್ತದೆ. ಕ್ರಿ.ಶ. ೧೬೫೦ರಲ್ಲಿದ್ದ ಬೆಳಗಾವಿ ಜಿಲ್ಲಾ ಹೂಲಿ ಪಂಚವಣ್ಣಿಗೆಯ ಮಠಾಧ್ಯಕ್ಷನಾಗಿದ್ದ ಚಿಕ್ಕ ನಂಜಾರ್ಯ ಎಂಬ ಕವಿಯು 'ರಾಘವಾಂಕ ಕಾವ್ಯ' ಎಂಬ ಗ್ರಂಥವೊಂದನ್ನು ಬರೆದು ಕವಿ ರಾಘವನ ಹಿರಿಮೆಯನ್ನು ಲೋಕಕ್ಕೆ ಸಾರಿ ಹೇಳಿದ್ದಾನೆ. ಅಲ್ಲದೆ ಗುರುರಾಜ ಚಾರಿತ್ರ, ಭೈರವೇಶ್ವರ ಕಾವ್ಯ ಕಥಾಸೂತ್ರ ರತ್ನಾಕರ, ಪದ್ಮರಾಜ ಪುರಾಣ, ಚೆನ್ನಬಸವ ಪುರಾಣ ಮೊದಲಾದ ಪ್ರಾಚೀನ ವೀರಶೈವ ಗ್ರಂಥಗಳಲ್ಲಿ ಈ ಕವಿಯ ಬಗೆಗೆ ಹಲವು ಸ್ವಾರಸ್ಯವಾದ ವಿಷಯಗಳು ನಿರೂಪಿತವಾಗಿವೆ.

ಮಹಾಕವಿ ರಾಘವಾಂಕನು ಕವಿಚಕ್ರವರ್ತಿ ಹರಿಹರನ ಶಿಷ್ಯನೆನಿಸಿದುದು, ಹಂಪೆಯ ವಿರೂಪಾಕ್ಷನ ಸಾನ್ನಿಧ್ಯವನ್ನು ಪಡೆದುದು, ಗುರು ಪದ್ಮರಸನ ಅನುಗ್ರಹಕ್ಕೆ ಪಾತ್ರನಾದುದು, ಹಲವು ರಾಜಾಸ್ಥಾನಗಳಲ್ಲಿ ದಿಗ್ವಿಜಯವನ್ನು ಪಡೆದುದು, ಹರಿಶ್ಚಂದ್ರ ಕಾವ್ಯ ಮೊದಲಾದ ನವರಸದ ಮಡುವಿನಂತಹ ಕಾವ್ಯಗಳನ್ನು ವಿರಚಿಸಿದುದು, ಆಜನ್ಮಪರ್ಯಂತ ನೈಷ್ಠಿಕ ಬ್ರಹ್ಮಚರ್ಯವನ್ನು ಕೈಗೊಂಡುದು, ಕನ್ನಡ ಸಾಹಿತ್ಯದ ಸೇವೆಗೂ ವೀರಶೈವ ಧರ್ಮ ಪ್ರಸಾರಕ್ಕೂ ತನ್ನ ಆಯುಷ್ಯವನ್ನು ಮೀಸಲು ಮಾಡಿದುದು, ಕಡೆಗೆ ಬೇಲೂರಿನಲ್ಲಿ ಗುರು ಪದ್ಮರಸನ ಸನ್ನಿಧಿಯಲ್ಲಿ ಜೀವಂತ ಸಮಾಧಿಯನ್ನು ಪಡೆದುದು ಇತ್ಯಾದಿ ವಿಷಯಗಳು ಮಹಾತ್ಮನೂ ಮಹಾಕವಿಯೂ ಆದ ಈ ರಾಘವಾಂಕನ ಘನತೆಗೆ ಸುಸ್ಪಷ್ಟವಾದ ನಿದರ್ಶನವಾಗಿವೆ,

ಹರೀಶ್ವರ ಕವಿ

'ವೀರಭದ್ರದೇವರ ರಗಳೆ' ಎಂಬ ಕಾವ್ಯವನ್ನು ಬರೆದವನು ಹ ಹರೀಶ್ವರನು. ಇವನು ರಾಘವಾಂಕನ ಗುರುವೆಂಬುದು ಪ್ರ ವಾಗಿಯೇ ಇದೆ. ರಾಘವಾಂಕನು ವೀರೇಶಚರಿತೆ (ಸಂ. ೧. ಪದ್ಯ. ೮) 'ಯತಿಪತಿ ಹಂಪೆಯ ಹರಿದೇವರ ಕಾರುಣ್ಯದ ಸುತ, ಶಿವಕವಿಭೃತ್ಯಂ ಹ ರಾಘವ ಪಂಡಿತಂ" ಎಂದು ಸ್ಪಷ್ಟವಾಗಿ ತಾನು ಹರಿಹರನ ಶಿಷ್ಯ ಹೇಳಿಕೊಂಡಿದ್ದಾನೆ. ಹರಿಹರನು 'ಪಂಪಾಪುರದಸರ ಸಾ ಕ್ಷಾ ಸುಪುತ್ರಂ, (ಗಿ.ಕ. ೧-೩೩) ಎಂದುಕೊಂಡಂತೆ, ರಾಘವಾಂಕನು ತ ಹರಿದೇವರ ಕಾರುಣ್ಯದ ಸುತ, (ವೀ. ಚ. ಸಂಧಿ ೧, ಪ ೮) ಎಂದು ಕೊಂಡಿದ್ದಾನೆ. ಇಲ್ಲಿ 'ಸುತ' ಅಂದರೆ 'ಶಿಷ್ಯ' ಎಂದೇ ನಾವು ಅರ್ಥೈಸ ಗಿದೆ. ಶಿಷ್ಯನಮೇಲೆ ಗುರುವಿನ ವಾತ್ಸಲ್ಯ ಅಧಿಕವಾದರೆ ಅವನು 'ಗರು ಅಥವಾ 'ಸುತ'ಎನಿಸುತ್ತಾನೆ.

ಹರಿಹರ-ರಾಘವಾಂಕರು ಗುರು ಶಿಷ್ಯರು, ಹಾಗೂ ಸಮಕಾಲೀ ಇವರ ಕಾಲ ಮತ್ತು ಮತ ವಿಚಾರಗಳ ಬಗೆಗೆ ಹಲವು ವಿದ್ವಾ ಭಿನ್ನಾಭಿಪ್ರಾಯಗಳಿವೆ. ತಕ್ಕಷ್ಟು ವಾದವಿವಾದಗಳೂ ನಡೆದಿವೆ. ಈ ಉಭಯರೂ ವೀರಶೈವರೆಂದೂ, ಸು. ಕ್ರಿ.ಶ. ೧೧೮೫ ರಿಂದ ಕ್ರಿ ೧೨೧೬ರ ಮಧ್ಯಕಾಲದಲ್ಲಿ ಹಂಪೆಯಲ್ಲಿ ಜೀವಿಸಿದ್ದರೆಂದೂ ವಿದ್ವಾ ನಡೆದ ವಿಪುಲ ಚರ್ಚೆಯಿಂದ ಈಗ ನಿರ್ಧರವಾಗಿದೆ.

ಹರೀಶ್ವರನು ಕನ್ನಡದಲ್ಲಿ ಗಿರಿಜಾಕಲ್ಯಾಣ, ರಕ್ಷಾಶತಕ, ಪ ಶತಕ, ವಿರೂಪಾಕ್ಷಶತಕ, ಮುಡಿಗೆಯ ಅಷ್ಟಕ, ಶಿವಶರಣರ ನೂ ರಗಳೆಗಳುಳ್ಳ 'ರಘಟಾ ಪ್ರಬಂಧ' ಎಂಬ ಕಾವ್ಯಗಳನ್ನು ಬರೆದಿ ಹರಿಹರನು ಸಂಸ್ಕೃತದಲ್ಲಿಯೂ ಗ್ರಂಥಗಳನ್ನು ಬರೆದಿರಬಹುದೆಂಬ ಅನು ಇದೆ. "ಕವಿಚಕ್ರವರ್ತಿ" ಎಂಬ ಬಿರುದನ್ನು ಸಮಕಾಲದಲ್ಲಿ ಧರಿಸಿದ ಸಂಸ್ಕೃತದಲ್ಲಿಯೂ ಕವಿ ಆಗಿರಬೇಕು. ಹರಿಹರನು ಕನ್ನಡ ಜಾಣನಾ ಸಂಸ್ಕೃತ ಪ್ರವೀಣನೂ ಆಗಿರಬೇಕು ಎಂಬುದರಲ್ಲಿ ಸಂಶಯವಿಲ್ಲ. ಇ

ನೈಷ್ಠಿಕ ಬ್ರಹ್ಮಚಾರಿಯೂ, ಶಿವಯೋಗಿಯೂ, ಶಿವಾಚಾರ್ಯನೂ ಆಗಿದ್ದ ನೆಂದು ಪ್ರಾಚೀನ ವೀರಶೈವ ಕವಿಗಳು ಬಣ್ಣಿಸಿದ್ದಾರೆ.

ವೀರಭದ್ರದೇವರ ರಗಳೆಯಲ್ಲಿ ೬೮೨ ಸಾಲುಗಳೂ, ಎರಡು ಕಂದ ಗಳೂ ಇವೆ. ಇದು "ಲಲಿತ ರಗಳೆ"ಯ ಛಂದಸ್ಸಿನಲ್ಲಿ ರಚಿತವಾಗಿದೆ. ರಗಳೆಯ ಕವಿಯಾದ ಹರಿಹರನ ಶೈಲಿಯ ಮಾಧುರ್ಯವನ್ನು ಓದಿಯೇ ತಿಳಿಯುವುದೊಳ್ಳೆಯದು. ಹರಿಹರನ ರಗಳೆಗಳ ಶೈಲಿಯು ಗಂಗೆಯ ಪ್ರವಾಹದಂತೆ ಸುಪ್ರಸನ್ನವೂ, ಮಂದಮಾರುತದಂತೆ ಸ್ಫೂರ್ತಿದಾಯಕವೂ, ಹುಣ್ಣಿಮೆಯ ಬೆಳುದಿಂಗಳಂತೆ ಚೇತೋಹಾರಿಯೂ ಎನಿಸಿದೆ. ಅವನು ಬರೆದಿರುವ ನಂಬಿಯಣ್ಣನ ರಗಳೆ, ಅಕ್ಕಮಹಾದೇವಿಯ ರಗಳೆ, ಬಸವರಾಜ ದೇವರ ರಗಳೆ ಎಂಬಿವು ಈ ಮಾತಿಗೆ ನಿದರ್ಶನವಾಗಿವೆ.

ರಾಘವಾಂಕನ ವೀರೇಶ ಚರಿತೆಗೆ ಮೂಲ ಈ 'ವೀರಭದ್ರದೇವರ ರಗಳೆ' ಎಂಬುದು ಸ್ಪಷ್ಟವಾಗಿಯೇ ಇದೆ. ಮಾವನಾದ ಹರಿಹರನ ಹಲವು ಪದ, ಭಾವಗಳನ್ನು, ಅಳಿಯನಾದ ರಾಘವಾಂಕನು ಧಾರಾಳ ವಾಗಿ ಉಪಯೋಗಿಸಿಕೊಂಡಿದ್ದಾನೆ. ಇದು ಸಹಜವಾಗಿಯೇ ಇದೆ.

ಹರಿಹರನು ವೀರಶೈವ ಕವಿಗಳಲ್ಲಿ ಪ್ರಬಲನೂ, ಪ್ರಾಚೀನನೂ ಎನಿಸಿ ದ್ದಾನೆ. ಪ್ರಸಿದ್ಧಕವಿ ಷಡಕ್ಷರದೇವನು 'ಹರಿಹರನುದಿತಮಾರ್ಗದಿಂದಿದ ನೊರೆವೆಂ (ರಾ. ವಿ. ಆ, ೧. ಪ. ೬೯) ಎಂದು ಹೇಳಿ ಹರಿಹರನಿಗೆ ತಲೆಬಾಗಿ ದ್ದಾನೆ. ಅಲ್ಲದೆ ಅದೇ ಕವಿಯು ತನ್ನ 'ಕವಿಕರ್ಣರಸಾಯನಮ್' ಎಂಬ ಸಂಸ್ಕೃತ ಕಾವ್ಯದಲ್ಲಿ (ಆ. ೧. ಶ್ಲೋ. ೧೪) 'ಹರೀಶ್ವರಸ್ತೇನ ಸಮಃ ಕವಿಃ ಕಃ ?' ಅಂದರೆ ಹರಿಹರನಿಗೆ ಸಮನಾದ ಕವಿ ಯಾರು ? ಎಂದು ಪ್ರಶ್ನಿಸಿ ಹರಿಹರನ ಹಿರಿಮೆಯನ್ನು ಹೆಮ್ಮೆಯಿಂದ ಹೇಳಿದ್ದಾನೆ.

ಮುಖ್ಯವಾಗಿ ಕನ್ನಡ ಸಾಹಿತ್ಯದಲ್ಲಿ ಹರಿಹರನೂ ಅಂತೆಯೇ ರಾಘ ವಾಂಕನೂ ಅನ್ಯಾದೃಶ ಕವಿಗಳೆಂದೂ, ಕ್ರಾಂತಿಕಾರಕ ಕವಿಗಳೆಂದೂ, ಪ್ರತಿಭಾನ್ವಿತ ವಿದ್ವಾಂಸರೆಂದೂ ನಾವು ಧೈರ್ಯವಾಗಿ ಹೇಳಬಹುದಾಗಿದೆ.

ಹರಿಹರನು ಪಂಪಾಕ್ಷೇತ್ರದಲ್ಲಿ ಹುಟ್ಟಿ ಬಳೆದವನು. ಸುಪ್ರಸಿದ್ಧವಾದ ಹಂಪೆಯ ಶಂಕರಪ್ರಭುವಿನ ಗುರುಪರಂಪರೆಯಲ್ಲಿ ಬಂದವನು. ನೈಷ್ಠಿಕ

ಬ್ರಹ್ಮಚರ್ಯವನ್ನು ಅನುಸರಿಸಿದವನು. ಕಾವ್ಯಸಮಾಧಿಯಲ್ಲಿ ಆನಂದ ಸಾಕ್ಷಾತ್ಕಾರವನ್ನು ಪಡೆದವನು. 'ಪಂಪಾಪತಿಯ ಸಾಕ್ಷಾತ್ಸುಪುತ್ರ' ಎಂದು ಹೇಳಿಕೊಳ್ಳುವಷ್ಟು ಶಿವಭಕ್ತಿ ಸಂಪತ್ತಿನಿಂದ ಕೂಡಿದವನು. ತನ್ನ ಯೋಗಶಕ್ತಿಯಿಂದಲೂ, ಶಿವಭಕ್ತಿಯ ಮಾಹಾತ್ಮ್ಯದಿಂದಲೂ, ಹಲವು ಪವಾಡಗಳನ್ನು ಮೆರೆದವನು. ಶಿವಶರಣರ ಮಹಿಮೆಯನ್ನು ಲೋಕದಲ್ಲಿ ಹಬ್ಬಿಸುವ ಜೀವನ ವ್ರತವುಳ್ಳವನು. ತನ್ನಂತೆಯೇ ಪ್ರಸಿದ್ಧನಾದ ಶಿಷ್ಯನನ್ನು ಪಡೆದವನು. ಇಂತಹ ಭಾಗ್ಯಪರಂಪರೆಯಿಂದ ಕೂಡಿದ ಕವಿಯ ಗ್ರಂಥಗಳು ಪ್ರಾಸಾದಿಕ ಶಕ್ತಿಯಿಂದ ಕೂಡಿರುವುದರಲ್ಲಿ ಆಶ್ಚರ್ಯವೇನು?

ಹರಿಹರನು ಹಳೆಯಬೀಡಿನಲ್ಲಿ (ಕ್ರಿ.ಶ. ೧೧೪೧ ರಿಂದ ೧೧೭೩) ವರೆಗೆ ಆಳುತ್ತಿದ್ದ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ಕರಣಿಕರ ಕುಲತಿಲಕನಾಗಿದ್ದನು. (ಕ.ಕ.ಚ. ಭಾಗ-೧ ಪುಟ ೨೪)ಅದೇ ಕಾಲದಲ್ಲಿ ಕೆರೆಯ ಪದ್ಮರಸನು ಬಲ್ಲಾಳನ ಮುಖ್ಯಮಂತ್ರಿಯಾಗಿದ್ದನು ಎಂದು ತಿಳಿದುಬಂದಿದೆ. 'ಕೆರೆಯ ಪದ್ಮರಸನು' ಕನ್ನಡದಲ್ಲಿ 'ದೀಕ್ಷಾಬೋಧೆ' ಎಂಬ ಕಾವ್ಯವನ್ನೂ, ಸಂಸ್ಕೃತದಲ್ಲಿ 'ಸಾನಂದ ಚರಿತಂ' ಎಂಭ ಗ್ರಂಥವನ್ನೂ ಬರೆದಿದ್ದಾನೆ (ಕಿ.ಶ.೧೧೬೫) ಇವನ ಮಗನಾದ ಕುಮಾರ ಪದ್ಮರಸನು ತನ್ನ ತಂದೆಯು ಸಂಸ್ಕೃತ ಭಾಷೆಯಲ್ಲಿ ಬರೆದ ಸಾನಂದ ಚರಿತೆಯುನ್ನು ಕನ್ನಡ ಷಟ್ಪದೀ ಶೈಲಿಯಲ್ಲಿ ಬರೆದಿದ್ದಾನೆ. (ಕ್ರಿ.ಶ. ೧೧೮೦) ಹರಿಹರನಿಗೆ ರಗಳೆಯಲ್ಲಿ ಕಾವ್ಯಗಳನ್ನು ಬರೆಯಲು ಕೆರೆಯ ಪದ್ಮರಸನೂ, ರಾಘವಾಂಕನಿಗೆ ಷಟ್ಪದಿಗಳಲ್ಲಿ ಕಾವ್ಯಗಳನ್ನು ಬರೆಯಲು ಕುಮಾರ ಪದ್ಮರಸನೂ ಮಾರ್ಗದರ್ಶಕರಾಗಿರಬಹುದೇ? ಎಂದು ಹಲವರು ತರ್ಕಿಸುತ್ತಾರೆ. 'ದೀಕ್ಷಾಬೋಧೆ' ಮತ್ತು 'ಸಾನಂದ ಚರಿತೆಗಳು' ಪ್ರಕಟವಾದರೆ ಈ ಬಗೆಗೆ ವಿಚಾರ ವಿಮರ್ಶೆ ನಡೆಯಲು ಹೆಚ್ಚು ಸಹಾಯವಾಗುತ್ತದೆ. A.

A ಶಂ.ಸಾ.ಗ್ರಂ. ಮಾಲೆಯಲ್ಲಿಯೇ ಮೇಲಿನ ಎರಡೂ ಗ್ರಂಥಗಳನ್ನು ಪ್ರಕಟಿಸಬೇಕೆಂಬ ಬಯಕೆಯಿದೆ. ಆ ಗ್ರಂಥಗಳು ಈಗ ಮುದ್ರಣಕ್ಕೆ ಸಿದ್ಧವಾಗಿಯೂ ಇವೆ. ಉದಾರ ಚಿತ್ತರೂ, ಸಾಹಿತ್ಯ ಪ್ರಿಯರೂ ಆದ ಮಹನೀಯರು ಮುಂದೆ ಬಂದು ಆಸಕ್ತಿ ತೋರಿದರೆ ಈ ಕಾರ್ಯವಾಗುತ್ತದೆ. (ಸಂ.)

ಹರಿಹರ–ರಾಘವಾಂಕರು ಪಂಪ–ರನ್ನರಂತೆ ತಮಗೆ ಆಶ್ರಯವಿತ್ತ ರಾಜರನ್ನು ದೇವರಿಗೆ ಹೋಲಿಸಿ ಕಾವ್ಯ ಬರೆಯುವ ಪಂಥಕ್ಕೆ ಸೇರಿದವರಲ್ಲ. ಶರಣ ಕವಿ ಹರಿಹರನು ತನ್ನ ಪಂಪಾಶತಕದಲ್ಲಿ

ವೃತ್ತ॥ ಮನುಜರಮೇಲೆ ಸಾವವರಮೇಲೆ ಕನಿಷ್ಠರಮೇಲೆ ಪದ್ಯಮಂ ।
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ನೀ ।
ನನವರತಂ ಪೊಗಳ್ದು ಕೆಡಬೇಡೆಲೆಮಾನವ ನೀನಹರ್ನಿಶಂ ।
ನೆನೆ ಪೊಗಳ್ ಅರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ
ಹಂಪೆಯಾಳ್ದನಂ॥ (ಪಂ. ಶ. ೮೨)

ಎಂದು ಕ್ರಾಂತಿಯ ಧ್ವಜವೆತ್ತಿದನು. ಮುಂದಿನ ವೀರಶೈವ ಕವಿಗಳಾದ, ರಾಘವಾಂಕ, ಪದ್ಮಣಾಂಕ, ಭೀಮಕವಿ, ಚಾಮರಸ, ಸುರಂಗ, ಸೋಮರಾಜ, ವಿರೂಪಾಕ್ಷ, ತೋಂಟದಾರ್ಯ, ಮಲ್ಲಣಾರ್ಯ, ಷಡಕ್ಷರದೇವ ಮೊದಲಾದವರು ಈ ಮಾರ್ಗವನ್ನು ಮುಂದು ವರಿಸಿದರು. ಷಡಕ್ಷರಿಯು 'ಪೊಗಳೆನುಳಿದ ಸುರರಂ ನರರಂ'(ರಾ.ವಿ.ಆ. ೧, ಪ ೨೨) ಎಂದು ಹೇಳಿರುವನು. ಹರಿಹರನ ವರಸುತನಾದ ರಾಘವಾಂಕನು

ಎನಿತು ಸಿರಿ ಸಾರ್ವಡಂ ಮಾಣ್ದಡಂ ನಿತ್ಯತ್ವ ।
ವನುವಪ್ಪೊಡಂ ಸಾವಡಂ ಮತ್ತೆ ಹಂಪೆಯರ ।
ಸನ ಪೊಗಳ್ವ ನಾಲಗೆಯೊಳನ್ಯದೈವವಂ ಭವಿಗಳಂ
ಕೀರ್ತಿಸಿದೆ ನಾದಡೆ ॥

ಮನಸಿಜಾರಿಯ ಭಕ್ತನಲ್ಲ .... (ಹ.ಕಾ. ಸ್ಥಲ ೧. ಪ ೩೨.) ಎಂದು ಕೈ ಎತ್ತಿ ಸಾರಿ ಹೇಳಿರುವನು. ಕನ್ನಡ ಸಾಹಿತ್ಯದಲ್ಲಿ ಇದೊಂದು ಅಪೂರ್ವ ಕವಿ ಪರಂಪರೆಯೆನ್ನಬಹುದು. 'ಜಗವರಿಯೆ ಸುರಂಗಕವಿ ನಾಲಗೆಯಂ ಗಿರಿಶಂಗೆ ಮಾರಿದಂ' ಎಂಬ ಕವಿಚಕ್ರವರ್ತಿ ಸುರಂಗ ಕವಿ ಕೂಡ ಈ ಜಾತಿಗೇ ಸೇರಿದವನಾಗಿದ್ದಾನೆ. (ತ್ರಿ. ಪು. ವಿ. ಆ. ೧, ಪ ೨೯)

ರಾಘವಾಂಕನ ನೀತಿ ಕನ್ನಡ ಸಾಹಿತ್ಯಕ್ಕೆ ಬಂದು ಕಾಂತಿಯನ್ನು ಕೊಟ್ಟಿದೆಯೆಂದು ಹಲವರು ವಿದ್ವಾಂಸರು ಸಾರಿಸಾರಿ ಹೇಳಿದ್ದಾರೆ.

ವಾರ್ಧಕ ಮತ್ತು ಉದ್ದಂಡ ಷಟ್ಪದಿಗಳು

ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂದು ಷಟ್ಪದಿಗಳು 'ಆರು ಬಗೆ' ಎಂಬುದು ಸಾಮಾನ್ಯವಾದ ತಿಳಿವಳಿಕೆ. (ಕನ್ನಡ ಕೈಪಿಡಿ, ಭಾಗ ೧, ಪುಟ ೧೭೪) ಹಿರಿಯರಾದ ಡಾ॥ ಎಸ್. ಸಿ. ನಂದಿಮಠರು ಕೂಡ "ವೀರೇಶಚರಿತೆ" ಯಲ್ಲಿ ವಿಶಿಷ್ಟತರನಾದ ವಾರ್ಧಿಕ ಷಟ್ಪದಿಯನ್ನು ಪ್ರಯೋಗ ಮಾಡಿರುವನು"ಎಂದು ಹೇಳಿದ್ದಾರೆ. (ಮಹಾಕವಿ ರಾಘವಾಂಕ, ಮುನ್ನುಡಿ) ಆದರೆ ಚಿಕ್ಕನಂಜಾರ್ಯನು ತನ್ನ ರಾಘವಾಂಕ ಕಾವ್ಯದಲ್ಲಿ 'ಷಟ್ಪದಿಗಳು ಏಳು ಪ್ರಕಾರ' ಎಂದು ಹೇಳಿ, (ಸಂಧಿ ೧೯, ಪದ್ಯ ೪೨) ಆ ಏಳು ಪ್ರಕಾರ ಷಟ್ಪದಿಗಳನ್ನು ರಚಿಸಿಯೂ ತೋರಿಸಿದ್ದಾನೆ. ಅಂದರೆ ಕ್ರಿ. ಶ. ೧೬೫ರಲ್ಲಿದ್ದ ಈ ಕವಿಯ ಕಾಲದಲ್ಲಿಯೇ ಏಳು ಬಗೆಯ ಷಟ್ಪದಿಗಳು ಸುಪರಿಚಿತವಾಗಿದ್ದುವೆಂಬುದು ಸ್ಪಷ್ಟವಾಗಿದೆ. ಕವಿಚರಿತೆಯಲ್ಲಿ (ಪುಟ ೩೮೫, ಭಾಗ-೨) 'ಉದ್ದಂಡ' ಎಂದು ಹೇಳಿ ಇದು '೧ ನೆಯ ಪದ್ಯದಂತೆಯೇ ಇದೆ' ಎಂದು ಕವಿ ಚರಿತೆಕಾರರು ಹೇಳಿದ್ದಾರೆ. ಅಂದರೆ ೧ ನೆಯ ಪದ್ಯವು ವಾರ್ಧಕ (ಪುಟ ೩೮೩, ಭಾಗ-೨) ವಾದುದರಿಂದ ಉದ್ಧಂಡವೂ ವಾರ್ಧಕವೂ ಒಂದೇ ಎಂದು ಕವಿಚರಿತೆಕಾರರು ತಿಳಿದಂತೆ ತೋರುತ್ತದೆ. ಆದರೆ ಇದು ಸರಿಯಲ್ಲ. 'ಸಮ್ಯಕ್ತ್ವ-ಕೌಮುದಿ' ಬರೆದ ಕವಿ ಮಂಗರಸನು 'ಉದ್ದಂಡ ಷಟ್ಪದಮಾಗಿ ಬರೆದೆ ನಿಂತಿದನು' (ಸಂಧಿ ೧, ಪದ್ಯ, F) ಎಂದು ಹೇಳಿ, ಉದ್ದಂಡ, ವಾರ್ಧಕ ಎರಡೂ ಒಂದೇ ಎಂದು ತಿಳಿದಿರುವಂತೆ ಕಾಣುತ್ತದೆ. ವಿಚಾರ ಮಾಡಿನೋಡಿದರೆ ಇದು ತಪ್ಪೆನಿಸುತ್ತದೆ. ಉದ್ದಂಡ ಬೇರೆ, ವಾರ್ಧಕ ಬೇರೆ ಎಂಬುದನ್ನು ನಾವು ಕಾಣಬಹುದು.

ವಾರ್ಧಕದಲ್ಲಿ ೧, ೨, ೪, ೫ ನೆಯ ಸಾಲುಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳಿರುತ್ತವೆ. ಉದ್ದಂಡದಲ್ಲಿ ಈ ಸಾಲುಗಳಲ್ಲಿ ನಾಲ್ಕು ಮಾತ್ರೆಯ ಐದು ಗಣಗಳಿರುತ್ತವೆ. ವಾರ್ಧಕೆದಲ್ಲಿ ಮೂರು ಮತ್ತು ಆರನೆಯ ಸಾಲಿನಲ್ಲಿ ಐದುಮಾತ್ರೆಯ ಆರುಗಣ ಒಂದು ಗುರು ಇರುತ್ತದೆ. ಉದ್ದಂಡದಲ್ಲಿ ಈ ಮೂರು ಮತ್ತು ಆರನೆಯ ಸಾಲಿನಲ್ಲಿ ನಾಲ್ಕು ಮಾತ್ರೆಯ ಎಂಟು ಗಣಗಳಿರುತ್ತವೆ. ಒಟ್ಟನಲ್ಲಿ ವಾರ್ಧಕ ಮತ್ತು ಉದ್ದಂಡಗಳಲ್ಲಿ ಮಾತ್ರೆಗಳು

ಸಮುವೆನಿಸಿದರೂ 'ಗಣ' ವಿಭಾಗ ಬೇರೆಯಾಗಿದೆ. ವಾರ್ಧಕವು 'ರಾಗ' ಪ್ರಧಾನವಾಗಿಯೂ, ಉದ್ದಂಡವು 'ತಾಳ' ಪ್ರಧಾನವಾಗಿಯೂ ಇವೆ. ಕನ್ನಡ ಸಾಹಿತ್ಯದಲ್ಲಿ ಛಂದಸ್ಸಿನ ಬಗೆಗೆ ವಿಚಾರ ಮಾಡುವ ಜನ ಈ ಸಂಗತಿಗಳನ್ನು ಗಮನಿಸಬೇಕೆಂದು ನಮ್ಮ ವಿನಂತಿ. ರಾಘವಾಂಕನು ಷಟ್ಪದಿಗಳಲ್ಲಿ ವಿವಿಧ ಪ್ರಯೋಗಗಳನ್ನು ನಡೆಸಿರುವನೆಂಬುದಕ್ಕೆ ಈ ಉದ್ದಂಡದ ರಚನೆಯೂ ಇದನ್ನು 'ಮಿಸಲು ಗವಿತೆ' ಎಂದು ಕರೆದಿರುವ ವಿಚಾರವೂ ಒಳ್ಳೆಯ ನಿದರ್ಶನವಾಗಿದೆ.

ನಾಗವರ್ಮನ ಛಂದೋಂಬುಧಿಯಲ್ಲಿ (ಕ್ರಿ.ಶ. ೯೯೦) ಶರ ಷಟ್ಪದಿಯ ವಿಚಾರವಿದೆ. ಚಂದ್ರರಾಜನ ಮದನತಿಲಕದಲ್ಲಿಯೂ ಶರ ಷಟ್ಪದಿ ಕಾಣಿಸಿ ಕೊಂಡಿದೆ. (ಕ್ರಿ. ಶ. ೧೦೭೯) ಕುಮಾರ ಪದ್ಮರಸನು (ಕ್ರಿ. ಶ. ೧೨೦೦) ಸಾನಂದ ಚರಿತ್ರೆಯಲ್ಲಿ ಹಲವು ಷಟ್ಪದಿಗಳನ್ನು ಬಳಸಿದ್ದಾನೆ. ಪೋಲಾಳ್ವ ದಂಡನಾಥನು [ಕ್ರಿ. ಶ. ೧೨೨೪] ಹರಿಚಾರಿತ್ರವನ್ನು ಷಟ್ಪದಿಯಲ್ಲಿ ರಚಿಸಿದ್ದಾನೆ. [ಕ. ಕ.ಚ. ಭಾಗ-೧ ಪುಟ ೩೪೪] ಹೀಗೆ ಕ್ರಮಕ್ರಮದಿಂದ ವಿಕಾಸವಾದ ಷಟ್ಪದೀ ಛಂದಸ್ಸಿನಲ್ಲಿ ರಾಘವಾಂಕನು ಕಾವ್ಯಗಳನ್ನು ರಚಿಸಿ ಷಟ್ಪದಿಯ ಸಂಸ್ಥಾಪಕನಾದನು. ಆತನ ಈ ಕನ್ನಡ ಛಂದಸ್ಸು ಮುಂದಿನ ಮಹಾಕವಿಗಳನೇಕರಿಗೆ ಸ್ಫೂರ್ತಿಯನ್ನು ನೀಡಿತು. ಚಂಪೂ ಕೃತಿಗಳಿಗೆ ಆದಿಪಂಪನೂ, ರಗಳೆ ಕಾವ್ಯಗಳಿಗೆ ಹರಿಹರನೂ, ತ್ರಿಪದಿ ಕೃತಿಗಳಿಗೆ ಸಿದ್ಧ ರಾಮನೂ, ಹಾಡುಗಬ್ಬ ರಚನೆಗೆ ನಿಜಗುಣ ಶಿವಯೋಗಿಯೂ ಆದಿಮ ಕವಿಗಳಾದಂತೆ, ಷಟ್ಪದೀ ಕಾವ್ಯಗಳಿಗೆ ಪಂಡಿತ ರಾಘವಾಂಕನು ಮೊಟ್ಟ ಮೊದಲಿಗನಾದನು.

ರಾಘವಾಂಕನು ಓರುಂಗಲ್ಲಿಗೆ ಹೋಗಿ ಅಲ್ಲಿ ವೀರೇಶನ ಮುಂದೆ ನಿಂತು ಈ ಕೃತಿ-'ವೀರೇಶ ಚರಿತೆ' ರಚಿಸಿದನೆಂದು ಐತಿಹ್ಯವಿದೆ. ಇದಕ್ಕೆ ಅನುಗುಣವಾಗಿ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರದಲ್ಲಿಯೂ ಈ ಕಥೆ ಬಂದಿದೆ. (ಭಾಗ ೧-ಪುಟ, ೪೩) ರಾಘವಾಂಕ ಕಾವ್ಯ ದಲ್ಲಿಯೂ ಈ ಕಥೆ ನಿರೂಪಿತವಾಗಿದೆ. (ರಾ- ಕಾ. ಸಂಧಿ ೧೭-೧೮) ಚೆನ್ನಬಸವ ಪುರಾಣಾದಿಗಳಲ್ಲಿಯೂ ಈ ವಿಚಾರ ಬಂದಿದೆ. (ಕ. ಕ. ಚ. ಭಾಗ ೧, ಪುಟ ೨೩೭) ಆದ್ದರಿಂದ ರಾಘವಾಂಕನು ಓರುಂಗಲ್ಲಿಗೆ ಹೋಗಿ

ಬಂದುದು ವೀರಶೈವ ಸಾಹಿತ್ಯದಲ್ಲಿ ಸುಪ್ರಸಿದ್ಧ ಪವಾಡವೆಂದು ಪರಿಗಣಿಸಲ್ಪಟ್ಟಿದೆ ಎಂದು ಹೇಳಬಹುದು.

ರಾಘವಾಂಕನ ದೇಶಾಭಿಮಾನ

ಕರ್ಣಾಟಕದ ಶರಣರಾದ, ಸಿದ್ಧರಾಮ, ಆದಿಶೆಟ್ಟಿ, ಹರಿಹರರನ್ನು ಕುರಿತು ರಾಘವಾಂಕನು ಕಾವ್ಯಗಳನ್ನು ಕಟ್ಟಿ ಹಾಡಿದ್ದಾನೆ. ಕನ್ನಡ ನಾಡಿನ ಮಹಾಪುರುಷರನ್ನು ಕುರಿತು ಕಾವ್ಯಗಳನ್ನು ಕಟ್ಟಿ ಹಾಡುವ ಸಂಪ್ರದಾಯವನ್ನು, ಹರಿಹರ, ರಾಘವಾಂಕರೇ ಮೊದಲು ಮಾಡಿದರೆಂದು ತೋರುತ್ತದೆ. ಹರಿಹರನು ಬಸವಣ್ಣ, ಅಕ್ಕಮಹಾದೇವಿ, ರೇವಣಸಿದ್ಧ, ಪ್ರಭುದೇವರು, ಏಕಾಂತರಾಮ, ಶಂಕರದಾಸಿ, ಆದಿಶೆಟ್ಟಿ ಮೊದಲಾದ ಶರಣರನ್ನು ಕುರಿತು ರಗಳೆಗಳನ್ನು ರಚಿಸಿ ಈ ಬಗೆಗೆ ಮಾರ್ಗದರ್ಶನ ಮಾಡಿದನು. ರಾಘವಾಂಕನು ಸಿದ್ಧರಾಮ, ಆದಿಶೆಟ್ಟಿ, ಹರಿಹರರನ್ನು ಕುರಿತು ಸುಂದರ ಪುರಾಣಗಳನ್ನು ಬರೆದಿರುವನು.

ಹರಿಹರನು ಕನ್ನಡ ನಾಡಿನ ಹಿರಿಯ ಅಭಿಮಾನಿಯೆನಿಸಿದ್ದನು. ಗಿರಿಜಾ ಕಲ್ಯಾಣದಲ್ಲಿ ಶಿವನ ತಪೋಭೂಮಿಯು, ಸೈಪಿನ ಬೀಡಾದ ಪಂಪಾಕ್ಷೇತ್ರವೆಂದು ಹೇಳಿರುವನು. ರಾಘವಾಂಕನು ಗುರುವಿಗೆ ತಕ್ಕ ಶಿಷ್ಯ, ಹರಿಶ್ಚಂದ್ರ ಕಾವ್ಯದಲ್ಲಿ ವಶಿಷ್ಠಾಶ್ರಮವು ಹಂಪೆಯಲ್ಲಿ ಎಂದು ಹೇಳುವನು. ವೀರೇಶ ಚರಿತೆಯಲ್ಲಿ ದಧೀಚಿಯ ಆಶ್ರಮವು ಸಹ ಹಂಪೆಯಲ್ಲಿಯೇ ಎಂದು ಹೇಳುವನು. ಸೋಮನಾಥ ಚರಿತೆಯಲ್ಲಿ ಸೌರಾಷ್ಟ್ರದ ಸೋಮನಾಥನನ್ನು ಶರಣ ಆದಯ್ಯನಿಂದ ಕರ್ಣಾಟಕದ ಹುಲಿಗೆರೆಗೆ ಬರಮಾಡಿಸುವನು. ಇದೆಲ್ಲವೂ ಕವಿಯ ಉಜ್ವಲ ದೇಶಾಭಿಮಾನದ ನಿದರ್ಶನವೆನ್ನಬಹುದು.

ಕೆಲವು ದಂತಕಥೆಗಳು

ಮಹಾಕವಿ ರಾಘವಾಂಕನನ್ನು ಕುರಿತಾದ ಈ ಪ್ರಸ್ತಾವನೆಯಲ್ಲಿ ನಾವು ಈ ಸಂಬಂಧವಾಗಿ ಪ್ರಚಾರದಲ್ಲಿರುವ ಕೆಲವು ಕಥೆಗಳ ನಿಜಾಂಶವನ್ನು ಪರೀಕ್ಷಿಸುವುದು ಅಗತ್ಯವಾಗಿದೆ.

ರಾಘವಾಂಕನು (ಕ್ರಿ. ಶ. ೧೨೨೦) ಕುಮಾರವ್ಯಾಸನ ಗರ್ವಭಂಗ ಮಾಡಿದನು. (ಕ್ರಿ. ಶ. ೧೪೩೦) ರಾಘವಾಂಕನು ಬಸವ ಪುರಾಣ ಬರೆದ

ಭೀಮಕವಿಗೆ (ಕ್ರಿ.ಶ. ೧೩೬೯) ಗುರುವಾಗಿದ್ದನು. ಇತ್ಯಾದಿ ಕಥೆಗಳು ಇತಿಹಾಸಕ್ಕೆ ವಿರುದ್ಧವಾಗಿವೆ. ಕವಿಯ ಅಗ್ಗಳಿಕೆಯನ್ನು ಹೇಳಿಕೊಳ್ಳುವ ಜನರು ಇಂತಹ ಕಟ್ಟುಕಥೆಗಳನ್ನು ಸೃಷ್ಟಿಸುತ್ತಾರೆ ಎನ್ನಬಹುದು.

ಓರುಂಗಲ್ಲಿನಿಂದ 'ಚತುರಕವಿ' ಎಂಬುವನೊಬ್ಬನು ಹಂಪೆಗೆ ಬಂದು ರಾಘವಾಂಕನನ್ನು ಪ್ರತಾಪರುದ್ರನ ಆಸ್ಥಾನಕ್ಕೆ ಕರೆದುಕೊಂಡು ಹೋದನು. ಶಿವದೇವನೆಂಬ ವಿದ್ವಾಂಸನು ಹಂಪೆಗೆ ಬಂದು ತನ್ನ ಮಗನನ್ನು ರಾಘವಾಂಕನಲ್ಲಿ ವಿದ್ಯಾಭ್ಯಾಸಕ್ಕೆ ಬಿಟ್ಟನು ಎಂಬ ಕಥೆಯೊಂದು ಪ್ರಸಾರವಾಗಿದೆ. ಈ ಕಥೆಯಲ್ಲಿ ಕೊಂಚ ಸತ್ಯವಿದ್ದಂತೆ ತೋರುತ್ತದೆ. ಶ್ರೀಶೈಲದ ಕದಳಿಯ ವನದ ಅಕ್ಕನ ಗವಿಯಲ್ಲಿ ಶಿವದೇವನ ಹೆಸರುಳ್ಳ ಶಾಸನವೊಂದು ಸಿಕ್ಕಿ ಪ್ರಕಟವಾಗಿದೆ. *

ಓರುಂಗಲ್ಲಿನಲ್ಲಿ ಈ ಕಾಲದಲ್ಲಿ ಆಳುತ್ತಿದ್ದರಾಜ ಪ್ರತಾಪರುದ್ರನು ವೀರಶೈವದ ಅಭಿಮಾನಿಯಾಗಿದ್ದನು. ಇವನು ಓರುಂಗಲ್ಲಿನಲ್ಲಿ ವಿದ್ಯಾಮಂದಿರವೆಂಬ ಸಂಸ್ಥೆಯನ್ನು ಸ್ಥಾಪಿಸಿದ್ದನು. ಅದಕ್ಕೆ 'ಶಿವದೇವನು' ಅಧ್ಯಕ್ಷನಾಗಿದ್ದನು. ಅಲ್ಲಿಗೆ ಸಮಗ್ರ ಭಾರತದಿಂದಲೂ ವಿದ್ವಾಂಸರು ಬರುತ್ತಿದ್ದರು. ಈ ಪ್ರಸಂಗದಲ್ಲಿ ರಾಘವಾಂಕನೂ ಅಲ್ಲಿಗೆ ಹೋಗಿ 'ವೀರೇಶ ಚರಿತೆ' ರಚಿಸಿ ವೀರೇಶನನ್ನು ಸಾಕ್ಷಾತ್ಕಾರ ಮಾಡಿಕೊಂಡು ರಾಜನ ಮೆಚ್ಚುಗೆಯನ್ನು ಪಡೆದಿರಬಹುದು. ಈ ಕಾಲದಲ್ಲಿಯೇ ಏಕಸಂಧಿ, ದ್ವಿಸಂಧಿ, ತ್ರಿಸಂಧಿ ಗ್ರಾಹಿಗಳನ್ನು ಜಯಿಸಿರಬಹುದು.

ಷಡಕ್ಷರದೇವ, ಲಕ್ಷ್ಮೀಶ, ರುದ್ರಭಟ್ಟರಿಗೆ ಸಂಬಂಧಪಟ್ಟಂತೆ ಇಂತಹ ಕಟ್ಟು ಕಥೆಯೊಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಾರದಲ್ಲುಂಟಷ್ಟೆ.

ರಾಘವಾಂಕನು ಕೆರೆಯ ಪದ್ಮರಸನನ್ನು ನೋಡಲು ಹೊಯ್ಸಳರ ರಾಜಧಾನಿ ಬೇಲೂರಿಗೆ ಹೋಗಿ ಕೆರೆಯ ಪದ್ಮರಸನ ಅನುಗ್ರಹ ಪಡೆದುದು, ತ್ರಿಭುವನತಾತನ ವಾದದಲ್ಲಿ ಪದ್ಮರಸನ ಪಕ್ಷವಹಿಸಿದುದು [ಕ. ಕ. ಚ. ಭಾಗ ೧, ಪುಟ ೨೫೦,] ನಿಜವೆಂದು ತೋರುತ್ತದೆ. ಗುರು ಪದ್ಮರಸನನ್ನು ಕುರಿತು :

---

*ಸಿರಿಗೆರೆ ಸಿಂಹಾಸನಾಧಿಪರಾದ ಶ್ರೀ ತರಳಬಾಳು ಜಗದ್ಗುರುಗಳು ಈ ಶಾಸನವನ್ನು ಪ್ರಕಟಿಸಿದ್ದಾರೆ. (ಸಂ)

ಕಂದ॥ ಮಿಹಿರಂಗೆ ತಿಮಿರಮಿದಿರೇ ।
ಸಹಜಕ್ಕೆ ಕಮಳಮಿದಿರೆ ಪದ್ಮರಸಾರ್ಯಂ ॥
ಗಹಹಾ ! ತ್ರಿಭುವನ:ತಾತಂ ।
ಬಹು ವಿಧದಿಂ ಬಗೆಯಲಿದಿರೆ ತಾನೇಕೆಟ್ಟಂ ॥

(ಕ. ಕ ಚ. ಭಾಗ-೧, ಪುಟ ೨೫೦.)

ಎಂದು ಮಾಡಿರುವ ಶ್ಲಾಘನೆಯು ಸಹಜವಾಗಿಯೇ ಇದೆ. ರಾಘವಾಂಕನ ಸಮಾಧಿ ಕೂಡ ಬೇಲೂರಿನಲ್ಲಿರುವುದು ಇಲ್ಲಿ ಗಮನಾರ್ಹವಾಗಿದೆ. ಆದ್ದರಿಂದ ಕವಿ ರಾಘವಾಂಕನು ಓರುಂಗಲ್ಲು ಮತ್ತು ಬೇಲೂರಿಗೆ ಹೋಗಿ ಬಂದುದು ನಿಜವಾಗಿದೆ. ಸಕಾರಣವಾಗಿದೆ.

ರಾಘವಾಂಕನ ಕವಿತಾ ಸಾಮರ್ಥ್ಯ

ರಾಘವಾಂಕನು 'ಸಮರ್ಥ ಕವಿ' ಎಂಬ ಬಗೆಗೆ ಭಿನ್ನಾಭಿಪ್ರಾಯವಿಲ್ಲ. ಈ ಬಗೆಗೆ ನಾಡಿನ ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಇಲ್ಲಿ ಕೇಳಬಹುದು

"ಇವನ ಬಂಧವು ಪ್ರೌಢವಾಗಿಯೂ ಅರ್ಥ ಗಾಂಭೀರ್ಯವುಳ್ಳುದಾಗಿಯೂ ದೇಶ್ಯಪದ ಭೂಯಿಷ್ಠವಾಗಿಯೂ ಇದೆ. ಷಟ್ಪದೀ ಗ್ರಂಥಗಳನ್ನು ಬರೆಯುವುದಕ್ಕೆ ಈತನೇ ಆದಿಕವಿಯೆಂದು ವೀರಶೈವರ ಗ್ರಂಥಗಳಲ್ಲಿ ಹೇಳಿದೆ"

(ಕ. ಕ. ಚ. ಭಾಗ-೧, ಪುಟ ೨೩೫)

"ರಾಘವಾಂಕನು ಪ್ರತಿಭಾವಂತನಾದ ಕವಿಯು. ಶ್ರೇಷ್ಠ ಪ್ರತಿಯ ಕಲಾವಿದನು. ಉತ್ಸಾಹವನ್ನು ತಡೆಹಿಡಿಯುವ ಶಕ್ತಿ ಕವಿಗಿದೆ. ಯಾವುದನ್ನೂ ಮಿತಿಮೀರಿ ಬರೆಯದೆ ಹಿತವರಿತು ಉಚಿತವಾದ ರೀತಿಯಿಂದ ಕಾವ್ಯ ನಡೆಸಿಕೊಂಡು ಬಂದ ಕೀರ್ತಿಯು ರಾಘವಾಂಕನಿಗೆ ಸಲ್ಲುತ್ತದೆ. ಅವನ ಕಾವ್ಯಗಳು ವೈವಿಧ್ಯ ಪೂರ್ಣವಾಗಿವೆ. ಕನ್ನಡದಲ್ಲಿ ಕವಿಗಳ ಸಂಖ್ಯೆ ಬಹಳವಾಗಿದ್ದರೂ ರಾಘವಾಂಕ ನಂತಹ ಪ್ರತಿಭಾ ಶಾಲಿಗಳ ಸಂಖ್ಯೆ ಬಹು ಕಡಿಮೆಯೆಂದೇ ಹೇಳಬೇಕಾಗುತ್ತದೆ.

ಡಾ॥ ಆರ್. ಸಿ. ಹಿರೇಮಠ

(ಮಹಾಕವಿ ರಾಘವಾಂಕ, ಪುಟ ೨೪೮)

"ರಾಘವಾಂಕನ ಕಥನ ಕೌಶಲ, ದೃಶ್ಯವಿಭಾಗ, ನೀತಿ, ಪಾತ್ರಗಳ ಕ್ರಿಯೆ ಮತ್ತು ಅಭಿನಯ ಕ್ರಿಯೆಗಳ ವರ್ಣನೆ, ಶೋಕ, ಕ್ರೋಧ, ಸತ್ಯ ಸಾಧನೆ,

ಕ್ರೌರ್ಯ, ಕರ್ತವ್ಯಪರಾಯಣತೆ, ಶ್ರದ್ಧೆ, ಭಕ್ತಿ-ಒಟ್ಟಿನಲ್ಲಿ ಕಾವ್ಯದಲ್ಲಿ ಚೆಲ್ಲಿಸೂಸುವ ನಾಟಕೀಯತೆ ಎಲ್ಲವೂ ಒಂದೊಂದಾಗಿ ಭಾವನಾಪ್ರಪಂಚಕ್ಕೆ ಕೊಂಡೊಯ್ದು ನಗಿಸಿ, ಅಳಿಸಿ, ಸಿಟ್ಟುಗೊಳಿಸಿ, ಸಂತೋಷಪಡಿಸಿ ತಣಿಸುತ್ತವೆ. ರಾಘವಾಂಕನು ಸಂಪೂರ್ಣವಾಗಿ ನಮ್ಮವನಾಗುತ್ತಾನೆ. ನಾವು ಅವನವರಾಗುತ್ತೇವೆ. ಎಲ್ಲ ಪಾತ್ರಗಳೂ ಸಜೀವವಾಗಿ ಆವಿರ್ಭೂತವಾಗಿ ಸತ್ಯವಾಗಿ ನಮ್ಮ ಕಣ್ಣಮುಂದೆ ನಲಿಯುತ್ತವೆ."

ರಾಷ್ಟ್ರಕವಿ ಡಾ|| ಕೆ. ವಿ. ಪುಟ್ಟಪ್ಪ,
(ಕಾವ್ಯ ವಿಚಾರ, ಪುಟ ೮೪-೮೫)

"ಈ ಕವಿಯ ಬಂಧವು ಸರಳವಾಗಿದೆ. ಕವಿಯು ವಿಶೇಷವಾಗಿ ಉತ್ಪ್ರೇಕ್ಷಾದ್ಯಲಂಕಾರಗಳ ಆಡಂಬರಕ್ಕೆ ಹೋಗದಿದ್ದರೂ, ಪಾಠಕರ ಹೃದಯವು ಕರಗಿ ಹೋಗುವ ಹಾಗೆ ವಿಷಯಗಳನ್ನು ತಂದು ವರ್ಣಿಸುತ್ತಾನೆ."

ದಿ|| ಮಂ. ಆ. ರಾಮಾನುಜ ಅಯ್ಯಂಗಾರ್
(ಹರಿಶ್ಚಂದ್ರ ಕಾವ್ಯ ಪೀಠಿಕೆ, ೧೯೦೯)

ತಕ್ಕಷ್ಟು ಶ್ರಮವಹಿಸಿ ಪ್ರಕಟಿಸಿದ 'ಮಿಾಸಲು ಕವಿತೆ-ವೀರೇಶ ಚರಿತೆ' ಯನ್ನು ನಾಡುಡಿಗಳ ಅಭಿಮಾನಗಳು ಪ್ರೀತಿಯಿಂದ ಸ್ವೀಕರಿಸುವರೆಂದು ನಾವು ನಂಬುತ್ತೇವೆ.

ದಿನಾಂಕ ೧-೧೦-೧೯೬೬
ಬೆಂಗಳೂರು-೨

ಇಂತು ಸುಜನ ವಿಧೇಯ,
ಬಿ. ಶಿವಮೂರ್ತಿ ಶಾಸ್ತ್ರೀ

ರಾಘವಾಂಕನ ಭಾಷೆ

ಪರರೊಡಪೆಯಂ ಕೊಂಡು ಕೃತಿಯ ಪೇೞದ ಭಾಷೆ ।
ಪರರ ಕಾವ್ಯಾರ್ಥಂಗಳಂ ಛಿದ್ರಸದ ಭಾಷೆ ।
ಪರರ ದೈವವ ನುತಿಸದಿರ್ಪ ಭಾಷೆಯು
ತನ್ನ ಮನದೊಳಗೆ ಹಿಡಿದಿರ್ಪನು ॥
ಪರರ ನಿಂದಿಸಿ ತನ್ನ ಹೊಗಳಿಕೊಳ್ಳದ ಭಾಷೆ ।
ಪರರ ವಧುವಂ ಕಂಡು ಮನವೆಳಸದಿಹ ಭಾಷೆ ।
ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು
ರಾಘವಾಂಕಗೆ ಸಂದುದು ॥

ಕವಿಯಧಿಕನಾದೊಡೇಂ ಕೇಳ್ವರಿಲ್ಲದೊಡೆ ಗಾ ।
ನವಿದಗ್ದೆಯಿರ್ದೊಡೇಂ ಜಾಣರಿಲ್ಲದೊಡೆ ಜಾ ।
ತಿ ವಿದಗ್ಧೆಯಿರ್ದೊಡೇಂ ರಸಿಕರಿಲ್ಲದೊಡೆ ಪೊಸಪೂ
ಮಾಲೆಯಿರ್ದೊಡೇನು ॥
ತವೆ ಮುಡಿವರಿಲ್ಲದೊಡೆ ನಾನಾ ಕಲಾಪ್ರೌಢ ।
ನಿವಹವಿರ್ದೇನಧಿಕ ದಾತರಿಲ್ಲದೊಡೆ ಇಂ ।
ತಿವನ್ನೈದೆ ಬಲ್ಲವರಪೂರ್ವ ಮೇಣ್ಣುಳ್ಳೊಡವ
ದೇವನಲ್ಲದೆ ಮನುಜನೇ ॥

ನಡೆವರೆಡಹದೆ ಕುಳಿತರೆಡಹುವರೆ ಕಾವ್ಯಮಂ ।
ನಡೆಸುವಾತಂ ರಸಾವೇಶ ಮಱಹಾಲಸ್ಯ ।
ವೆಡೆಗೊಳಲು ತಪ್ಪುಗಲ್ಲದೆ ಕಾವ್ಯಕರ್ತೃ ತಪ್ಪುವನೆ
ಒಂದೆರಡೆಡೆಯೊಳು ॥
ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸದೆ ।
ಕಡೆತನಕ ಬಂದ ಲೇಸಿಂಗೆ ತಲೆದೂಗೆ ತಲೆ
ಯೊಡೆಯುವುದೇ ಬೇಸೆಯಱಿಯದ ನೀರಸರನೇಕೆ ಪುಟ್ಟೆ
ಸಿದ ನಬುಜಭವನು ॥

(ಹರಿಶ್ಚಂದ್ರ ಕಾವ್ಯ, ಸ್ಥಲ ೧. ೧೬–೨೩–೨೫)

ವೀರೇಶ ಚರಿತೆ

ಮತ್ತು

ವೀರಭದ್ರ ದೇವರ ರಗಳೆ

ಮಹಾಕವಿ ರಾಘವಾಂಕ ವಿರಚಿತ

ವೀರೇಶ ಚರಿತೆ

(ಮೊದಲ ಗವಿತೆ)

ಉದ್ದಂಡ ಷಟ್ಪದಿ:

ಸೂಚನೆ:

ನೃಡನೋಲಗದೊಳ್ ಮನ್ನಣೆವಡೆಯದೆ ದಕ್ಷಂ
ಕಡುಮುಳಿಸಿಂ ಹರವಿರಹಿತ ಯಾಗವ ನಡೆಸಲ್
ಘುಡುಘುಡಿಸುತ ನಡೆತಂದು ದಧೀಚಿವ್ರತಿ ಶಪಿಸಿದನಮರರ[1]
ಮು[2]ನಿಗಳನು ॥

ಶ್ರೀಪತಿ ವಾಣೀಪತಿ ಸುರಪತಿ ದಿನಪತಿ ತಾ
ರಾಪತಿ ಮೊದಲಾದ ಸಮಸ್ತಾ[3]ನತ[4]ನೆನಿಸುವ
ಶ್ರೀ[5]ಪಾದದ್ವಯನಕ್ಷಯನದ್ವಯನನುಪಮನತಿಶಯ ರೂಪನು ಶಿವನು ।
ಕೋಪಾಟೋಪದೆ ದಕ್ಷಾಧ್ವರ ವಿಧ್ವಂಸಾ
ಳಾಪದೆ ವೀರೇಶನನುದ್ಭವಿಸಿದ ಗುರು ಪಂ
ಪಾಪುರದರಸು ವಿರೂಪಾಕ್ಷಂ ಕೊರ್ತೆಮಗೀಗಿಷ್ಟಾರ್ಥದ ಭಕ್ತಿಯನು
॥ ೧ ॥

ನಿಡುಜಡೆಯುಡುಕುಳಿ ಮಡಲೆಡೆಯೆಡೆಯೊಳ್ ಬಿಡದಡಿ
ಯಿಡುವೋಲ್ ಕಡಲಿನ ತಡಿವಿಡಿದುಡುಗಡಣದ ಪತಿ
ಯೊಡಲೊಡಕಿನ ಕಡುಹಿಮುವಡಿಗಡಿಗಿಡಿದಡಸಲ್ ಕುಡಿದುಳಿ ದಣ್ಣನೆ
ದಣಿದು ।

---

[1]. ಲಕ (ಕ), ಲಗ (ಗ). [2]. ರ ಮುನು ಮು (ಕ.ಗ)
[3]. ಸ್ತಾಮರನತ (ಕ.ಗ) [4]. ಪಾ (ಗ) [5]. ದೆಡೆ (ಅ)

ಘುಡಿಘುಡಿಸುವ ಕೋಪದ ಕಡು[1]ಹೆಡೆಗಿಡೆ ಶಾಂತಿಯ
ಮಡುವೆನಿಸುವ ನಡುಗಣ್ಣಿನ ಕುಡಿವೆಳಗಿಂದೆಡೆ
ವಿಡಿದೊಪ್ಪುವ ನಗೆಮೊಗದೊಡೆಯಂ ಗುರು ಹಂಪೆಯ ಮೃಡ[2]ನೆಮ್ಮಂ[1]
ರಕ್ಷಿಸುಗೆ ‖ ೨ |

ಅಕ್ಷಯನಕ್ಷರನಕ್ಷಿತ್ರಯನುಕ್ಷಧ್ವಜ
ರಕ್ಷಾ[3]ದಕ್ಷ[4]ಕ್ಷೇಮಿ ಕ್ಷ್ವೇಡಾ ಕ್ಷೋಣಾ
ಧ್ಯಕ್ಷಾಭಕ್ಷಂ ಕ್ಷುದ್ರಕ್ಷೂರಂ ಕ್ಷಮ ನತಪಕ್ಷಂ ಮೋಕ್ಷಪ್ರದನು |
ದಕ್ಷಾಪಕ್ಷಂ ಮುಖಶಿಕ್ಷಂ ದಕ್ಷಂ ನಿಜ
ಕುಕ್ಷಿಸ್ಥಳ ನಿಕ್ಷಿಪ್ತಬ್ರಹ್ಮಾಂಡಂ ನೆಱೆ
ರಕ್ಷಿಕ್ಕೆಮ್ಮಂ ಬಹುಳ ಕ್ಷತ್ರಂ ವಿಪುಳ ವಿಪಕ್ಷಂ ವೀರೇಶ್ವರನು ‖ ೩ |

ಪರಿಣಾಮದ ಕಣಿ ಶಾಂತಿಯ ನಿಧಿ ಭಕ್ತಿಯ ಸಾ
ಗರಮೇಕೋನಿಷ್ಠೆಯ ಹರ[5]ವರಿ[6] ಸಾಮರ್ಥ್ಯದ
ತರು ನೀತಿಯ ಕಡಲು ದಯಾಗಾರಂ ಪುಣ್ಯದ ಪುಂಜಂ ಸತ್ಯದ ಸದ[7]ನ |
ಹರುಷದ ಮಡು ಸರ್ವಜ್ಞತ್ವದ ಶಾಸನ ಸು
ಸ್ಥಿರ[6]ದಾ[7]ಸ್ಥಲಯುಕ್ತಂ ಹಂಪೆಯ ಹರಿಹರದೇ
ವರ ಕಾರುಣ್ಯದ ಸುಪ್ರಭೆ ಬೆಳಗುಗೆ ಬಿಡದೆಮ್ಮ ಮನೋಮಂದಿರಕೆಂದುಂ
‖ ೪ |

ಜಡೆಸ್ವಕಲಕ್ಕೆ ಬಲಂ ಬಗೆಗೆಂಟೊಡಲಾ ಎಂ
ಟೊಡಲಿಂಗೆ ಬಲಂ ರುದ್ರಂ ರುದ್ರಂಗೆ ಬಲಂ
ನಡುಗಣ್ಣಾ ನಡುಗಣ್ಣಿಂಗೆ ಬಲಂ ವೀರೇಶ್ವರನೆನಲಾತನ ಬಲದ |
ಕಡುಪಂ ಬಣ್ಣಿಪೊಡುರಗೇಂದ್ರಂಗೆಣಿಸುವೆನೆಂ
ಬೊಡೆ ತರಣಿಗೆ ನೋಡುವೊಡಮರೇಂದ್ರಂಗರಿದೆನೆ
ಕಡೆಗಿನ್ನೆನ್ನಳವೇ ಶಿವಭಕ್ತರ[6] ಕರುಣದ[7] ಬಲ್ಲಂದದಿ ಪೊಗಳುವೆನು ‖ ೫ |

[1]ಪೊ (ಅ). [2]ನೆಂದುಂ (ಕ). [3]ಪೇಕ್ಷು (ಅ). [4]ನತಿ (ಅ). [5]ನಂ (ಅ). [6]ಢ (ಕ, ಗ). [7]ಕೃಪೆಯಿಂ (ಕ)

ನಾನಾರಸ ಭಾವಾರ್ಥಂ ಬಂಧಕಲಾ ಸಂ
ಧಾನಂ ಸಂಧಿ ಸಮಾಸ ವಿಭಕ್ತಿಗಳೆಸೆವಭಿ
ಧಾನಮಲಂಕಾರ ಪ್ರಕರಣ ಯತಿಧಾತು ಕ್ರಿಯೆ ಕಾರಕನಿರ್ವಾಹ ।
ಸ್ಥಾನಪ್ರಕೃತಿ ಪ್ರತ್ಯಯ ಲಿಂಗತ್ರಯದೊಳ
ಗೇನೆಡವಿದೊಡಂ ಪರರಣಕಿಸದಂತಾಲಿಪು
ದಾನಂದದೊಳೆಲ್ಲಾ ಭಕ್ತರು ಕರುಣಿಸಿ ತಿದ್ದುವುದಾಂ ನಿಮ್ಮವನೆಂದು ॥೬॥

ಕಡುಗಲಿಸಿದ ಕದನದ ಕರ್ಕಶದನುಜನ ಬೆ
ನ್ನಡಗನು ಬಗಿದದಱಿಂದೊಸರುವ ಬಿಸುನೆತ್ತರ
ಕುಡಿದಡಗನು ಕಾರಿದು ಹೆಚ್ಚಿದ ಮರುಳಾಟದ ಮಱವಿಂ ಲೋಕಂಗಳನು ।
ಹುಡಿಗೆಯ್ಯುತ್ತಿಹ ನರಸಿಂಹನ ಹಣೆಲಿಪಿಯನು
ತೊಡೆದಾ ವೀರೇಶನ ಲೀಲಾಕಥನವ ಪದ
ವಿಡುವೆನು ಚಿತ್ತೈಸುವುದಪ್ರತಿಮ ಶಿವಾರ್ಚಕರೆರಡಱಿಯದ ನಿಚ್ಚಟರು ॥೭॥

ಕೃತಿನಾಮಂ ವೀರೇಶ್ವರ ಚರಿತಂ ಬಗೆಗೀ
ಕೃತಿಪತಿಯೋರುಂಗಲ್ಲಿನ ವೀರೇಶ್ವರನೀ
ಕೃತಿಗೆ ಸಹಾಯರು ಸದ್ಭಕ್ತಸಮೂಹಂ[1] ಕೃತಿಯಂ ಮುದದಿಂ ಪೇಳ್ದವನು ।
ಯತಿಪತಿ ಹಂಪೆಯ ಹರಿದೇವರ ಕಾರುಣ್ಯದ
ಸುತ ಶಿವಕವಿಭೃತ್ಯಂ ಹಂಪೆಯ ರಾಘವ ಪಂ
ಡಿತನೆನಲೀ ಕೃತಿಯಂ ಮೆಚ್ಚದ ಸಜ್ಜನರಾರೀ ವಸುಧಾಚಕ್ರದೊಳು ॥೮॥

ಕ್ಷಿತಿಯೊಳು ಶಿವಭಕ್ತರ್ಗೆ ಶಿವಂಗಾಂ ಮಾಱಿದ
ಮತಿಯೊಳ್ ಮಱೆದಜಗಿಜ ಹರಿಗಿರಿ ಸುರಪತಿ ಗಿರ
ಪತಿ ಮೊದಲಾದುಡುಕುಳಿದೇವರನವನೀಶರು ಮೊದಲೆನಿಸಿದ ಭವಿಗಳನು ।

---

[1] ವ (ಕ,ಗ.). [2] ಹವು (ಕ,ಗ)

ತುತಿಸಿದೆನಾದೊಡೆ ಸಲೆ ಶಿವದೂಷಕ ನಾನೆಂ
ಬತಿ ಬಿರುದಿನ ಶಿವಕವಿ ಹಂಪೆಯು ರಾಘವ ಪಂ
ಡಿತನೆನಲೀ ಮಿಾಸಲುಗವಿತೆಯ ಚಿತ್ತೈಸುವುದೆರಡಱಿಯದ ನಿಚ್ಚಟರು
॥ ೯ ॥

ಪಂಕಿಪೊಡೀ ಕೃತಿಗಾವುದು ಮೊದಲೆನೆ ಹಳಚುವ
ತೆರೆಯೊಳು ತಿರುಗುವ ಕರಿಮಕರಂಗಳ ಪುಚ್ಛೋ
ತ್ಕರಹತಿಯಿಂ ಚೆಲ್ಲಿದ ಮಣಿಗಳ ಬೆಳಗಿಂ ಶ್ವೇತದ್ವೀಪವನಣಕಿಸುತ ।
ಶರನಿಧಿಯೊಪ್ಪುವುದಂತಾ ಶರನಿಧಿಪರಿವೃತ
ಧರೆಯೊಪ್ಪುವುದಂತಾ ಧರೆಯ ಶಿರೋಮಣಿಯೋಲ್
ಸುರಗಿರಿಯೊಪ್ಪುವುದಂತಾ ಸುರಗಿರಿಯುತ್ತರಭಾಗವನೇಂ ಬಣ್ಣಿಪೆನು
॥ ೧೦ ॥

ಶಶಿಬಿಂಬದವೊಟ್ಟಲೊ ಬೆಳುದಿಂಗಳ ಘಟ್ಟಿಯೊ
ವಿಷಗೊರಲನ ಕೀರ್ತಿಲತಾಕಂದವೊ ಲೋಕ
ಪ್ರಸರದ ಕಂಗಳ ಮಂಗಳದೊಬ್ಬುಳಿಯೋ ಭಕ್ತರ ಭಾಗ್ಯದ ಹೆಬ್ಬೆಳೆಯೊ ।
ಹೊಸರಾಶಿಯೊ ವಸುಧೆಯ[1] ಸಂತಸವೋಯೆಂದಂ
ಕಿಸಿ ಮೆಱೆದುದು ಕೈಲಾಸಂ ಶರ್ವನ ವಾಸಂ
ಲಸಿತಾಮರಕೋಶಂ ಮಾಯಾಸಂಕ್ಲೇಶಂ ಕುಧರಾಧೀಶಂ
ಕಡೆಗೆಯ್ಯಯ್ಯಾ ॥ ೧೧ ॥

ಗಗನವ ಬಗಿದೆಲ್ಲಾ ಲೋಕಂಗಳ ನೆತ್ತಿಗೆ
ನಿಗುರುವ ಗಿರಿಮುಖ್ಯನ ಮಕುಟವೊ ಪೇಳೆಂದೆನ
ಲಗಣಿತ ರವಿಬಿಂಬಂಗಳ ಬೆಳಗಂ ಬೀರುತ್ತೆಸೆಯಿತ್ತಭವನ ಭವನ ।

---

[1] ಸಂತೆಯೋ ಎಂದಿರದಂ (ಅ)

ತೆಗೆ ಸಡಿ ಘಡ ಕುಡುಬೇಡುಪಮಾನವನೆನಲೋ
ಲಗಶಾಲೆ ಸುವರ್ಣದ ನವಮಣಿಗಳ ಪರಿಸದ
ಮೃಗಧರಕಾಂತದ ಚಿಂತಾರತ್ನದ ಭಿತ್ತಿಯೊಳೆಸೆಯಿತ್ತೇಂ ಬಣ್ಣಿಪೆನು
॥ ೧೭ ॥

ವಿನುತಾವಾಸದ ನವಮಣಿಗಣಮಯ ಸಿಂಹಾ
ಸನದೊಳು ನೋಡುವ ಮಾತಾಡುವ ಕೈನೀಡುವ
ಸನುಮಾನಿಸಿ ಬಯಸಿತ ಸಲಿಸುತ್ತಿಹ ಕಲ್ಪದ್ರುಮವೆಂದೆನಿಸುವ ಶಿವನು ।
ತನತನಗೋಲಗದೊಳ್ ನೆರೆದಿರ್ದೆಲ್ಲಾ ದೇ
ವನಿಕಾಯಂ ಪೊಗಳಲು ಮಂಗಳದರ್ಪಣದಂ
ತನುವರ್ತಿಸುತೊಪ್ಪಿದನಪ್ರತಿಮಂ ಸಕಲಚರಾಚರ ಜನ್ಮಸ್ಥಳನು ॥ ೧೮ ॥

ನಡುಗಣ್ಣುರಿಬಿಸಿಲಿಂ ಬಳಲುವ ಶಶಿಗಮೃತವ
ನಿಡುವೋಲ್ ಬಳುಕುವ ಚಮರಿಯ ಪೊಸಸೀಗುರಿಗಳ
ಜಡಿಯಲ್ಕಡಗುವ ಫಣಿಗಳಿಗಾಹುತಿಗೊಡುವಂತಿಹ ವಿಜ್ಜನ ಸತಿಯರಿನೆ।

ತೊಡಿಗೆಯ ನಾನಾದೇವರ ತಲೆಗಳು ಸಾಚಲು
ಪಿಡಿದೆತ್ತಿದ ಮುಕುರಂಗಳ ಕಡುಮನ್ನಣೆಗಳ
ಮಡದಿಯರೊಪ್ಪಿದರು ವಸಂತನನುಪಚರಿಸುತ್ತಿಹ ವನದೇವಿಯರಂತೆ ॥ ೧೯ ॥

ಎಡಬಲದೊಳು ಕೈಮುಗಿದಿಪ್ಪ ಹರಿಬ್ರಹ್ಮರ
ನಡುವಣ ಸಾಲೋಕ್ಯರ ನಿಕರದ ಸಾಮೀಪ್ಯರ
ತೊಡೆಸೋಂಕಿನ ಸಾರೂಪ್ಯರ ಬೆರಸಿಹ ಸಾಯುಜ್ಯರ ಸುತ್ತಣ ಗಣಕುಲದ।

---

[1] ಘಡ (ಅ). [2] ವ (ಕ, ಗ). [3] ದ (ಅ). [4] ಹೋಗ. [5] ಹಿ (ಕ, ಗ). [6] ದ (ಕ, ಗ)

ಕಡೆಗಂಳೊಳಾಡುವ ಸಿರಿಸರಸತಿಯರ ಸಾ
ಲ್ವಿಡಿದಿಹ ಸರ್ವಾಮರ ನಿಚಯದ ಮುಂದೆ ಥರಂ
ಬಿಡಿದಷ್ಟ[1] ದಿಶಾಧಿಪರಂ ಬಳಸಿದ ಮನುಮುನಿತತಿಯಿಂ ಸಭೆಯೊಪ್ಪಿದುದು
|| ೧೫ ||

ಸುತ್ತುಗೆಯೊತ್ತಂ ಬಡಿಯುತ್ತಿರ್ದ ಗಣಂಗಳ
ಮೊತ್ತದ ಮಕುಟಂಗಳ ಕುತ್ತಾರಕ್ಕೈತ್ತಂ
ಹೊತ್ತು ತಳೆರ್ತಸಿಲತೆಗಳ ಕವಿಡೆಡೆಗಿಡಿದಡಸಿದ ದೀಪಾವಳಿಯೆಸೆವ |
ಭಿತ್ತಿಯ ಶಶಿಕಾಂತದ ತೊಡಿಗೆಯ ಸತಿಯರ ಸಂ
ಪತ್ತಿನ ಬೆಳತಿಗೆವೆಳಗಿನೊಳತಿ ಮಂಳಮಯ
ವೆತ್ತಿರ್ದಂ ಜಿತದೂಷಣನತಿಭೀಷಣನಘಶೋಷಣನಹಿಭೂಷಣನು || ೧೬ ||

ಏಳಂಬುಧಿ ಪರಿವೃತದ ಧರಾತಳದೊಳಗೆ ನೃ
ಪಾಲರುಗಳನವರಿವರೆಂದೆನ್ನದೆ ನೆಱೆನಿ
ರ್ಮೂಲಂಗೆಯ್ದಿಸುವೆನ್ನಿಂ[2] ನಿಜವಿಜಯ ಭುಜಾದಂಡವ ಮಂಡಿಸಿ
ಮೆಱೆದಾ |
ಬಾಳ ಬಲಾಢ್ಯತೆಯಂ ತೋಱಿಸಿ ನಾನಾ ಭುವ
ನಾಳಿಯ ದೇವರ್ಕೆಯ್ಯ್ಯಭಿಷೇಕ ಫಯಃಕಣ
ಜಾಳದ ಜಯಸೇಸೆಯ ತೋಱುವೆನೆಂದನುಗೆಯ್ದಂ ದಕ್ಷಪಿತಾಮಹನು ||೧೭||

ಭಾರತಿ ನೀಡುವ ವೀಣಾರವಮಂ ತುಂಬುರ
ನಾರದರಾಣತಿಯಂ ನಂದಿ ಮಹಾಕಾಳರ
ಪೂರಾಯದ ಗತಿಯಂ ರಂಭೆಯ ಕೇಳಿಕೆಯಂ ಭೃಂಗೀಶನ ನರ್ತನಮಂ |

---

[1] ಬಿಧಿದಿಪ್ಪ (ಅ). [2] ಪರೀತ, ಧರಾತಳದೊಳಗುಳ್ಳ (ಕ.ಗ) [3] ನ್ನೀ (ಗ).

ವಾರಿಜಪುತ್ರನ ವೇದವ ಚಂಡೇಶನ ಕೈ
ವಾರವನಾಲಿಸುತಾನಂದದೊಳಖಿಳಕ್ಕಾ
ಧಾರಂ ಭವದೂರಂ ಸುಖಸಾರಂ ಮಹಿಮಾಗಾರಂ ಮೆಱೆದಿರುತಿರಲು
॥ ೧೮ ॥

ಸರಸಿಜಭವ ಸರಸಿಜಲೋಚನ ಸರಸಿಜರಿಪು
ಸರಸಿಜಮಿತ್ರಂ ಮೊದಲೆಂದೆನಿಪೆಲ್ಲಾ ದೇ
ವರ ಲೋಕಂಗಳ ಹೊಕ್ಕವರವರುಪಚರಿಸಿದ ಸನುಮಾನದ ವಂದನೆಯ ।
ಹರಕೆಯನಭಿಷೇಕವ ಸೇಸೆಯನುಡು
ಗೊರೆಯಂ ಭರವಸದಿಂ ಕೈಕೊಳುತಿನ್ನಳಿದಾ
ಸುರಪರಿವೃತ ಪರಮನನೆಱಗಿಸಿಕೊಂಬಾಸಕ್ತಿಯೊಳೆಯ್ದಿದನಾ ಸಭೆಗೆ ॥ ೧೯ ॥

ತಾವರೆಣ್ಣಿಂ ಮೊದಲಾದಾ ಸುರರೆಱಗುವ
ದೇವರದೇವಂಗೆಯ್ತಂದೆಱಗದೆ ಮುದದಿಂ
ತಾವೈವೇದಂ ತುತಿಸುವನಂ ತುತಿಸದೆ ಮುನಿಗಳು ಚಿತ್ತದ ಕಂಗಳಲಿ ।
ಭಾವಿಸಿ ನೋಡುವನಂ ನೋಡದೆ ಮುದದಿಂ ಗ
ರ್ವಾವಿಷ್ಟಂ ಶಿವನಿಂ ವಂದಿಸಿಕೊಳಲೆಳಸಿದ
ನೇವೇಳ್ವೆಂ ಕೆಂಡದ ತೊಡಿಗೆಗೆ ಮನವಿಟ್ಟರಗಿನ ಪುತ್ತಳಿಯೆಂತಂತೆ ॥ ೨೦ ॥

ಘನತೂರ್ಯತ್ರಯಮಂ ನೋಡುವ ಭರದಿಂ ದ
ಕ್ಷನನಭವಂ ಮನ್ನಿಸ ಮಱೆದನೆನಿಪ್ಪುದು ಪುಸಿ
ತನುವಿನ ರೋಮಂಗಳೊಳೊಂದೊಂದಱ ಮೇಲೊಂದೊಂದಂ ಮುಟ್ಟದ ಕಡೆಗೆ।
ಬಿನದದಿ ಹರಿದಾಡುವ ಕೋಟಿ ಬ್ರಹ್ಮಾಂಡದ
ನೆನಪಿಲ್ಲೆನಲಂತವಱೊಳಗೊಂದರ ಕಡೆಗೊಂ
ಟಿನ ಹಳ್ಳಿಯ ಹೊಳ್ಳುಗಳೊಂಬತ್ತರೊಳೊಬ್ಬನನಿವನಂ ಬಲ್ಲನೆ ಶಿವನು
॥ ೨೧ ॥

ಮರುಳಂ ಬಗೆಯದೊಡೇಂ ಬಗೆಯಳೆ ಮುಗಳೆಂದಾ
ತರುಣಿಯನಾಲಿಸಿ ಪತಿಯಾದರಿಸದವರನಾ
ದರಿಪುದು ಸತಿಗ್ಗತಿಹಿತವಲ್ಲೆಂದೊಲ್ಲದೆ ನಿಂದಳೊಯಂತಲ್ಲದೆ ಬೇಱೆ ।
ಧರಣೀಶನ ಮಕುಟದ ಕಳಶದ ಮುತ್ತಿಳಿದಾ
ದರದಿಂ ತಾಂ ಜನಿಸಿದ ಸಿಂಪಂ ಕಂಡಂತೆ ವೊ
ಲಿರೆ ನಿಂದಂ ದಕ್ಷಂ ಮುಂದಿಯ ವಂದನೆಗೊಸೆದಾ ಸಭೆಯಂ ನೋಡಿದನು
॥ ೨೨ ॥

ಎಂತಹ ಪಾತಕವಂ ಮಾಡಿದನೋ ಮಾಡದೊ
ಡಿಂತೀ ಶಿವನುಂ ಶಿವೆಯುಂ ಮನ್ನಿಸರೇಕಿವ
ನಂತಸ್ಥವನಱಿಯದೆ ನಮಿಸುವುದನುಚಿತವೆಂದೊಲ್ಲದೆ ಸಭೆ ಸುಮ್ಮನಿರೆ ।
ಚಿಂತಾಕುಂತಂ ತನುವಂ ತಟ್ಟಲ್ ಬಳಿಕಂ
ತಿಂತೆಂದುಪಮಿಸಬಾರದ ಸಂತಾಪದೊದವ
ಮಂತಣಗೃಹಕ್ಕೈತರುತಿರ್ದಂ ಕೋಪಾವೇಶದೆ ಮುಂದಱಿಯದ ಖಳನು
॥ ೨೩ ॥

ಕಱಿಗಟ್ಟಿದ ಬಿರುಗೋಪದ ಮಱಹಿಂದಂ ಮುಂ
ದಱಿಯದೆ ಪೊಱಮಟ್ಟೆನೆನುತ್ತಂ ತನ್ನಂ ತಾಂ
ಹುಱಿಗುಟ್ಟಿಕೊಳುತ್ತಂ ಪೆಱರ ಧನಿಯಾದರೆ ಕರೆಯರಲಾ ಎಂದೆನುತ ।
ಕಿಱಿದೆಡೆಯಂ ನಡವುತ್ತಂ ನಿಂದಿರುತಂ ಕುಱು
ಕುಱು ಮೆಟ್ಟುತ ಬರ್ಪವರಂ ಮಿಗೆ ಬಗೆವುತ್ತಂ
ನೆಱೆ ಸುಯಿವುತ್ತಂ ಬೈವುತ್ತಂ ಜಿನುಗುತ್ತಂ ನಡೆದಂ ಪಾಪಾತುರನು ॥೨೪॥

ಪಱಪಱಿಸುವ ಭೂಪಾಲರನದಿದೆನ್ನದೆ ತ
ತ್ತಱದಱದಮರರನೆಱಗಿಸಿಕೊಂಡೆನ್ನ ಘಟನ
ಹೆಱವಡೆಗೀ ಬನ್ನಂ ಬಂದೆಮಗಿನ್ನಿರವೇತಕ್ಕೆಂಬುಬ್ಬೆಗದಲಿ ತಾಂ ॥

---

೧. ತಾನೆ (ಕ, ಗ)

ನೆಜಿ[3] ಚೀತರಿಸಿದ ಚಿಂತಾಚಿತ್ರವೊ ಸಲೆ ಸ್ವೈ
ವೆಜಗಿನ ಸಾಕಾರವೊ ಕೋಪದ ಕರುವಿನ ಕಂ
ದೆಜವೆಯೊ ಎಂಬಂತಿರೆ ಬಂದಂ ಪುರವೊಕ್ಕಂ ನಿಂದಂ
ನಿಜ ಭವನದಲಿ ||೨೫||

ನಡೆತರಲಿತ್ತಂ ತನಗಿದಿರ್ವರಲನುಮಾಡಿದ
ಪಡಿಯ ಗಜವ್ರಜದುರವಣೆಯಂ ತುರಗಂಗಳ
ಗಡಣದ ಗರುವಿಕೆಯ ಪದಾತಿಯ ಪಸರದ ನಾನಾ ವಾದ್ಯಂ
ಬೊಬ್ಬಿಡುವ |
ಸಡಗರವಂ ಬಿರಿದೆತ್ತುವ ಕಹಳೆಗಳಂ ದನಿ
ಗೊಡುವ ಮಹಾ ಭೇರಿಯ ಭೂರಿಸ್ವನಮಂ ಕಂ
ಡಿಡಿಕಿದನುಪ್ಮಳವಂ ತುಡುಕಿದ ಗರ್ಭದೆ [1]ಸಿಬೋ೯ಗೆ[1]ಯಂ
ಕೊಸರಿದ[2]ನೆನಲು[2] ||೨೬||

ಜನ್ನವ ಮಾಡುವೆ ದೇವತ್ವವ ಸುಡು[3]ವೆಂ ಬಲು[3]
ಬನ್ನಂಬಡಿಸುವೆ ಶೂಲಿಗೆ '[4]ತಾಂ'[4]ನೆಜಿ[3] ಮುನ್ನಿನೊ
ಲುನ್ನತಿಯಿಂದಿರ್ದೊಡೆ ಕಡೆಗನ್ನೆನ್ನಟ್ಟಿಯ ಮೇಲಿರ್ದವ
ನೆಂದೆನುತ |
ತನ್ನಂ ಬರಿಸುವೆನೋಲಗಕಿಂದೋಲಗದೊಳ್
ಮನ್ನಿಸದಿರ್ದಮರರ [5]ತಲೆ[5]ಗಡಿವೆನೆನುತೆ ನುಡಿ
ದನ್ನರಕಾಪೇಕ್ಷಂ ಪಾತಕವಕ್ಷಂ ರೌರವಕುಕ್ಷಂ ತೊಡೆ
"[6]ಹೊಯ್ದು[6]" ||೨೭||

1 ಗಿಜ್ಜೋಗೆ(ಕ.ಚ). 2 ಪೆನಲು (ಕ) [3] ಪೆಂಸುಜಿ, ಪೆನುಜಿ (ಗ,ಚ) [4] ತಾನೆ (ಕ,ಗ,ಚ) [5] ತಲೆ(ಕಗ) [6] ಪೋಯ್ತು(ಗಚ)ಜಿ

ಕರೆ ಕರೆ ಮಂತ್ರ ವಿದಗ್ಧನನೆಂ[1]ದಿರದಾಗಳ್[1]
ಕರೆಸಿ ಸಮಂ[2]ತಾಲೋ[2]ಚನೆಯೊಕ್ಕಿಂದೊದವಿದ
ಪರಿಭವಮಂ ತಗ್ಗಿಸಿ ರುದ್ರನ ಸರ್ವೇಶತ್ವಮನೆನಗಿತ್ತಾತಂಗೆ |
ಪರಿಭವಮಂ ಕುಡಬಲ್ಲ ಮಹಾಯಾಗವನಾ
[3]ಸು[3]ರದಿಂ ಮಾಡುವೆನದಕಾವುದು ಬೇಕಾದುದ
ತರಿಸೇಳೇಳೆಂದವಸರಿಸಿದೊಡಾತಂ ಬಳಿಕಿಂತೆಂದಂ ಪತಿಯೊಡನೆ ||೪೮||

ಎಲ್ಲಾ ವಸ್ತುಗಳಂ ಪಡೆಯಲ್ ಬಲ್ಲುದು ಧರೆ
ಯಲ್ಲದೆ ಧರೆಯಂ ಪಡೆಯಲ್ಬಲ್ಲ ಸುವಸ್ತುಗ
ಳಿಲ್ಲೆಂಬುದನಱಿಯಾ ಶಿವನೊಲಿದೊಡೆ ಯಾಗಸಹಸ್ರದ
ಫಲವಂ ಕುಡ[4]ಲುಂ[4] |

ಬಲ್ಲಂ ತಾನಲ್ಲದೆ ಶಿವಪದವಿಯನೀಯ
ಲ್ಬಲ್ಲವೆ ಯಾಗಂಗಳದೇಕೆಲ್ಲಿಯುಂ ಸಲ್ಲದ
ಹೊಲ್ಲದ ಕಾರ್ಯವನುದ್ಯೋಗಿಸಿದಪೆಯೆಂ[5]ದೊ[5]ಡೆ ಮುಸಿದಿಂ
ತೆಂದಂ ಖಳನು ||೪೯||

ಮುನಿದು ವಸಿಷ್ಠಂ ಶಾಪಿಸಿದ ಮಹಾ ಭೂಪನ
ಜನಕನ ತಾನಟ್ಟಲ್ ಸಗ್ಗಂಬೊಗಿಸಿದ ಬ್ರೊ
ಮ್ಮನ ಕೂಡಣ ಮುನಿಸಿಂ ಕೌಶಿಕಮುನಿ ಸಕಲವ ಹುಟ್ಟಿಸನೇಂ
[6]ಹೋಮ[6]ದಲಿ|
ಘನ ಯಜ್ಞದ ಮುಖದಲು ಹಡೆಯಲ್ಬಾರದೆ ಯೆನ
ಗನುಕೊಳ್ಪದುದಾವುದು ಬೇಡೆನ್ನದೆ ನೀ ನೆ
ಟ್ಟನೆ ತೊಡಗುವ ಹದನಂ ನುಡಿಯ[7]ಲ್ಲಾ[7]ದೊಡೆ ಕೆಡಹುವೆ
ನೆಂದನು ಪಾತಕನು ||೫೦||

---

[1] ದಾತುರದೊಳ್(ಅ). ದುರದಾಗಳ್ (ಚ) [2] ತ್ರಾಲೋ (ಅ) [3] ತು(ಅ). [4] ಲು (ಕ,ಗ,ಚ). [5] ದ(ಕಚ). [6] ಮೋಹ (ಕ). [7] ಲ್ಲ(ಗ).

ಕೊಂ[1]ದೊಡೆ ಕೊಲು ಯಾಗಂ ಬೇಡ ಕರಂ[2]ಬಿಡು ಬೇಃ
ಡೆಂದೆನೆ ಬಿಡೆಬಿಡೆನತಿಹೊಲ್ಲಂ ಲೇಸಯ್ಯೋ
ನಿಂದೆಗೆ ನೆಲೆಯಹುದಾಗಲಿ ಕೆಟ್ಟಪೆ ಕೆಡುವೆಂ [3]ಮಾಣೆಂ ಮಾಣೆಂ
ಹೋಗು ।
ನೆಂದನೆ ಮುನಿಯಳೆ ಹೈ ಬಿಡು ಮುನಿಯಲಿ ಬಱಿದೆರೆ
ಸೊಂದಕ್ಕೆಡೆಯುಂಟೇಯುಂಟೆನ್ನೊಡೆಯನೆ ಮನ
ಬಂದಂದದೆ ಮಾಡುವುದನೆ ಬಿಡು ಬಿಟ್ಟೊಡೆ ನಗು
ನೀನೆಂದಂ ಖಳನಂದು ॥೩೧॥

ಕಡೆಗೆ ಗಣಂಗಳು ಹುಗದೆಡೆಯಾವುದು ಯಾಗವ
ತೊಡಗುವೊಡನೆ ಕಾಶಿಗೆ ಪಡುವಲು ರಮ್ಯಾಶ್ರಮ
ದೆಡೆಯಣ ಕನಖಳದಲಿ ಮಾಡುವ ಷೋಡಶಋತ್ವಿಜರಾಱು
ಮುನೀಶ್ವರರು ।
ನಡೆಸುವ ಪತಿಯಾವಂ ಕಮಳಾಕ್ಷಂ ಕಾಹಿನ
ಕಡುಗಲಿಗಳದಾರು ದಿಶಾಧಿಪರಿವರೆಂದುಂ
ಮೃಡಹಿತಯಾಗಕ್ಕಡಿಯಿಡರೆದ್ದಱಿಗರು ಕೇಳೆಂದೊರೆದ ಚಮೂವರನು
॥೩೨॥

ಇಂದಾನುಂ ಕರೆ[4]ದೊ[5]ಡೆ ಬಾರದ ಮುನಿವರರಂ
ಕೊಂದಿಕ್ಕುವೆನೆನೆ ಕೊಂದೊಡೆ ಸಾವರು ತಪ್ಪಿಸಿ
ಬಂದಹರೆಂಬೀ ಮಾತಂ ಮಱೆಯೆನೆ ಬರಿಸುವುದಕ್ಕಾವುದು
ಬುದ್ಧಿಯೆನೆ ।

---

[1] ದ(ಕ). [2] ಬೇಕು ಬೇ (ಕ,ಗ,ಚ) [3] ಮಾಣ್ಮಾಣೆಂ (ಕ,ಗ,ಚ) [4] ವ(ಕ,ಗ)
[5] ದ(ಕ,ಗ,ಚ)

ಇಂದುಧರನ ನಿಂದೆಯನಾಡಪೆ ಚದುರಿಂ ಕರೆ
ತಂದಧ್ವರಮಂ ಮಾಡಿಸು ಬಲುಹಂ ತೋಱಿದೊ
ಡೆಂದುಂ ನಡೆಯದು ನಡೆಸುವೆಯಾ[1]ದೊಡೆ[1] ಮಂತ್ರವಿದೆನೆ
ಕೈಕೊಂಡಂ ಖಳನು ||೩೩||

ಉರಗೇಂದ್ರನ ಪದಮಂ ಭೂನಾಗದ ಮಱಿ ಸುರ
ಗಿರಿಯ ಮಹತ್ವವನೆಣೆಮೊರಡಿ ಸಮುದ್ರದ ಭಾ
ಸುರತೆಯನಡವಿಯು ಕಿಱುಗೆಱೆ ಕಲ್ಪದ್ರುಮದವುದಾರಮನೆಣೆಗಿದ
ತಾಳ್ದಿ!

ಭರದಿಂ ಪಡೆಯಲ್ ಬಯಸುವವೋಲಪ್ರತಿಮನ
ಪರಮೇಶನ ಸರ್ವಜ್ಞತ್ವವನಾದರದಿಂ
ಕರದಂ ಮಿಗೆ ಬಯಸುತ ಗಣಕರ ಕರದ........ಸಾಕ್ಷಣದಿಂದಂ ||೩೪||

ಹರಿಯಲ್ಲಿಗೆ ವಾಣೀ[2]ಶ್ವ[2]ರನಲ್ಲಿಗೆ ದಿಗಧೀ
ಶ್ವರರಲ್ಲಿಗೆ ಸರ್ವಾಮರರಲ್ಲಿಗೆ ವಿದ್ಯಾ
ಧರರಲ್ಲಿಗೆ ನೆಱೆ ಕಿನ್ನರರಲ್ಲಿಗೆ ಸಲೆ ಖೇಚರರಲ್ಲಿಗೆ ಮನ್ನಣೆಯ।
ಗರುಡೋರಗ ಗುಹ್ಯಕ ಗಂಧರ್ವ ಮರುದ್ಗಣ
ತುರಗಾಸನ ಮುಖ್ಯರ್ ಮತ್ತ[3]ಪರಿವರೆನ್ನದೆ
ಬರೆಬರೆದಟ್ಟಿದನಿಂದೇ ಬರಬೇಕೆಂದೋಲೆಗಳಂ ಪಾಪಾತುರನು ||೩೫||

ತಪ[3]ಕದೊಳಿಂ[4]ದೆನ್ನದೆ ಕಾಶಿಗೆ ಪಡುವಲು ತೋ
ಱುವ ರಮ್ಯಾಶ್ರಮದೆಡೆಯಣ ಕನಖಳವೆಂದೆನಿ
ಸುವ ಪುರದಲಿ ನೆರೆದೊಗ್ಗಿಂ ಜಗದಗಲದೊಳೋಲಗವಿ[4]ತ್ತು[4]
ಸಭಾಜನಕೆ।

---

[1] ಧಡೆ(ಕ,ಗ,ಚ) [2] ವ(ಕ) [3] ತಪಕದಿ(ಕ); ತಪಗದಿ(ಗ,ಚ) [4] ತ್ರ(ಕ,ಚ)

ಶಿವಶಿವ ಯೆ ನಗನುಮತಿಕೊಟ್ಟುದ್ಧರಿಪುದು ಯಾ
ಗವನೊಂದಂ ಮಾಡುವೆನೆಂದಾ ದಕ್ಷಂ ಬಿ
ನ್ನವಿಸೆ ಶಿವದ್ರೋಹಮಿದೆಂದಱಿಯದೊಡಂಬಟ್ಟರವರು
ತಮ್ಮಳಿವಿಂಗೆ ||೩೬||

ಪ್ರೇಮದಿ ಯಾಗಾಭಿಜ್ಞರ ಕರೆದತ್ಯಗ್ನಿ
ಷ್ಟೋಮಾಗ್ನಿಷ್ಟೋಮದಿನತಿರಾತ್ರದಿನಪ್ತೋ
ರ್ಯೋ[1]ವೋ[2]ದಂ ಷೋಡಶ[3]ವಿಶ್ರುತ ಯಾಗಂ[4]ಗಳೊಳಾವುದು
ಲೇಸಾ[5]ದು[6]ದನು |
ಕಾಮಿಸಿ ತೊಡಗುವುದೆಂದೆನಲವರತ್ಯಗ್ನಿ
ಷ್ಟೋಮವನೆನೆ ಯಜ್ಞದ್ರವ್ಯವ ತರಹೇಳ್ದು
ಭೂಮಿಯ ಶೋಧಿಸಿ ಶಾಲಾವೇದಿಕೆಗೊಂಡಂಗಳ ಮಾಡಿಸ
ತೊಡಗಿದನು ||೩೭||

ಘನ ಕುಂಡವ ಡಮರುಗ ವೇದಿಕೆ[1]ಯಂ[2] ತೆಂಕಲು
ಧನುನಿಭವರ್ತುಳವಂ ಮೂಡಲು ಪಡವಲು ಚೌಕವ
ನನುವರ್ತಿಸಿ ಮುಂದೆ ಹವಿಪ್ಪಾನ ಸ[3]ದ[4]ಸ್ಯಂ ದೇವ ಯಜನ ಯೂ
ಪವನೆಲೆ |
ವಿನುತ ಪ್ರಾ[5][ಗ್ವಂಶಂ][6] ಸೌಮುನಿ ಪತ್ನಿ ಸದನವಂ
ದೆನಿಸುವ ಶಾಲಾಗರ್ಭಿತ ಶಾಲೆಯ ಕೈಗೆ
ಯ್ದನು ಜನ್ಮದ ಜನದಳಿವಿನ ಗತಿವದೇಹದರ ಸೆರೆವನೆಗೆ
ಯ್ದಂತೆ ||೩೮||

---

1 ಮಾ(ಕ,ಗ,ಚ) 2 ವಾಜಪೇಯ(ಕಗಚ) 3 ಪು(ಕ) 4 ಯಂ(ಕಗ) 5 ರ(ಅ)
6 ಗ್ವಾ ಸಾ(ಅಕಗಚ)

ಹೊಸ ಮೊರ ಸುರಗಿ ಕಪಾಲ ವುಲೂಖ ಮೃಗಾಜಿನ
ಮುಸಲಂ [1]ಸೂರ್ಪ ದ್ರುಪ ಸ್ರುಕ್ ಸ್ರುವ[1]ತಪ ನಿಗ್ರಹ
ಕುಶ ಸೋಮ[2]ವುವಾ[2]ರುಣಿ ಮಥನಿ ಮಹಾವಿರ[3]ಣಿ[3] ವಿಷಾಣಂ
ಶಂಖಂ ।
ಶಶಕೋಪರವಾಸಂಧಿಗಳೆನಿಸುವ ಪರಿಕರ
ವಿಸರವನೊದವಿಸಿ ಬಾಧಿರಿಯುಪಶಮಿದಜ
ಪಶುವಂ ಶಸ್ತ್ರಂ ರಜ್ಜುಗಳಂ ತರಿಸಿದನಾ ದ್ರೋಹಾಲಂಬಕನು
॥೩೯॥

ಹೋತೃಸದಸ್ಯ ಬ್ರಹ್ಮಾಧ್ವರ್ಯುಮಹಾಪ್ರ
ಸ್ತೋತ್ರ [4]ಸುತುಷ್ಟಾಗಿ[4]ಧನುರ್ವಾ[5]ಜ್ಯಾ[5]ವಾಕು
ಸ್ತೋತೃ ಪ್ರತಿ ಹರ್ತೃ ಸುಮೈತ್ರಾವರಣೋದ್ಗಾತ್ರಂ ನೇಷ್ಟಂ
ನೇತೃವನು
ಹೋತೃ ಬ್ರಹ್ಮಾಂಶುಗಳೆನಿಸುವ ಹದಿನಾಱಿ
ಕ್ಕೋತಾಸನವಿತ್ತನು ಸಹಮರಣಾಸನ್ನ
ಪ್ರೀತನು ಯಜ್ಞದ ರಕ್ಷೆಗೆ ಕಾಹನು ಹೇಳಲು ಕರೆದಂ ದಿಗುಪಾಲರನು
॥೪೦॥

ಕುಂದಡೆ ತಂತಮ್ಮೆಡೆಯಂ ತಾವೇ ರಕ್ಷಿಪು
ದೆಂದಷ್ಟದಿಶಾವರರಿಗೆ ಬೆಸನಂ ಕೊಟ್ಟು ಮು
ಕುಂದಂಗಗ್ರಾಸನವಿತ್ತೆಲ್ಲಾ [6]ಮಾನ್ಯ[6]ಗ್ರ್ಯಚಿತಾಸನಮಂ ಸಲಿಸಿ ।
ಸಂದ ಮಹಾದ್ರೋಹಿಯ ಮನೆಯಗ್ರದೆ ಕೊಂಬೆಸೆ
ವಂದದೆ ಕೆಯ್ಯೋಳ್ಕೋಡಂ ಬಂಧಿಸಿ ಮೃಗದೊ[7]ವ[7]
ಲಿಂದಾಚ್ಛಾದಿಸಿ ನವನೀತವನುದ್ವರ್ತಿಸಿದರು ಪಾಪಿಗೆ ಪಾತಕರು
॥೪೧॥

---

[1] ಸರ್ಪಿದ್ರುವಮನು ಶ್ರವು(ಅ); ಸೂರ್ಸದ್ರುವು ಶುಕ್ ಶ್ರುವ(ಗ, ಚ). [2] ದ್ವಪದ್ವಾ (ಕ, ಗ) [3] ಣ(ಕ, ಗಚ) [4] ತುಷ್ಟೋಗ್ನಿ(ಕ) [5] ಚ್ಯಾಂ (ಕ) ಚ್ಚಾ (ಗ) [6] ಸಾಮಾನ್ಯ (ಕ, ಗಚ) [7] ಗ(ಕ,)

ನೆನ[1]ದು[2]ರ್ಲೇಖನವಾ[2]ದಾನಂ[3] ಪಾತ್ರಾಸಾ
ಧನ ಸರ್ವದ್ರವ್ಯದ ಸಂಸ್ಕಾರಂ ಪರಿಷೇ
ಚನ ಪೂರ ಪರಿಸ್ತರಣಾದಿಯನೊದವಿಸಿ ಹೋಮ ಪ್ರಾರಂಭಕ್ಕಿನ್ನು |
ಅನುಮತಿ[5]ಯಾ[5] ಮುನಿವರರೆಲ್ಲಂ ಬಂದರೆ ನೋ
ಡೆನೆ ನೋಡಿ ದಧೀಚಿ ಮುನೀಶ್ವರನಿಲ್ಲೆನೆ ಚರ
ರನು ತಾನಟ್ಟಿದ ಕರೆತಾ ಹೋಗೆಂದುಱೆ[3] '[4]ಬೆಟ್ಟೇರಿಯೆ[4]' ಮೃತ್ಯುವ
ಕರೆವಂತೆ ||೪೨||

ನಿಂ[5]ದಿರೆ ಚರರುಂ [5]ಬಂದುಱೆ[3] ಪಂಪಾಧೀಶನ
ಮುಂದಣ ತೀರ್ಥದ ತಡಿಯ ತಪೋವನದೊಳ್ ಮುನಿ
ವೃಂದದ ನಡುವಿರ್ದ ದಧೀಚಿಗೆ ದಕ್ಷಂ ಕಳುಪಿದ ಹದನಂ ಬಿನ್ನವಿಸೆ |
ಎಂದೋಯೆಂದಾ ಹೋ[6]ತ್ರೋ[6]ಯಿಾಹೊತ್ತೀಶಂ
ಬಂದನೆಯದಿದೆನ್ನದೆ ಯಲ್ಲಾ ಬಂದರೆನಲ್
ಮುಂದೆದ್ದಂ ಪುಳಕದ ಪೂರಂ ನಡೆದಂ ತವಕದ ತವಸಿಧಿ ಸುಖ
ಮಯನು ||೪೩||

ಗಡಣದ ವೇದಂಗಳ ಬಗೆಯುಗದಜಹರಿಗಳ
ಸಡಗರ ಸಂಧಿಸದಪ್ರತಿಮುನನಭವನನೆ
ನ್ನೊಡೆಯನನೀಕ್ಷಿಸುವೆಂ ಮೆಯ್ಯಿಕ್ಕುವೆಸುಕ್ಕುವೆನಪ್ಪುವೆ
ನಡಿಗ ಳನೆ[7]ನುತ |
ಬಿಡುಜಡೆಯಿಡುಕುಱನೆಡಗೈಯುಲಿ ಸುತ್ತುತ್ತಳಿ
ದುಡೆದೋ[8]ವ[8]ಲಂ ಸಂತೈಸುತೆ ಭೂತಿಯನಂ[9]ತಿಂ[9]
ತಿಡುತುಂ ನಡೆತಂದು ದಧೀಚಿವ್ರತಿ ಹೊಕ್ಕನು ಯಾಗಸಭಾ
ಸದನವನು ||೪೪||

---

[1] ದೂ(ಗ) [2] ರಾನಂ(ಅ) [3] ಯೆ(ಕಗ) [4] ಬೆಟ್ಟೆರಿಯೆ(ಅ);ಚಿಟ್ಟೆರಿಯೆ (ಗ)
[5] ನಿಂದರದೆ ಚತರಂ(ಕ,ಗ) [6] ಹೊತ್ತಿ ಹೊತ್ತಿಂದುಧರಂ(ಕ) [7] ಳಿಗೆ(ಕ,ಗ)[8] ಗ(ಅ)
[9] ತಂ (ಕ,ಗ)

ಕಡುತವಕದೊಳಗಾಪ್ರಸನದೊಳು ವೇದಂಗಳ
ನಡುನೆತ್ತಿಯೊಳೆಲ್ಲಾ ದೇವರ ಮಕುಟಂಗಳ
ಕುಡಿಯೊಳು ಮಂತ್ರಂಗಳ ಮಸ್ತಕದೊಳು ಕಾಣದೆ ಮಱುಗುತ್ತಿ
ಮುಂದಿಗೆ ತಿರುಗಿ|

ಜಡೆಗಳ ತಳ್ತವರೊಳು ಕುಂಡಲವುಳ್ಳವರೊಳು
ತೊಡಿಗೆಗಳೆಸೆವವರೊಳು ಹೆಗ್ಗುಱುಹಿನ ಹೆಸ್ಸ್ರಿಗ
ಳೊಡೆಯನ ಕಾಣದೆ ಸುಟ್ಟುರುಹುವೆನೀ ಯಾಗವನೆಂದುಱಪಟ
ವಟಿಸಿದನು ||೪೫||

ಘುಡಿಘುಡಿಸುತ್ತೀನೋ ದಕ್ಷ ಪುರಾಂತಕನಾ
ವೆಡೆಯೆನಲು ಪುರಾಂತಕನೆಂದೊಡದಾರಧ್ವರ
ದೊಡೆಯನದೇಕೀ ಯಾಗವ' ರಕ್ಷಿಸ ಬೇಡವೆ ಬೇಡೇಂ
ಕಾರಣ ಬೇಡ|

ನುಡಿಯದಿರವನಿಲ್ಲಿ[1] ಗಯೋಗ್ಯನುಯಲ್ಲಲ್ಲಂ[1]
ಬಿಡವೇಕಲ್ಲೆನಲೆಲುಡೊಡುವನು ತೊ[2]ವ'ಲುಡುವನು
ಸುಡುವನು ತಲೆನಿಡಿವನು ಪಡುವನು ಪ್ರೇತೋರ್ವಿಯೊಳೆಂದಂ
ನುಂದಱಿಯದ'ನು' ||೪೬||

ಘನಮಂಗಳಮಯನಾವುದನುಟ್ಟನದು ಪುಸೀ
ತನದೇನಂ ತೊಟ್ಟೆನ್ನೊಡೆಯನದೇನಂ ಸು
ಟ್ಟನದಂ ಬೇಡಲಿ ಸನುಮಾರ್ಗದೆ ನಡೆದಿಂತೀ ಹರಿಯಜಸುರರು|
ಮುನಿಕುಲವೆರಸೊಡವರಿಸೊಕ್ಕುದನುಂಡಿತ್ತುದ
ನನುಭವಿಸಿ ಸಮಂತಂದೊಲಿದಂತಾಗರೆ ಹೇ
ಳೆನಲೀ ಮಹಿಮೆಗಳೆನ್ನಳಿಯನೆನಿಸಲಾರವು ಕೇಳೆಂದನು ಪಾತಕನು
||೪೭||

---

1 ಗೆ ಯೋಗ್ಯನೆಯಲ್ಲಲ್ಲ(ಕ,ಗ) 2 ನ(ಕ,ಗ) 3 ಖಳನು(ಗ)

ಹರಿಯಜ ಸುರರಳಿವಂತಳಿಯುಂ ನಿನ್ನೀಯ
ಧ್ವರವಳಿವಂತಳಿಯುಂ [1]ನೀನ[1]ಳಿವಂತಳಿಯುಂ
ಶರಣೆಂದರನಳಿಯುಂ ಮಲೆತವರ್ಗಳನಿರದಳಿವಂ ನೆಱೆ[3] ನಿನ್ನಳಿಯನೆನೆ।
ಅರೆವೆಣ್ಣ ಕುಲೀನನನಾಥನನಾಮಿಕನೂ
ವ್ವರೆಯುಱಿಯಲಬದ್ಧಂ ಭವ ನಿರ್ಗುಣದೈವಂ
ಹರನಾತನ ನೀಂ ನೆನೆಯದಿರೆನೆ ಮುನಿ ಕಡು[2]ಗೋ[2]ಪಿಸಿದನದೇಂ
ಬಣ್ಣಿಸೆನು ॥೪೮॥

ಕಿಡಿಗೆದಱಲು ಕಣ್ಣುರಿಗೆದಱಲು ಬಿಱುಸೆನಿಸುವ
ನುಡಿ ಹೊಗರಿಡೆ ಮೊಗ ನಡುಗಲು ಕೈಯಲುಗಲು ಪು
ರ್ಬಿಡಿ ತುಂಬಿಡೆ ಮಿಸುಪಧರಂ ಸಿಡಿಯಲ್ ಪೂಸಿದ ಭಸಿತಂ
ಧೂಮವನನುಕರಿಸೆ ।
ಹಿಡಿದ ಕಮಂಡಲುಜಲ ಕುದಿಯಲು ರೋಷಂ ಕೌ
ಱಿಡೆ ಲಾಕುಳ ಹೊಗೆಯಲು ಭರ್ಗನ ಭಾಳಾಕ್ಷನ
ಜಡೆವೊ[4]ತ್ತ್ರವರೊ[4]ಡೆಯನ ನಿಂದೆಗೆ ಮುನಿ ಮುನಿದಿಂತೆಂದಂ ಸಭೆ
ಕಂಪಿಸಲು ॥೪೯॥

ಸುಡು ಸುಡು ಕಡುಪಾತಕ ನಿಂದಕ ನಿನ್ನ ಶಿರಂ
ಹುಡಿಯುಂ ಕಾಱಲಿ ನಿನ್ನಧ್ವರ ತಡೆವಿಡದೆಡೆ
ಗಡಿಯಲಿ ಹರಿ ಹರಣವನೀಗಲಿ ಪೂಷನ ಹಲುಹೋಗಲಿ ಕಾಲನ
[5]ತೋಳುಗಳು[5] ।
ಕಡಿವಡೆಯಲಿ ಭಗನಯನಂ ನೋಯಲಿ ಬೊಮ್ಮನ
ಮಡದಿಯ ನಾಸಿಕವರೆಯಾಗಲಿ [6]ಮಿಕ್ಕರು ಹುಲು
ವಿಡಿಯಲಿ ದಿಗಧೀಶರು [6]ಭಂಗಿತರಾಗಲಿ ಎಂದಿತ್ತನು ಶಾಪವ
[7]ಮುನಿಪಂ[7] ॥೫೦॥

---

1 ನಿನ್ನ (ಕ,ಗ) 2 ಕೋ (ಕ) 3 ಘೂಸುದ ತೆಱದಿಂ (ಅ) 4 ತ್ರೆಂತೊ (ಕ,ಗ)
5 ತೋಳಳ್ (ಅ) 6 ದಿಗಧೀಶ್ವರರು (ಕ,ಗ) 7 ದೂಷಕ ಮೇಘಾಸಿಳನು (ಕ,ಗ)

ಒಡೆಯನ ಕಣ್ದುಣಬಂದಗ್ನಿಯ ನಾಲಗೆ ಕೊ
ಯ್ವೆಡೆಯಲಿ ಸುರರೆಲ್ಲಂ ಮಡಿಯಲಿ ಮಿಕ್ಕರು ಹುಲು
ವಿಡಿಯಲಿಯಱಿಯದೆ ನೆರೆ[1]ದಷ್ಟಾಶೀತಿಸಹಸ್ರ[1] ಮುನಿಸ್ತೋಮಂ
ಕೂಡಿ|
ವೃಡನಡಿಗಳಿಗೆಡೆದೆಱವಾಗಲಿ ವೇದಾರ್ಥದಿ
ನಡೆಯದೆ ನರಕೌಘಾಪೇಕ್ಷಿತರಾಗಲಿ ಹಿಡಿ
ಹಿಡಿ ಶಾಪವನೆಂದಿತ್ತಾಗಳೆ ಹೊಱವಂಟಂ ಗಜಬಜಿಸೆ ಸಭಾಜನವು
||೫೧||

ನಿಂದೆಯ ಯಜ್ಞವಿದೆಂದಱಿಯೆವು ಶಿವ ಒಂದಪ
ನೆಂದಿರ್ದೆವು ನಾವೀ ಶಾಪವ ಹೊಱುವವರ
ಲ್ಲೆಂದೆನುತಲಗಸ್ತ್ಯ ವಸಿಷ್ಠಂ ಭೃಗು ಗೌತಮದೇವಲ್ಯ್ಯಪ
ಮನ್ಯುಗಳು ||
ನಿಂದಿರದೆ ದಧೀಚಿಯ ಕೂಡಡಿಯಿಡು ವೇಳೆಯೊ
ಳೊಂದೊಂದಱ ಹಿಂದೆಂಟು ಸಹಸ್ರಂಬರ
ಲಂದು ತೊಡಗಿ ಮೂವತ್ತಿರ್ಚ್ಛಾಸಿರವಾದುದು ಶಾಪಕ್ಕೊಳ
ಗಾದವರು ||೫೨||

ರಕ್ಕಸಿ ಹೀರಿದ ಕುಂಭಕ್ಕೆಣೆಯಾಯಿತು ಮುನಿ
ಹೊಕ್ಕೆದ್ದುಳಿದ ಸಭಾಜನವಿನ್ನೇಗುವೆವೆನೆ
ಕಕ್ಕುಲಿತೆಯ ಬಿಡಿ ಮುನ್ನವೆ ಬರಲಾಗದು ಬಂದಿನ್ನೋಡುವುದತಿ
ಕಷ್ಟಂ |
ತೆಕ್ಕನೆ ಹೋಮಂ ನಡವುದ ಲೇಸಿದ (?!
ಲೆಕ್ಕಿಸಿ ಕಡುಹಿತನೊಲು ತೊಡಗಿಸಿ ನೆಱೆ ಬಿ
ದ್ದಿಕ್ಕಿಸುವೆನಿದಕ್ಕೆನುತಯ್ದಿದನೀಶನ ಸಭೆಗಿತ್ತಲ್ ಮುನಿಪತಿ
ನಾರದನು ||೫೩||

---

1 ದಷ್ಟ ಸಹಸ್ರಮೊಳಸುವ (ಅ) 2 ಡಲೇಱಿಕೊ (ಕ)

ಕ್ರತುವರರೆಲ್ಲರ್ ಪೋದರು ವಿಷ್ಣುಪ್ರಾಯ
ಶ್ಚಿತವಂ ಮಾಡುಭ[1]ಯಾ[1]ರಣಿಯೊಳ್ಮಥನಿಯು ಪೊಸೆ
ಘೃತವಮಂ ತಾಪಿಸು[2]ಯೂಪಾ[2]ಸಿದ್ಧಿಯನೊದವಿಸು ಸೋಮ
ದ್ರವಮಂ ಹೇಳಿಸು।
ನುತಗಾಯತ್ರಿಯನುಷ್ಟುಪ್ [3]ಜಗತೀ ಶಕ್ವರಿ:
ಯತಿಶಕ್ವರಿ ಯುಷ್ಣಿಕ್ಕುಪದೀಕ್ಷನ[3]ಮಂತ್ರಾ
ಹುತಿಗೆ ಸ್ವಾಹಾಸ್ವಧದಿಂಧನವಮಂ ತಾಯೆಂದಮರ ರವಂ
ಪೊಣ್ಮಿದುದು ||೫೪||

ಮಸೆ ಶಸ್ತ್ರವ ಪೂಜಿಸು ಯೂಪವ ನೇಣಿಂ ಬಂ
ಧಿಸುವಜಪಶು '[4]ವೊ'ಜಲದ ಪೊಲ್ಗಂಟಲಮುಱಿ ಮ
ರ್ದಿಸು ಬಳಿಕುಪಚರಿಸಂಗಂಗಳನರ್ಚಿಸು ಕೊಯಿ ಪಲಲವ ತೆಗೆ
ಶೋಣಿತವ।
ಬಸಿ ಸುಲಿ ವಪೆಯಂ ಕಾಸಾಹುತಿಯಂ ಕೊಡು ವಿ
ಕ್ಕೆಸರಂ ಪ್ರೋಡಾ[5]ಶ[5]ಪ್ರಾಶನವಮಂ ಮಾಡೆಂ
ಬ ಸರಂ ಹೊಲಗೇರಿಯೊಳೊಗೆವಂತೊಗೆಯುತ್ತಿರೆ ಸಭೆಯೊಕ್ಕಂ
ನಾರದನು ||೫೫||

ಬಂದಗಜೇಶಂಗಘನಾಶಂ[6]ಗಕ್ಲೇಶಂ
ಗಂದಾನಂದವ್ರಜದಿಂದಂ ವಂದಿಸಿ[6] ರಿಪು
ವೃಂದ ವಿಮೋಚನ ರಚನಾವಚನ ಪ್ರಚಯದೆ ಕೀರ್ತಿಸಿ ಕೆಲಸಾರುತಿರೆ।
ಇಂದುಧರಂ ಕಂಡೆಲ್ಲಿರ್ದೆಯೊ ದುಗುಡಾಂಬುಧಿ
ಮಂದರ ನುಡಿ ನುಡಿ ಬಾ ಹತ್ತಿರ ಬಾ ಬಾ[7]ಬಾ
ಯೆಂಮೊಡೆ ದಕ್ಷಾಧ್ವರ ಸಾಕ್ಷಾಟವಿಯೊಳು ಬಿತ್ತಿದ ಬೇಗೆಯ
ಬೀಜವನು ||೫೬||

---

[1] ಭಯೋ (ಅ) [2] ಯಷ್ಪ (ಕ) [3] ತ್ರಿಷ್ಟುಪು ಜಗತೀ ಹುತಿಶರಿವೂಷ್ಟಿಕುಪದಿ
ದೀಕ್ಷದ (ಗ) [4] ಯೊ (ಕ. [5] [6] ಗೀಶಂಗಾ ನಂಡ (ಅ)

ರಾಗದಿ ದಕ್ಷನು [1]ಕೂತಿ[1]ರ್ದನದೇಂ ಕೂತನು
ಯಾಗಕ್ಕೇತಱ ಯಾಗಂ ನಿಮ್ಮಂ ನಿಂದಿಸಿ
ಯಾಗಂ ತೊಡಗಿತ್ತೆಂ[2]ದಿಂ[2]ದೀದೇವಾಗಂ ರವಿ[3]ಯೊಗೆವಾಗೀಗಾ|
ವೋಗೆಲ್ಲರ್ ಬಂದರೆ ಬಂದರದಱೊಳೆನ್ನವ
ರಾಗಿ ವಿರೋಧಿಸಿದವರಿಲ್ಲಾ ಉಂಟಾರ್ ಶಿವ
ಯೋಗೀಂದ್ರ ದಧೀಚಿವ್ರತಿಯೆನೆ ನಲಿದಂ ಶಂಬರಸೂದನ
ಸೂದನನು ||೫೬||

ತೆಕ್ಕನೆ ಹೇಳೆನ್ನವನೇಗೆಯ್ದನೆನಲ್ ಮದ
ಸೊಕ್ಕಿದ ಕರಿ ಕೊಳನಂ ಪೊಕ್ಕಂತಾ ಸಭೆಯಂ
ಹೊಕ್ಕಗ್ರಾಸನದೊಳು ನಿಮ್ಮಂ ಕಾಣದೆ ಘುಡಿಘುಡಿಸುತೆ
ಮಂದಿಗೆ ಶಿರು||

ಚಕ್ರಧರಂ ಸಹಿತೆಲ್ಲರ್ಗುಱೆ ಶಾಪವನಿ
ತ್ತರ್ಕೆಲಬರ ಹಿಂದೆ ವಸಿಷ್ಠಾದಿಗಳೊರ್ವರು
ಸಿಕ್ಕದೆ ಪೊಱಮಡಲುಳಿದವರೇ ನಡೆಸುತ್ತೈದರೆಯೆಂದನು ಸಾರದನು
||೫೮||

ಕಿನ್ನರಿಯರನಾಲಿಸುತಂಬಿಕೆ ಕೇಳ್ದಿಲ್ಲಿಯ
ಜನ್ನ[2]ದ ಮಾತೆನಲೆನ್ನಂ ಖಿನ್ನನ ಮಾಳ್ಪಧ
ಟಂ ನಿನ್ನಯ್ಯಂ ತೊಡಗಿದನೆನೆ ಘುಡಿಘುಡಿಸುತ್ತೆಱಗುವೆನಧ್ವರ
ಬಲವಂ|

ಬಿನ್ನಣದಿಂ ಬಿಡಿಸುವೆನಲ್ಲದಿರಲ್ ಕೆಡಿಸುವೆ
ಬನ್ನಂಬಡಿಸುವೆ ನಿಮ್ಮಡಿಯೆನ್ನಂ ಕಳುಪುವು
ದುನ್ನತಮೆನೆ ಬೇಡವ ಮನ್ನಿಸನಲ್ಲೆಂದನು ಕನ್ನೆಗೆ ಪನ್ನಗಧರನು||೫೯||

ಶಿವ ಸಿನಗಲ್ಲದ ಖಳನೊಳು ಮನ್ನಣೆಯಂ ಬಯ
ಸುವೆನೆ ಬಯಸಲು ಸತಿ[5]ಯೆ ಯದಾಕೆಂ[6]ದೆಲ್ಲವ
ನವಿಚಾರವನಱಿವೆಂ ಜಱಿವೆಂ ಮಱಿವೆಂ ವಾಯುದ ಪಿತವೆಸಂರ(?)|

---

[1] ಸಾರಿ (ಕ,ಗ) [2] ದೀ (ಕ) [3] ಯೋಗದಾಗಾ (ಕ) [4] ವ (ಕ,ಗ) [5] ಯೆ ಆವೇಕಿಂ (ಅ) [6] ರಂ (ಅ)

ಭುವನೋದರ ಬೆಸಸೆನೆ ಹೈ ಹದುಳಂ ಹೋಗೆನೆ
ತವಕದೆ ವಂದಿಸಿ ಬೀಳ್ಕೊಂಡೆಯ್ದುವ ಲಲನಾ
ನಿವಹವನಾಲಿಸಿ ನಿಟ್ಟಿಸಿ ಪಾಲಿಸಿ [1]ಬಂದ[1]ಡರ್ದಳು ಪುಷ್ಪಕ
ಮಧ್ಯವನು ||೬೦||

ಬಳಿಯೊಳು ಕಾಲ್ಗಾಸಿಂಗಭವಂ ಕಳುಪಿದ ಗಣ
ಕುಳಪದರಜತಿಮಿರವು ಪುಷ್ಪಕ ಗಗನವು ಮಂ
ಡಳಿಸಿದ ಸತಿಯರ ವದನವು ತಾವರೆಗೆಂಪಿಂ ತನ್ನಯ ಮುಖವೇ
ಶಶಿಬಿಂಬಂ|

ತೆಳುನಗೆವೆಳಗಿನ ಬೆಳತಿಗೆ ಬೆಳುದಿಂಗಳ ಮಂ
ಗಳವಾಗಲ್ ಭರದಿಂ ನಡೆತಂದಾಹಾ ನಿ
ರ್ಮಳನಿಧಿ ನಿಂದಿರ್ದಳು ಹರಿಸಂ ಪಿಂಗಿದ ದಕ್ಷನ ಮುಖಕಮಳದ
ಮುಂದೆ ||೬೧||

ಪದಪಿಂದಂ ತನ್ನಂ ಕಾಣುತೆ ನೋಡದೆ ತಿರು
ಗಿದ ದಕ್ಷನ ಮುಖ ಶಿವಕಳೆ ಮುಸುಳಿಸಿ ಶಶಿ ಹಿಂ
ಗಿದ ರಾತ್ರಿಯವೋಲಿರಲಿನನುಳಿದಂಬರದಂತಿರಲೀ ಮುನಿಸಿಂತೀ
ಖಳನು |

ಹದುಳಿರಲೀಯಂದು ದಿಟವಪಯಶವೆನ್ನಂತಾ
ಗದವೋಲುತ್ತ್ರಮಿಕೆಯನಾಚರಿಸುವೆನೆಂದಳು
ಕದೆ ಕರೆ ಪುತ್ರಂ ಸಮ್ಮುಖದೊಳು ನಿಂದಿರ್ದಳು ನೋಡದೆ ಖಳ
ತಿರುಗುತಿರೆ ||೬೨||

ಗಿರಿಶನ [2]ಕೀರ್ತಿಯ[2] ತೊಡವೆಲ್ಲಾ ದೆಸೆದೆಸೆಗಾ
ದರದಿಂ ಬರವರಲಾದೆಸೆಯಂ ನೋಡದೆ ನಿ
ಷ್ಠುರ ದಕ್ಷಂ ಸಾಯಲ್ ಬಲ್ಲರದೇವಂ ಮುಖಮಂ ತಿರುಪುತ್ತಿರಲಾಗ |

---

1 ಪರಿದ (ಕ,ಗ) 2 ತೆಕ್ಕೆಯ (ಕ,ಗ)

ಸುರಪತಿ ಕೇಳ್ ಶಿಖಿ ಕೇಳ್ ಯಮ ಕೇಳ್ ನೈರುತಿ ಕೇಳ್
ಶರಧಿಪ ಕೇಳ್ ಹರಿ ಕೇಳ್ ಧನಿ ಕೇಳ್ ಶಿವ ಕೇಳ್ ಕೇಳ್
ದುರುಳನೊಡಲ ಮೇಲಿನ್ನಿರಿನಿರೆನೆಂದಱುಪುವವೋಲ್ ತಲೆ
ತಿರುಗಿದುದು ||೬೩||

ಬಗೆದಾ[1]ವ[1]ಱುಪದೆ ಕೇಳ್ದುಂ ಕರೆಯದೆ ಬಂದುಂ
ಮೊಗ ನೋಡದಿರಲ್ ಮೊಗದೊಳ್ ನಿಂದಿಸಲು
ಜಙ್ಗಮಂ ನೋಡೀ ಸಭೆಯೊಳಗಾ ಶಶಿಚೂಡಂ ಸಲ್ವವನಹನೆ(?) |
ತೆಗೆಯೆನ್ನಂ ಲೆಕ್ಕಿಸದಿರ್ದುಂ ಕಡೆಗಿನ್ನೂ
ಮಗಳೇ ನಿನ್ನಾತಂ ಸರ್ವೇಶನೆ ಜಗದೊಳ್
ನಗಿಸದೆ ಬಿಟ್ಟೊಡೆ ದಕ್ಷನೆ ನಾನೆಂದತಿ ಘೂರ್ಮಿಸಿದನು ಕಡುಪಾತಕನು
||೬೪||

ಸಡಿಫಡ [2]ನೀಂ[2] ಕರದೇಂ ಕರೆಯದೆ [3]ಮಾಣ್ದಂ[3] ಕ
ನ್ನಡಿ ಕುಂದುವುದೇ ಕುರುಡಂ ಕಾಣದಿರಲ್ ಕಾ
ಳ್ಗಡೆಯುದಿರೆನ್ನೊಡೆಯನ ನಿನ್ನಳವೇ ನಿನ್ನೀ ಜನ್ನದ ಕುನ್ನಿಗಳಳವೆ|
ಕಡೆಗಾಲಂ ತುಡುಕದೊಡೀ ಕೆಡುನುಡಿಗಳ್ ಪೊಱ
ಮಡವಾಡಿದ [4]ನೀನೂ ಲಾ[4]ಲಿಸಿ ಸೈರಿಸಿದೀ
ಜಡೆಯ ಜಡರು ಸಹ ಪಿಡಿ ಪಿಡಿ ಶಾಪವನೆಂದಿತ್ತಳು ಸುಟ್ಟುದ
ಸುಡುವಂತೆ ||೬೫||

ಶಾಪಂ ಕಡುಗೋಪವನೆತ್ತಿತ್ತಾ ಕೋಪಾ
ಟೋಪದಿ ಶಾಪವನೊ[5]ದವಿ[5]ಸಿದಂತಾ ಪಾಪಾ
ಳಾಪದಿ ಪರಿಪಾಕಂ ಬಲಿದೆನಗಿನ್ನಂತೇನಿಂತೇನೆಂದುರವಣಿಸಿ |

---

1 ರ (ಅ) 2 ಫಡ (ಅ) 3 ಮಾಣ್ದೊಡೆ (ಅ) 4 ನೀಂನಾಂವಾ (ಕ) 5 ಡಿ (ಅ)

ಶ್ರೀಪತಿಪತಿಯನು ವಾಣೀಪತಿಯನು ಪೌಳೋ
ಮಿಾಪತಿಪತಿಯನು ಕೇಳಲ್ ಬಾರದವೋಲಂ
ತಾ ಪಾತಕ ನಿಂದಿಸಿ ನುಡಿದನು ಶಿವ ಶಿವ ಘುಡಿಘುಡಿಸುತೆ
ಸತಿ ಮನದೊಳಗೆ ||೬೬||

ಹಿಂದೆಲ್ಲವ ಸೈರಿಸಿದೆಂ ಶಿವ ಶಿವ ಗರುವಂ
ನಿಂದಿಸೆ ಪಿತನೆಂಬುನ್ನತಿಯೆಂದೆಣಿಸದೆ ಭರ
ದಿಂದಂ ಸುಟ್ಟುರುಹುವುದುತ್ತಮವೆಂದನುಗೆಯ್ವುತ್ತಿಂತೈತರುತಿರಲು |
ನಿಂದೆಯ ನುಡಿಗಳ್ ಕಿವಿ[1]ಯಂ ಪೊ[1]ಗುವವೆ ನಿಂದಕ
ನಿಂದಾದೊಡಲನಳಿವೆನಿವನಂ ಶಿವಗೊಪ್ಪಿಸಿ
ಕುಂದಂ ನೀಗುವೆನಿನ್ನೆಂದನುವಾದಳು ತರುಣೇಂದುಧರನ
ಸತಿಯಂದು ||೬೭||

ಕಡೆಗೀ ಪತಿವ್ರತೆಯರ ಮನೆದೈವವು ಬುಬ್ಬುಗಿ
ಲಿಡುತಿಹ ಕುಂಡವ ನಿಟ್ಟಿಸಿ ಬಿಸಿ ಮಸುಳಿಸಿ ಶಿಖಿ
ನಡಗಲು ನಗುತೆಡಬಲನಂ ಬಲಿಪಂತಃಕುಂಡಲಿಯೊಳ್ ಪ್ರಾಣವ
ತೊಡಚಿ |

ನಡು[2]ನೆತ್ತಿ[2]ಯೊಳೆತ್ತಿದೊಡುರಿ[3]ಯೆದ್ದಾ ಅಧ್ವರವಂ
ಸುಡುವಾ ಪ[3]ಣದಿಂ ಜ್ಯೋತಿ ಸಹಸ್ರರವಿಪ್ರಭೆ
'ಬಿಡ'[4]ದೊಗೆದೆಲ್ಲರ ಕಣ್ಗೆ ತವುಂಧಂಗೆದಬಿಲು ನೆಗೆದಳ್ ಗಗನಾಂಗಣಕೆ
||೬೮||

ತನತನ[5]ಗೆಲ್ಲರ್[5] ಕಂಗೆಟ್ಟಿವೆನುತ್ತಂ [ಘ]
ಲ್ಲನೆ ಚೆಲ್ಲಿತಲ್ಲಿ ಬೆದರ್ದೋಡುವ ಮಂದಿಗೆ ಖಳ
ನನುವಱಿಯದೆ ಹೆದಱುವಿರಾನಿರಲಾ ನಿರ್ದೈವನ ಸಂಗದಿ ಗುರು
ಲಘುವಱಿಯದಳು|

---

[1] ಯಿಂದೊ (ಕ,ಗ) [2] ನಾಳಿ (ಕ,ಗ) [3] ದೆದ್ದಾ ಅಧ್ವರ ಕುಡಿವಾದ (ಕ,ಗ)
[4] ವಿಡಿ (ಕ,ಗ) [5] ಗೆಲ್ಲುಱಿ (ಕ,ಗ)

ಎನಗುತ್ತರವಿತ್ತುದಱಿಂದಾಕಸ್ಮಿಕದುರಿ
ತನುಗೆಡಿಸಿತ್ತೈ[1]ಸಂ'ಜದಿರೆನೆ ನಿಂದಿರು ಮೇ
ದಿನಿಗೆ ಶಿವದ್ರೋಹದ ವಿಧಿ ಹೋಗಲ್ ಬಿಡುವುದೆ ಎಂದರು ಹರಗಣ
ಕೂಡೆ ||೬೯||

ಒದವಿದ ಕಾರ್ಯದ ಹದನಱಿಯದೆ ಸುತ್ತಲ್ ಗದ
ಗದಿಸುತ್ತಿರಲಿತ್ತಲ್ ನಿಜತನುವಿಂ ನಡೆದಾ
ರ್ತದಿ ಪದಕೆಱಗಿದ ಸುದತಿಯು ಮದನಾಂತಕನಿಂತೇಕಾಯಿತ್ತು
ಸುರುಸುರಿನಲು |

ಮುದದಿಂದವ ನಿಮ್ಮಂ ನಿಂದಿಸೆ ಸೈರಿಸಲಾ
ಱದೆ ದೇಹವನಿರದಳಿದೇಳ್ತಂದೆಂ ಕೇಳೆ
ನ್ನದ ಮುನ್ನವೆ ಶಿವ ಕೋಪಾಟೋಪವ ಧರಿಸಿದನದನಾರ್ ಬಣ್ಣಿ
ಸಬಹುದು ||೭೦||

ಅಂತು ಸಂಧಿ ೧ ಕ್ಕಂ ಪದನು ೭೦ ಕ್ಕಂ ಮಂಗಳಂ ಮಹಾ ಶ್ರೀ ಶ್ರೀ ಶ್ರೀ ||

---

1 ಅಂ (ಅ)

ಎರಡನೆಯ ಸಂಧಿ

ಉದ್ದಂಡ ಷಟ್ಪದಿ.

ಸೂಚನೆ:

ರುದ್ರನ ಭಾಳಾಭೀಳಾಕ್ಷಾನಳನಿಂದಂ
ಭದ್ರನು ಜನಿಸಲು ಹರ ಬೆಸಸಲು ಸುರಸೈನ್ಯ ಸ
ಮುದ್ರಕೆ ವಡಬಾನಲ ದಾಳಿಡುವವೊಲೆಯ್ದಿದ ಭದ್ರಾಣೀ ವಲ್ಲಭನು ॥

ಮನಸಿಜ ದಹನದ ಪುರವಿಘಟನದಂಧಕಮ
ರ್ದನ ಯಮದಹನದ ಗರಳಾಸುರ ಸುರವಿಧ್ವಂ
ಸನದಂದಿನ ಮುಳಿಸಲ್ಲಿಂದೊಂದಾ[1]ದಂತುಕ್ಕುವ ಬಲು[1]ಹೊತ್ತುವ
ಹೊಗೆವ ।
[2]ತನಿ[2]ಗೋಪಾನಳವಿಂಗದೆ ಗಂಡಂದವನೊಲಿ
ದನುಕರಿಸಿತ್ತಹಿತರು ಬಾಯ್ವಿಡೆ ಶಿವ ಶಿವ ಭೋಂ
ಕನೆ ಹಣೆಗಣ್ಣಿನ [3]ಮುಗ್ಗಿ[3]ಚ್ಚಿನ ಹಗ್ಗಿಯ ಮೊಗ್ಗರದೊಳು
ಥಳಥಳಿಸಿದುದು ॥ ೧ ॥

ಕಡೆಗಾಲದ ಕಿಚ್ಚಿನ ಮುಚ್ಚುಳ್ದೆಗೆದಂದದೆ
ಘುಡಿಘುಡಿಸುವ ನಡುಗಣ್ಣೆವೆಯೊಡೆಯಲ್ ತೊಂಗ
ಲ್ಗಿಡಿ ಕೆದಱುತ್ತುಕ್ಕಿದ ದಳ್ಳುರಿ ಗಗನವ ತೀವಲು ಬಿಱುವಿಸಿ[4]ಯಿಂ[4]
ಕಾದು।
ಜೆಡೆಯೊಳ್ ಗಂಗೆಯ ಮಡುವುಕ್ಕುತ್ತೆಸರಿಡೆ ಹೊಗ
ಲೆಡೆಗಾಣದೆ ಸಸಿ ಬೆವರ್[5]ಳ್[5]ದುಱಿ ಚುಯ್ಯನೆ ದನಿ
ಗೊಡುವ ಸುಧಾಬಿಂದುವಿನೊತ್ತುವಿಡಿದನೆಲೆಲೇ
ವೀರಕುಲಾಧೀಶ್ವರನು ॥ ೨ ॥

---

1. ದಂತಕ್ಕುವತಿ. (ಕ.ಗ)· 2 ತನು (ಅ.ಗ) 3. ಮುಂಗಿ (ಕ) 4. ಲಿಂ (ಗ)
5. ಡು (ಕ.ಗ)

ಘುಳುಘುಳು ಘುಡುಘುಡು ಛಿಳಿಛಿಳಿ ಛಿಟಿಛಿಟಿ ಧಗಧಗ
ಥಳಥಳ ಭೂಭೂರ್ಭುಗಿಲೆಂಬಬ್ಬರವಿರದಿ
ಟ್ಟಳಿಸಲ್ಕಂಡೆಲೆಲೆಲೆ ಜಯ ಜಯತುಬುಬುಬುಬುಬೆಂದು
ಗಣೇಶ್ವರರುಲಿಯೆ |

ಜಳಧಿಗಳುಕ್ಕಲ್ ಕುಲಗಿರಿಗಳ್ ಕುಂಬಿಡೆ ಧರೆ
ಯಳಿಯಲ್ ನಭವದಿರಲ್ ತಾರೆಗಳುದಿರಲು ಶಶಿ
ಜಳಜಸಖರ್ ತಿರುಗಲು ಜನ್ನದ ಜನ ಜರಿಯಲು ಲಂಘಿಸಿದನು
ನಿಚ್ಚಟನು ||೩||

ಕಡುಪಿಂ ಹಾಱಿದ ಭಾರಕ್ಕಿಳೆ ಬಿರಿದಹಿಪನ
ಹೆಡೆ ಮುರಿದೊಡ್ಡಿದ ಕಮಠನ ಬೆನ್ನಿನ ಕರ್ಪರ
ವೊಡೆದಡಿಯಣ ಲೋಕಂಗಳುಡುಗೆ 'ಕಳೆದುಳಿದಾ[1] ಮೇಗಣ
ಲೋಕಾವಳಿಯ |
ನಡು[2]ಪಣ ಬಾಂ[2]ದಣಗೊಱ[3]ಯಲು ಮಕುಟಂ ರುದ್ರನ
ಮುಡಿಗೂರ್ವರೆ ಹಿಡಿದೇಳ್ಕಿಲೆಯ ಮಹಾ ಸತ್ತ್ವಿಗೆ
ಗಡಸಿದ ಕಾವೋ ಎಂಬಂತಿರೆ ಬೆಳದಧಟಂಗತಿ ಬೆಱಗಾ[4]ದಂ [4]ಶಿವನು
||೪||

ಒಡಲೊಳಗುಳ್ಳಿನ್ನ ಮಹಾ ಕೋಪಂ ಗಡ ಬಂ
ದಡೆದುರಿಗಣ್ಣಿಂ ಪೊಱಮಡಲುಳಿದತಿ ಶಾಂತಿಯ
ಮಡುವೆನಿಸುತ್ತುಂ ತಾನೇಕಱ[3]ಯದೆ ಕೆರಳಿದನೇಕಿವ ಜನಿಸಿದನೆಂದು|
ಮೃಡ 'ಬೆಱಗಾಗು'ತೆ 'ಹೋ ಹೋ' ಸೈರಿಸು ಸೈರಿಸು
ಬಿಡು ಬಿಡು ಕೋಪವನುಡುಗುಡುಗತ್ಯುದಯುವನೀ
ಬಡಲೋಕಂಗಳನೆಡೆಗಿಡಿಸದಿರೆನೆ ಕಣ್ಗಳವಡುವಂದವ ಧರಿಸಿದನು |
||೫||

---

1. ಕಳಿದುಳಿಯಲ್ (ಗ), 2. ವಂಬಾ (ಕ,ಗ). 3. ದನು (ಕ). 4. ತ(ಅ)

ಸೊಡರ್ಗುಡಿವೆಳಗಿನ ಮೈವಣ್ಣಂ ನಿಡುಜಡೆ ಮುಡಿ
ನಡುನೆತ್ತಿಯ ಲಿಂಗಂ ಮುಕುಟಂ ಫಣಿಕುಂಡಲ
ಕುಡಿಗಣ್ಣುರಿಗೆದಱುವ ಪಂಚಮುಖಂ ನಿಡುದಾಡೆಗಳೆಸೆವ
ಸಹಸ್ರಭುಜಂ।
ಉಡುಗೆಯ ಚಲ್ಲಣ ಕಿಗ್ಗಟ್ಟನ ಭೀಳಾಯುಧ
ಬಿಡುವ ಶಿರೋಮಾಲಾಭರಣಗಳೆಂಬಗ್ಗದ
ತೊಡ[1]ವ[1]ಹಿತರ ಹಾಹೆಗಳ[2]ಳೆಯ[2]ಲು ವೀರೇಶನ ನಿಲವಾರಂ
ನಡುಗಿಸದು ॥೬॥

ಜವನೋಲಗಶಾಲೆಯ ಬಾದಣಗೊಱೆಯೆಂದೆನಿ
ಸುವ ತನುವಿರ[3]ಳ[3] ವ್ರಜದಿಂ ತನ್ನಂಘದ ಭಟ
ನಿವಹಂ ನಂಜಿನ ಹುತ್ತಿಂದಂ ತಳರ್ವಾ ರೌದ್ರೋರಗ ಸಂಕುಳದಂತೆ ।
ಶಿವ ಶಿವ ಪೊಱಮಟ್ಟುದಸಂಖ್ಯಾ[4]ತಂ[4] ಬಳಿಕಂ
ತವರಿಂ ಪೊಱಮಟ್ಟುದು ಭೂತಗಣಂ ನೆಱೆ ಭೂ
ಭುವನವನೆಡೆಗೆಡಿಸಿತ್ತಡಸಿತ್ತಾಗಿತ್ತಗಜೇಶನ ಕಿವಿ [5]ಘು[5]ಮ್ಮಿಡಲು
॥೭॥

ಸಿಡಿದೆಲುವಿನ ಸೆಕ್ಕೆಯ ದಾವಾಗ್ನಿಯ [6]ಮೊ[6]ಳೆಗಳ
ಬಡಬಾಗ್ನಿಯ ಚರ್ಮದ ವಟ್ಟೆಗಳೆಳನೇಸಱ
ಕಡುಹಿನ ತೊಡಕಂ ಕಾಲನ ಕಂಗಳ [7]ಹುಬ್ಬು[7]ಗಳಸುರರ
ತಲೆಗಳ ಗೆಜ್ಜೆ ।
ಮುಡಿಸಿದ ಶೇಷನ ಬಂದಿಗೆ ಮಾರಿಯ ಮುಂಡೆಯ
ನಡುಘಂಟೆಯ ಮೃತ್ಯುವಿನೊಳನರವುರಿದೊಂಗಲ್
[8]ಪಿಡಿದೊಣಗಲ್ಗರು[8]ಳುಳ್ಳ ಹಣಿಲ್[9]ಚಮುರದ [9]ಹಲಗೆಯ ಕಡುಗಲಿ
ಕಣ್ಗೊಪ್ಪಿದನು ॥೮॥

---

[1]. ರ (ಕ,ಗ) 2. ಳಲ (ಕ,ಗ) [3]. ಳಾ (ಕ,ಗ). [4]. ತರ್ (ಕಗ) [5]. ಘ (ಅ) [6]. ಮೂ (ಕ,ಗ.) [7]. ಗುಬ್ಬಿ (ಕ,ಗ) [8]. ಬಿಡಿದೊಣಗಿಲ್ ಗರು - (ಕ ಗ). [9]. ಚರ್ಮದ (ಅ)

ಬಳವತ್ಕಾಲದ ಕೋಪದ ಬಂಟಂ ಪ್ರಳಯಾ
ನಳನಿಂ ಕಾಯಿಸಿ ರಾಹುವ ಕೇತುವ ಬಲಿದಿ
[1]ಕ್ಕುಳನಿಂ[1]ತೆಗೆದಂಥಾಸುರನೆರ್ದೆಗಲ್ಲೊಳ್ ವಜ್ರದ ಸವ್ಮುಟಿಗೆಯ
ನಿಗುಚ।

ಕುಳಿಕನ ವಿಷದಿಂ ನೀರೂಡಿಸಿ ನೇಸಱ ಮಂ
ಡಳದಿಂ ಪುಸೆದೆಳಮಿಂಚಿಂದಂ [2]ಕ[2]ಲ್ಪವನಿ
ಟ್ಟಳವಡೆ ರುದ್ರಂ ಮಾಡಿದ ಖಂಡೆಯದಧಟನ ಹಿಡಿತವನೇಂ ವಣ್ಣ
ಪೆನು ॥೯॥

ಘುಲಘುಲಘುಲ ಛಟಛಟಛಟ ಘಂಘಂ ಘುಲಘುಲ
ಘುಲವೆಂಬುಲುಹಿನ ಭುಜಶಾಖೆಗೆ ದಿಗುಭಿತ್ತಿಯ
ಹೊಲಿಗೆಯ ಹುರಿ ಹರಿಯಲು ಕೈಯೆತ್ತಿದೊಡಾಗಸದೊ
ಡ್ಡೊಡೆದಜನರಮನೆಯ।

ತೊಲೆ ಮುಱಿಯಲು ನೆಲನಂ ಘಟ್ಟಿಸೆ ಕಮಠನ ಬೆ
ನ್ನೆಲು ನೆಗ್ಗಲ್ತಿರುಪಿನ ಗಾಳಿಗೆ ದಿಙ್ನಾಗಿ ಥರ್
ನೆಲೆದಪ್ಪಲು ಠಕ್ಕಿಸಿ ಭಾಷೆಯನವಧಂಸವಧರಿಸೆಂದಂ ಪಟುಭಟನು
॥೧೦॥

ಧುರದೊಳು ಹೊಡೆ[3]ದೊಡೆ[3]ದಿಱಿದಿಱಿದೆಳದಾಡಿಸಿಯಾ
ಸುರಪತಿ ಶಿಖಿ ಯಮ ಖಳ ವರುಣಾನಿಳ ವಿತ್ತೇ
ಶರ ತಲೆಗೊಂಡಿಭ ಕುಱಿ ಕೋಣಂ ನರ ನೆಗಳೆರಳೆ ತುರಂಗಂ
ವಜ್ರವನು।

ವರಶಕ್ತಿಯ ದಂಡವ ಕತ್ತಿಯ [4]ಪಾಶಾಂಕುಶ[4]
ತರವಾರಿಯನೀಗಳೆ ತರ್ಪೆಂ ನುಡಿ ನುಡಿ ದೇ
ವರ ಬಲ್ಲಹ ಬೆಸನೇನೆಂದಿತ್ತನು ಭಾಷೆಯನರಿಗಜಕಂಠೀರವನು ॥೧೧॥

---

1. ಕ್ಕುಳದಿಂ (ಕ). 2. ತ (ಕ,ಗ). 3. ದೊಗ (ಕ,ಗ). 4. ಪಾಶಧ್ವಜ(ಕ,ಗ

ಪೊಡವಿಯ ಬಗಿವೆನೊ ಫಣಿಪನನುಗಿವೆನೊ ಜಡಧಿಯ
ಕುಡಿವೆನೊ ವಡಬನ ಹಿಡಿವೆನೊ ಹರಿಕಮಲ[1]ಜರನು
ಜಡಿವೆನೊ ಕುಲಗಿರಿಗಳ ಹುಡಿಗೆಯ್ವೆನೊ ನಾನಾ ಭುವನ
ಪ್ರಜದಡಿಕೀಲ್ಗಳನು ।
ಕೆಡಹುವೆನೋ ಸುರಪುರ[2]ವನು[3] ಸುಡುವೆನೊ ಗಗನವ
ನೊಡೆವೆನೊ ಮಿಡಿವೆನೊ ಶಶಿರವಿಗಳ ತಾರಗೆಗಳ
ನುಡುಗು[4]ವೆನೋ ಹೇಳೆನ್ನಾಣೆ ಬೆಸಸು ಬೆಸಸೆಂದು ನವಿುಸಿದನು
ಪಟುಭಟನು ॥೧೨॥

ಬಿಡು ಬಿಡು ಸೂರುಳನಿಡು ಬೇಡೊಪ್ಪಿಡಿ ತೃಣವಂ
ಸುಡುವಡೆ ತಳಿಯಂ ಹೊತ್ತಿಸ[1]ವರೆ ಜನ್ನದ ಜನ
ದೆಡೆಗಟ್ಟುವೆನೆನೆ ಬೆಸಸದ ಮುನ್ನೀಪರಿ ನೀಂ ಮಱೆದಱಿಯದೆ
ಬೆಸಸಿದೊಡೆ ।
ಗಡಣದ ದೇವರ ಹಣೆಯಕ್ಕರಮಂ ತೊಡೆ[2]ಯದೆ
ಬಿಡುವಾ ಸೈರಿಸುವಡೆ ಕಳುಹುವೆನೀಸೊಂದ
ಕ್ಕೆಡೆಯಿಲ್ಲೆನೆ ದೇವರ್ ಬೆಸಸಿ[3]ತ್ತೀ[4]ಬೆಸನೆಂದನು ವೈರಿಭಯಂಕರನು
॥೧೩॥

ಅಲ್ಲದ ಕೆಲಸವನೆನಗಿತ್ತಂ ಶಿವನೆಂದೆನ
ಲಿಲ್ಲಂ ನಿನಗಱುಹುವೆವಲ್ಲದೆ ಜಳನಿಧಿಗಳ
ನೆಲ್ಲವನಾಪೋಶನವೆತ್ತುವ ಸತ್ವ[5]ದ ವಿಷ್ಣುಪ್ರಮುಖ ಸುರಾಧಿಪರು ।
ಅಲ್ಲಿಯ ಕಾಹಿಂಗೈದರೆ ನೀನಂತವರಂ
ಕೊಲ್ಲದೆ ಕೊಂಡಿಂದೇ ತಂದೊಪ್ಪಿಸು ವೀರರ
ಬಲ್ಲಹ ಹೋಗೆಂದಂ ಪಿತೃಪತಿ ಹೃದ್ಭ್ರಮರನು ರತಿವಲ್ಲಭದಲ್ಲಣನು
॥೧೪॥

1. ಳ(ಕ.ಗ). 2. ವಂ (ಕ.ಗ) 3. ವು (ಅ). 4 ವಾ (ಅ) 5. ದ್ದೇ(ಅ)

ಒಡೆಯರು ಬೆಸಸಿದ ಕರುಣಕ್ಕೆ ಹಸಾದಂ ನಿ
ಮ್ಮಡಿಗಳ್ಬೇಡನೆ ಕೊಲಬಹುವೇ[1]ಯಾ ಜನ್ನದ[2]
ಸುಡು[3]ಗುರಿ[4]ವಂಟರು ಹೋಮದ ಹುಗ್ಗಿಯ [5]ತಿಂದೊಣವೇವತ್ವದ ಗರು ಹೊಡೆದು |
ಕಡುಪಿಂದಾ ಮಂದಿಯ ಮಧ್ಯದಿ ಲಳಿಯೆದ್ದತಿ
ಸಿಡುಕುಂಗುಟ್ಟುತ್ತಿರಲೆನ್ನವರುರವಣಿಸದೆ
ಬಿಡರಿದಕೆಂತಂಗಜಮದಮರ್ದನ ಹೇಳೆಂದನು ವೀರಾಧೀಶ್ವರನು ||೧೫||

ಮಲೆತೊಡೆ ಕೊಲು ಶರಣೆನೆ ಕಾಯಲ್ಲಿಗೆ ತಕ್ಕುದ
ನಲಸದೆ ಮಾಡದ[5]ನಲ್ಲನೆ ಕೇಳೆಲೆ ವೀರ[5]ಯೆ
ನ್ನಲವನತಿ ಹರುಷದೊಳೆನ್ನಯ ಮಾಟವನಳುಕದೆ ಮಾಳ್ಪಿಂ ನೋಡಲು ತಕ್ಕ|
ಬಲವಂತರ ಬೆಸಸೆನೆ ಬೆಸಸುವ ಭರದಿಂ ಕೆಲ
ಬಲನಂ ಬಾಧಿಸಿ ಪೋಪವರಂ ಬಗೆವನಿತ
ಕ್ಕೆಲೆಲೆಲೆ ಬೊಬ್ಬಿಡುತಬ್ಬರಿಸುತ್ತೊಬ್ಬಾಕಸ್ಮಿಕ ಸತಿ ತಲೆದೋಱಿದಳು ||೧೬||

ಗಗನವನೆತ್ತುವ ಮೌಳಿಯ ವಹ್ನಿತ್ರಯಮಂ
ನಗುವುರಿಗಂಗಳ ನಂಜಿನ ಮಿಸುಪಂ ಮಿಱುವ
ಮೊಗವೊಗರಿನ ಕಾಲನ ಬೊಂಮಾಂಸದ ಮುಱಿಗಳ ಮುಱಿಯಿಪ ಕೆಱದಾಡೆಗಳ |
ಮಿಗೆ ನೀಲಾದ್ರಿಯನೈವಡಿವಡೆದುದಯದ ಪ
ರ್ಬುಗೆಯೊಡಲಿನ ಕಾರ್ಮುಗಿಲಿಘದೊಳಾಡುವ ಮಿಂಚಂ
ತೆಗಳುವಲಂಕಾರ ದಶಾಯುಧ ಸಂಯುತೆ ಭದ್ರಾಣಿಯು ಕಣ್ಗೊಪ್ಪಿದಳು ||೧೭||

---

1. ಆ ಜನ್ಮವ (ಅ) 2. ವತಿ (ಅ) 3. ತಿಂದಾ ದೇವರ್ಕಳ ನೆರೆ(ಅ) 4. ದಿಡುಗಂ (ಕ,ಗ) 5. ನಲ್ಲೆಂದೆನೆ ಕೇಳೆಲೆ ವೀರ ಶಿಖಾಮಣಿ(ಕ.ಗ) ಡದನಲ್ಲೆಂದೆನೆ ಎಲೆವೀರಾ (ಅ)

ಸದ[1]ಮು[1]ದದಿಂ ತನ್ನಯ ಸಡುಗಣ್ಣಿಂ ಪುಟ್ಟಿದ
ಚದುರಂಗುವೆುಯುಂದದಿನುದಿಸಿದ ಸುದತಿಗೆ ಸ
ನ್ಮುದದಿಂದಂ ಮದುವೆಯನೊದವಿಸಿದಂತಾ ದಂಪತಿಗಳಿಗೆ
ಗಣಂಗಳ್ಬೆರಸು|
ಸದಮಳ ಸೇಸೆಯನುದಿತೋದಿತವರಕೆಯೊಳಿ
ಕ್ಕಿದ ಮದನಾರಿಯು ಪದ ಪದ್ಮಕ್ಕೆಱಗಿದನಾ
ರಿದ ಬಲಗೊಂಡಂ ಬೀಳ್ಕೊಂಡಂ ನಡೆಗೊಂಡಂ ಚಂಡಾಂಶು
ಶತಪ್ರಭನು ||೧೮||

ನಾರದ ರಿಂಗಣಗುಣಿದನು ನಲಿಯೆ ಮರುಳ್ಗಳ್
ಮಾರಿ ಕರಂ ಬಸುಱಿರಕೆಗೆ ಕಡೆಯಾಯ್ತೆಂದುಲಿ
ದಾರಿದರೆಲ್ಲಾ ಶಾಕಿನಿ ಡಾಕಿನಿಯರು ಚೌಕಮನಿರ್ದಳು ಮೃತ್ಯುಸತಿ |
ದಾರಿಯ ಸವರಿದನಂತಕನಿತ್ತಲು ಯಾಗಾ
ಗಾರದೊಳು[2]ತು[2]ಪಾತಶತಂ ನೆಗೆದುವು ಶಿವಶಿವ
ವೀರಶಿಖಾಮಣಿ ದೇವಶಿಖಾಮಣಿಯಂ ಬೀಳ್ಕೊಂಡಡಿಗೆಱಗಿದ
ನೆನಲು ||೧೯||

ಹರುಷದೆ ಹರಸಿ ಕರಂ [3]ಹೋ[4]ಗೆನ್ನದ ಮುನ್ನಂ
ತಿರುಗಿ ಕರಂ ಕೈವೀಸಿ ಭುಜಂಬೊಯ್ದೊಡೆ ಸಾ
ಗರವುಕ್ಕಿದವಾರಿದೊಡಂಬರ ಜರಿಯಿತ್ತಳ್ಕೇಱಿದೊಡೆ ರಸೆ ಬಸವಳಿದು |
ಉರಗನ ಹೆಡೆ ಮಣಿಯಿತ್ತುರವಣಿಸಿದೊಡೆ ದಿಶಾ
ಕರಿ ತೆರಳಿದುವಡಿಯಿಟ್ಟೊಡೆ ಬೆಟ್ಟಂ ಹಿಟ್ಟಾದುವು
ಚರಿತದೊಳತುಳಬಳ ಪರಾಕ್ರಮದಾ ವೀರನ ಸೇನೆಯನೇಂ
ವಣ್ಣಿಪೆನು ||೨೦||

---

1. ಮು (ಅ) 2. ಗುತ್ತಿರದೆ (ಅ) 3. ಕು (ಅ) 4. ಪೋ (ಕ,ಗ)

ಕುಲಗಿರಿಗಳ ಕೈಗುಂಡುಗಳ ಬ್ರಹ್ಮಾಂಡಂ
ಗಳ ಹೊಡೆಸೆಂಡುಗಳ ದಿಶಾಕರಿಗಳ ದಂತಂ
ಗಳ ಪಿಲ್ಲಣಿಗೆಗಳ ಮಹಾಕಾಲನ ಕೋಣನ ಕೋಡಿನ ಹೊಸಬಡಿಗೆಗಳ।
ಕುಳಿಕನ ಕಡ್ಡಣಿಗೆಯ ಶಶಿರವಿಗಳ ತಾಳಂ
ಗಳ ಧರೆ ಗಗನಂಗಳ ಪಲ್ಲಟಿಸುವ ಬಲಯುತ
ಬಲದಿಂ ಗಣಕುಲ ನಡೆದುದು ವೀರೇಶನ ಕೆಲಬಲದಲಿ
ಜಗಡಗಲದೊಳು ॥೨೧॥

ಜಗದಗಲದೊಳ್ಳೈದುವ ವೀರರ ಪದಹತಿಯಿಂ
ನೆಗೆದ [1]ರಜೋವ್ರಜವೆನಸುಂ[1] ಗಗನವ ಮೊಗೆಯಲ್
ಹಗಲಿನ ಹಣೆಯಕ್ಕರಮಂ ತೊಡೆದುದೊ ವೀರನ ನವಕೋಪಾ
ನಳ ರಾಹು ।
ಗಗನವ [2]ಸರ್ವ[2]ಗ್ರಾಸಂಗೊಂಡುದೊ ಎನಿಸುವ
ಬಿಗಿಗತ್ತಲೆಯನು ಸಬಳಂಗಳು ಮಿಾಟಿಲು ಸ
ತ್ತಿಗೆಗಳು ಕತ್ತರಿಸಲ್ಕಿತ್ತಸಿಲತೆಗಳು ಬೆಳಗಲು ಪಡೆ ಕಣ್ಗೊಪ್ಪಿದುದು
॥೨೨॥

ತೊಲ ತೊಲಗೀ ಬಂದನೆ ಹರನುರಿಗಣ್ಣ ಮಗಂ
ತೊಲ ತೊಲಗೀ ಬಂದನೆ ದೂಷಕಗಜಸಿಂಹಂ
ತೊಲತೊಲಗೆಂದುಲಿಯುತ್ತಿಹ ಕಹಳಾನಾದಂ ದೆಸೆದೆಸೆಗೆಯ್ದಲ್
ಮುಂದೆ ।
ನಲಿವನಲಧ್ವಜ ಕೋಟಿಗಳಿಂ ದಾಳಿಕ್ಕುವ
ಬಲವಂತರ ಸೇನಾಸಂಭ್ರಮಮಂ ಕಂಡ
ಗ್ಗಲಿಸುತ್ತಾರುತ್ತನುಮಾನಿಸಿದನು ಮನದೊಳು ಮತ್ತೊಂದಂ
ನಾರದನು ॥೨೩॥

---

1. ರಜ ರಜಯೆನಿಸುತಂ (ಅ) 2 ಸರ್ಪ(ಅ)

ಮುನಿದೀ ಸೇನಾಸುಭಟರು ಧಾಳಿಟ್ಟತಿ ಮಱ
ಹಿನೊಳಾ ಯಾಗದ ಕಾಹಿನ ಸುರರೆಲ್ಲರ ಕೊಂ
ದನಿತಱೊಳೆನ್ನಯ ಕಣ್ಣ ಬರಂ ತೀರುವುದಲ್ಲುಭಯ ಬಲಂ ಮುಂಡಲೆವಿಡಿದು ।
ತನತನಗಿಱಿದಾಡಿದಡಘುದಂತಾಗಿಪೆನೆಂ
ದನುಮಾನಿಸಿ [1]ಪರಿ[1] ತಂದೆಲೆ ಪಾತಕ ಬಿಡು ಮ
ಣ್ಣಿನ ಹೋಮುವ ಕಾಳಗಕೇಳೀಳೆನಲಿಲ್ಲಿಯ ಕಾಳಗವೆಂದಂ ಖಳನು ॥ ೨೪ ॥

ವಸುಧಾತಳವೆಯ್ದುದು ಸೇನಾ ಬಹಳತೆಗೆ
ಣ್ದೆಸೆಯೆಯ್ದುದು ವೀರರ [2]ಮೂರಿಯ[2] ಭಾರಕ್ಕಾ
ಗಸವೆಯ್ದುದು [3]ತಳ[3]ಗಳ ಬಳಗಕ್ಕಂಬುಧಿಜಳವೆಯ್ದುದು ಫಣಿಗೊಡ್ಡಿ [4]ಸಲು[4] ।
ಬಿಸಗೊರಲನ ಬಿಸುಗಣ್ಣಸುತಂ ಬರುತ್ತೈದನೆ
ಹುಸಿದಡೆ ನಿನ್ನಯ ಪ್ರಾಣಕೆ ತಪ್ಪಿದನೆನೆ ಕೋ
ಪಿಸಿ ನಿಶಿ ಮುನಿದೇಗುಗು ನೇಸಱನೆಂದಾಸ್ಫಾಟಿಸಿ ನೋಡಿದನಮರರನು ॥ ೨೫ ॥

ನಡೆ ನಡೆ ಸುರಪತಿ ನಡೆ ನಡೆ ಶಿಖಿ ನಡೆ ನಡೆ ಯಮ
ನಡೆ ನಡೆ ಖಳ ನಡೆ ನಡೆ ಜಳಧಿಪ ನಡೆ ನಡೆ ಹರಿ
ನಡೆ ನಡೆ ಧನಿ ನಡೆ ನಡೆ ದಿನಮಣಿ ನಡೆ ನಡೆ ಮಾಧವಯಿಾ
[5]ಸಕಲಾ[5]ಮರರು ।
ಸಡಿ ಫಡ ಸಾನಱಿಯದ ಮೃಡನೇ ಯಾತನ ಸಡೆ
ಗಿಡೆ ಬರಬಹುದೇ ಬಂದೊಡೆ ಹಣೆಯಕ್ಕರಮಂ
ತೊಡೆವೆನೆನುತ್ತಂ ತೊಡೆಯಂ ಹೊಡೆದೆಡೆಯುಡುಗದೆ ಧಡ ಹೊಡೆ
ಯೆಂದನು ಪಾತಕನು ॥ ೨೬ ॥

---

[1] ಹರಿ (ಕ,ಗ) [2] ಮೂರಿಯ (ಅ,ಕ) [3] ತಳ (ಕ,ಗ) [4] ಪಡೆಗದ್ದಿ (ಅ) [5] ನಡೆ ನಡೆ ಈ ಸಕಲಾ (ಅ), ನಡೆ ನಡೆ ಯಿಾ ಸಮಸ್ತಾ (ಗ)

ಅಗ್ಗಿಸಿದೊಡೆ ದಿಟವೆಂದೆಗ್ಗಱಿಯದ[1]ನಗ್ಗದ
ಹೆಗ್ಗರು ನುಗ್ಗುಗಳಂ ಬಗ್ಗಿಸಿ ಕರೆದೊಗ್ಗಿಂ
ಷೊಗ್ಗರವಾಯಿತು ಧಿನ ಹಗ್ಗಿಯ ಹುಗ್ಗಿಯ ಸುಗ್ಗಿಯ ಹಗ್ಗಂ
ಹದುಳಿರಲು ।
ಮುಗ್ಗುರುವೆಂದಗ್ಗದ ಲಗ್ಗೆಯ ಬಗ್ಗಿನ ಭರ
ಮುಗ್ಗದೆ ಮುಗ್ಗುಡಿವರಿದುರವಣಿ[2]ಸಿಯೆ ತನತನ
[3]ಗುಗ್ಗಡಯೊಯ್ಯಾರದ ನೋೞಹರಿಸುವ ಭರದಿಂ ನೆರೆದುದು ಧರೆ
ಯಗಲದಲಿ ॥ ೨೭ ॥

ಕಾಲನ ಕೈಚಕ್ರವನೇಳಿಸಿ ತಿರುಗುವ ಮನ
ದಾಳಾಪಂ ಪಿಂತಿರೆ ಮುಂತೆಯ್ದುವ ಲುಳಿಯಿಂ
[4]ಚೇಳೇರಿದ ನಲುಗುವ ಡಮರವನಗ್ಗಿಸಿ ಕೊಡಹುವ [ಮಿಗಱಿದ]
ಸಾಹಸದ ।
ಮೇಲೇಱುವ ಬಗೆ ಮಿಗೆ ಶಿವುರಿನ ಹೊಂಬಳೆಗಳ
ಭಾಳದ ಚಂದ್ರದ ಚಿತ್ರದ ಮೊಗರಂಬದ ಕೈ
ದಾಳಿನ ಕಾಲ್ಗಾಪಿಂ ಹಡೆಯಂ ಹಣ್ಣಿದ ಕರಿಘಟೆ ನೆರೆದುವು
ಬಲದೊಳಗೆ ॥೨೮॥
ಕಡುಗಾಳಿಗೆ ಬಿಟ್ಟಂಬಿಂಗೆಯ್ದುವ ದಿಟ್ಟಿಗೆ
ನಡೆವ ಮನಕ್ಕಿಮ್ಮಡಿ ಮೂವಡಿ ನಾಲ್ವಡಿಯೈ
ವಡಿ ಜವದೊಳು ಬಲದೊಳು ಬೀದಿಯ ಸರಿಸದೊಳನುಪಮನಚಳಂ
ಬಳಿಕೆಯೊಳು ।
ತೊಡೆಮಡಕಿಸಿ ಕಂಬಿಯು ಸರಸನ್ನೆಗಳಾಟದ
ತೊಡಕಂ ಹೊದ್ದದೆಯ್ದೆದೇಱಿದರನುವಾಯ್ತೆನೆ
ಪಡಕಿದ ತುರಗಂಗಳು ನೆರೆದವು ನಿಂದವು ಧರೆ ಬೆಸ[5]ಲಾಯ್ತೆನೆ
ಬಲದೊಳಗೆ ॥೨೯॥

---

[1] ಸಗ್ಗದ (ಕ,ಗ) [2] ನುತ (ಕ,ಗ) [3] ಗುಗ್ಗೊ (ಅ) [4] ಘೀಳಿಂ (ಅ)
[5] ಲಾಯಿತೆನೆ ಬಲದೊಳು (ಅ)

ಶೀವಿದ ಶಸ್ತ್ರಾಸ್ತ್ರದ ದೊಣೆಗಳ ಹಳವಿಗೆಗಳ
[1]ದೂವಾಳಿಪ ತುರಗದ[1] ಪಕ್ಕರಿಕೆಯ ಸೂತರ
ಜೀವದ ಜತನದ ವಜ್ರಾಂಗಿಯ [2][ಚೀತ್ಕೃತಿಗಾಯೆಣ್ದೆಸೆಗಳ್]ಃ
ಬಸವಳಿಯೆ ।
ಭಾವಜಹರ ಸಮರದೊಳಿದಿರಾದೊಡೆ ಜಯಿಸುವ
ದೇವಬಲಕೆ[3]ತವೆ[3]ನಾಯಕರೆನಿಸಿ ಧನುರ್ವಿ
ದ್ಯಾವಾರಿಧಿಯೆನಿಪತಿರಥ ಮಹರಥರೇಱಿದ ರಥತತಿಯೆಯ್ತಂದ
ವಲ್ಲೈ ॥೩೦॥

ಕಡಿತಲೆ ಕರಗಸ ಕತ್ತಿಗೆ ಕೊಂತಂ ಕಕ್ಕಣೆ
ಕಡುಶಲ್ಲಿಹ ಬಲ್ಲೆಹ ಬಿಲ್ಲಲಗು ವಿಗಂಡಸಿ
ದಡಿ ಬಡಿ ಬಿಟ್ಟೇಱಿಟ್ಟ ನಖಂ ಚಕ್ರ ಪರಶು ಸಿಂಡಿವಳಂ ಪೆರ್ಬಾಳು।
ಖಡುಗಂ[4]ಸೂನಿಗೆ[4] ವಜ್ರಾಸನ [5]ಹ[5]ತ್ತ್ರೆಳೆ ಬಿಱಿ
ಬಡಿಗೆ ಕುಠಾರಂ ಕೈಗಲ್ ಖೇಟಕ ಫಳಕಂ
ಬಿಡಿದಮರರ್ ನೆರೆದುದು ತಮತಮಗೇಂ ಹೊಗಳ್ವೆಂ ಭೂಮಿಯೆ
ಕಡೆಗಡಿಯೆನಲು ॥೩೧॥

ಕಡುಗುವ ಜವ ಚೂಣಿಯ ಮೊನೆಯೊಳು ಭಗ ಪೂಷರು
ನಡೆದಿದ್ದೆಸೆಗಳ ಬಾಹೆಯೊಳಾ ದಕ್ಷನ ಬಲ
ದೊಡೆಯರು ತನ್ನ ಸನಿಹದೊಳು ಸುರಪತಿ ಮುಖ್ಯಾಮರರು
ನೆಲದೆ ಬಳಿಕುಳಿದ ।
ಪಡೆಸಹಿತಬುಜೋದರ ಹೊಂತಲೆಗೊಳು ಮುಂತೊ
ಗ್ಗೊಡೆಯದೆ ನೆರೆದಿದ ಗೆಲ್[6]ಬೇ[6]ಕೆಂಬತಿ ಛಲವುಂ
ಹಿಡಿದು ಕರಂ ತಂತವಸ್ತ್ರಾಳಂ ಬಲುಹಿಂ ಜೋಡಿಸಿದರವೇಂ ವಣ್ಣಿಪೆನು
॥ ೩೨ ॥

---

[1] ದೂವಳಿಪ ತುರಂಗದ (ಕ,ಗ) [2] ಜೀತ್ಕೃತಿಯೆಣ್ದೆಸೆ (ಅ,ಕ,ಗ) [3] ತಳೆ (ಗ)
[4] ಸೂಱಿಗೆ (ಅ) [5] ಹೊ (ಅ) [6] ವೇ (ಅ)

ಮುಂದೊಡ್ಡಿದ ಹಲಗೆಯನೊತ್ತುವಿಡಿದ ಸಬಳದ
ದೊಂದಣಿಯೊತ್ತಿನೊಳೊತ್ತರಿಸಿದ ಬಿಲ್ಗಾಱರ
ಹಿಂದಣ ಸರ್ವಪದಾತಿಯ ಬಳಸಿದ ತುರಗದ ಹೆಡೆಮೆಟ್ಟಿನ
ಗಜಘಟೆಯ ।
ಸಂದಣಿಸಿದ ರಥತತಿ ಮೆಱೆಯಲ್ ಮೇಳೈಸಿದ
ಮಂದಿಯ ಮುಂದೊಲೆದಾಡುವ ಗೋವಳಗಟ್ಟಿಗೆ
ಯಿಂದೊಪ್ಪಿ[1]ತ್ತಮರರ ಪಡೆ ಬಿಱುಗಾಳಿಯ ಮುಂದಣ ಮೇಘಾವಳಿ
ಯಂತೆ ॥ ೩೩ ॥

ಇಳೆಯೊಳಗೆಳನೇಸಱು ಮೂಡು[2]ವ ತೊ[2]ಡಕೊಂದೇ
ಕಳೆಯನು ತೊಡವಿದ ಕತ್ತಲೆಯೊತ್ತಿಯ ತತ್ತಿಯ
ಬಲದಂತಾ ದಕ್ಷನ ಬಲದೊಡೆಯರ್ ಕಂಡುಬುಬುಬುಬುಬೆನುತ
ಮಹಾದಳವ ।
ಇಳೆ ಹಿಳಿಯಲು ಜವ ಜರಿಯಲು ಸುರಪತಿಯೆರ್ದೆ ಬಿರಿ
ಯಲುಸುರು ಸಿಕ್ಕಲು ಫಣಿಕಮಠರುಗಳಿಗಂದು
ಮ್ಮಳವಾದುದು ಹರಿಬೊಮ್ಮರು ಕಂಬನಿದುಂಬಿದರೆನೆಯುಪಜಯ
ಗಜಬಜವು ॥ ೩೪ ॥

ಹರಿಬಲವಂ ಕಂಡಳುಕುವ ಮದಕರಿವೊಲ್ ಪಿಂ
ತುರವಣಿಸುವ ಹರಿಯಂ ಘರವಟೆ ಕಂಡಾಲಲು
ಹರಿ ಚಕ್ರವ ತಿರುಹಿಸಿ ತಿರುಹುವ ಮದದಿಂ ಕಾಣದೆ ಬೊಮ್ಮನ
ತಲೆಗಿಟ್ಟು ।
ಶಿರ'ವಿ[3]ಲ್ಲೆನುತಲು ಸುರಪತಿ ಮೊದಲಾದಮರರು
ಗರಳದಭಯ ಸುರರಸುರರ ಸುಡುವಂದಿಲ್ಲೀ
ವುರಿ ಹರಹರಹರಯೆಂದೆನುತಂ ಪಡೆ ಬೆದಱಿ ಕೋಡಲು ಹರಿಯುರ
ವಣಿಸಿದನು ॥ ೩೫ ॥

[1] ಶ್ಪ (ಅ) [2] ಹತ (ಕ,ಗ) [3] ವ (ಕ.ಗ)

ಕುಡಿವೆರಲಿಂ ತಿರ್ರನೆ ತಿರುಗಿಸಿ ಕುಬುಬೆನುತಿಡೆ
ಕಿಡಿಗೆದಱುತೆ ಬರುತಿಹ ಚಕ್ರವ ಕಡೆಗೆಸೆಯಲು
ಕಡಿವಡೆದಾಕಾಶಕ್ಕೆ ನೆಗಳ್ದು ಪುಗುಳ್ದೋವದೆ ಬಿಳ್ದುದು ಬಿಳ್ವಾಗ ।
ಪಡೆಸಹಿತಬುಜೋದರನಳಿವಿಂಗಾಕಾಶದೊ
ಳಿಡಿದ ಮಹೋತ್ಪಾತಕ್ಕರ್ಥೇಂದು ನೆಲಕ್ಕುಱೆ
ಕೆಡಹಿತ್ತೆಂಬಂತೆವೊಲಿರೆ ಕೆಡೆಯಲು ಹೇವರಿಸುತ್ತಿಂತೆಂದಾಡಿದನು ॥೩೬॥

ಕಡಿದೆನು ನುಡಿದೆನುಯುಳಿದೆನುಯೊಸಱೊಳೆನ್ನಂ
ಬಿಡುವುದೊ ತಾಂಕಿಡುವುದೊ ವರಚಕ್ರಂ ತೆಗೆತೆಗೆ
ಸಡಿ ಫಡ ನೋಡಾದೊಡೆ ನೋಡೆಂದತಿ ಭರದಿಂ ತಿರುಪಿ ಕರಂ
ಕುಕಿಲಿಱಿದು ।
ಇಡಲೆಂದೆತ್ತಿದ ಕಯ್ಯಂ ಪಾಶಾಸ್ತ್ರದೆ ಜಗ
ದೊಡೆಯಂ ಬಂಧಿಸೆ ಭೂತಳವೆಲ್ಲಂ ನೆಱೆ ಮೊರೆ
ಯಿಡುವಂತಿರೆ ಭೂತಗಣಂಗಳ್ ಕಂಡುಱೆ ಹುರಿಗಟ್ಟಲ್
ಹೇವರಿಸಿದನು ॥೩೭॥

ಕಡುಭಾಷೆಯ[1]ನಿತ್ತುದನಾ।ಪಡೆ ನೆಱೆಕಾಣು
ತ್ತೆಡೆಗೆಟ್ಟೋಡಿತ್ತಾ ಘಟ್ಟಿಸಿ ತಾಗಿದ ಬಲ
ಹುಡಿಹುಡಿಯಾಯಿತ್ತಿಟ್ಟೊಡೆ ಚಕ್ರಂ ಮುಱಿದುದು ಮತ್ತಿಡಲನು
ಮಾಡಿದೊಡೆ ।
ಮಿಡುಕಾಡದೆ ನಿಂದುದು ತೋಳೆನಗಿನ್ನೇನೇ
ನಡಸುವುದೋ ತರಹರಿಸುವುದರಿದರಿದೆನುತಿಳಿ
ಧಡಗಿದನೆರಳೆಯ ರೂಪಂ ಧರಿಸುತ್ತಾಡುತ್ತೋಡಿದನೊಯ್ಯನೆ
ಹೊಳೆಹೊಳೆಡು ॥೩೮॥

---

[1] ನಿತ್ತುಮರರ (ಕ,ಗ)

ಹದ್ದುದ್ದಕ್ಕೆದ್ದೊಡೆ ಕಂಡಂ ನೆಗಪಿದನೇ
ಱಿದ್ದವನೇಂ ಬಿದ್ದನೊ ಜನ್ನದೊಳದ್ದನೊ ನೆಱೆ
ಕದ್ದೋಡಿದನೊ ನೋಡೆಂದಪ್ರತಿಮಂ ಕೆಲಬಲದವರಂ ಬೆಸಗೊಳಲು|
ಗೆದ್ದನೆ ನೋಡೇಣಾಕೃತಿಯಿಂದಂ ಮಱೆಗಾ,
ಹೊದ್ದಿದನಾ ಹೊದ್ದಿದನದೆ ಹೋದನು ನೋಡೆನೆ
ಬಿದ್ದಿಕ್ಕುವೆನೆಂದಲಗಂಬಂ ತೊಟ್ಟೆಚ್ಚನು ಹರಕೋಪಸಮುದ್ಭವನು
॥೩೯॥

ಕೆಡೆಯೆಚ್ಚೊಡೆ ಕೊರಳಂ ಕಡೆಗೆಳೆ[1]ಯುತ[1]ದರ್ಪಂ
ಗೆಡದೋಡುವ ಕೃಷ್ಣಮೃಗಕೆ ಮತ್ತಂ ಕಣೆಯಂ
ತೊಡಲ್ಯೆಸಕ್ಕೇಱಿಸಿ ಬಿಡದೆಸೆವಾ ಚೌಭುಜ ಶಂಖದ ಚಕ್ರದ ಗದೆಯ|
ಕಡುಗಲಿ ಕೈವಾರಿಸುತ್ತೈತರೆ ಕಂಡುಗ್ರವ
ನುಡುಗಿ ನೆಲಕ್ಕೊಲದೂಱಿದ ಧನುವಿನ ಕೊಪ್ಪಂ
ಹಿಡಿದಂಬಂ ತಿರುಪುತ್ತಂ ನಸುನಗುತಾರ್ಭೈದನು ವೈರಿಭಯಂಕರನು
॥ ೪೦ ॥

ಜಯರಿಪು ಕೋಲಾಹಲ ಜಯರಿಪು ಕುಲಭೀಷಣ
ಜಯರಿಪು ಶೋಷಣ ಜಯರಿಪುಫಣಿಖಗಪತಿ ಜಯ
ಜಯರಿಪು ಕರಿ ಮೃಗಪತಿ ಜಯರಿಪುಗಿರಿ ನಾಕಪತಿ........|
ಜಯಭವ ಭಾಳಾಂಬಕ ಶಿಖಿಸಂಭವ ಜಯಜಯ
ಜಯಜಯ ಶರಣಾಗತಜನ ರಕ್ಷಾಮಣಿ ಜಯ
ಜಯಯೆಂದಷ್ಟೋತ್ತರ ಶತನಾಮದಿ ಕೈವಾರಿಸಿದನು ರಿಪು
ಮರ್ದನನು ॥ ೪೧ ॥

---

1 ಯಾಲು. (ಕ,ಗ)

ಎಸಕಂಜದಿರನುಸರಿಸದೆಯುಸುರುಸುರಿಲೆ ರ
ಕ್ಕಸದಲ್ಲಣಯೆನೆ ದೇವರ ಶರಹತಿಗಾಱದೆ
ಹಸಗೆಟ್ಟೇ ಹಂದೆ ಮೃಗಾಕಾರವ ಧರಿಸಿದೆನಿಂತೀ ಕೃಷ್ಣಾಜಿನವ |
ಶಶಿಮೌಳಿಗೆ ಕೊಡುವೈ ಲಿಂಗಾರ್ಚನೆಯೆಡೆಗಾ
ಗಿಸುವೈ ಹೈ ಯಜ್ಞದ ಕರ್ಮಗಳಿಗೆ ಮೊದಲಿದೆ
ನಿಸುವೈ ತಾಯೆಂದಾ ಚಮವನಾಯುಧವಂ ಕೊಂಡುಳಿದರನಱಸಿ
ದನು ‖ ೪೨ ‖

ಚೂಣಿಯ ಹೂಣಿಗರಂ ಮಾಣದೆ ಕಾಣಿಸೆ ಹುಲಿ
ಗೋಣನ ತೂಣನ ತೋಳಂ ತುಂಡಿಸಿ ಪೂಷನ
ಕೋಣೆಯ ಹಲ್ಲೆಲ್ಲವ ಘಲ್ಲಿಸಿ ಭಗದಿನಪನ ಕಣ್ಣಂ ಮಣ್ಣೊಳು ನೆರಹಿ |
ಪ್ರಾಣದ ಭಯ[1]ದಿಂದಂ ರಣಗತ್ತಲೆಯೊಳ್ ಕ
ಣ್ಗಾಣದೆ ರೂಹಡಗಿಸಿ ಕದ್ದೋಡುವ ನಾಕದ
ನಾಣಿಲಿ ಶಕ್ರಾದಿಗಳಭಿಮಾನವ ಕೊಂಡುಂ ತಿರುಗಿದನಧ್ವರದೆಡೆಗೆ
‖ ೪೩ ‖

ಕಡುಪಿಂದೊಬ್ಬಂ ಹರಿತಂದೆಲೆ ಪಾತಕ ಸುಡು
ಸುಡು ಯಾಗಂ ಬೆಂದತ್ತಗ್ಗದ ಯಜ್ಞಶಿರಂ
ಕೆಡಹಿತು ಕಾಲನ[2]ತೋಳ್ಕಡಿವಡೆಯಿತುಪೂಷನ ಹಲ್ಲುಡಿಯಿತು
ಭಗಲೋಚನವು |
ಒಡೆಯಿತು [3]ಸುರರೆಲ್ಲರ್ ಮಡಿದರು ಮಿಕ್ಕರು ಹುಲು
ವಿಡಿಯಿತ್ತಿ[4]ನ್ನೇನಾ ಬಂದನೆಯನುವಾಗೆಂ
ದೊಡೆ ಝುಂಕಿಸಿ ಹೋಮಂ ನಡೆಯಲಿ ಬಂದೊಡೆ ಕೈದೋಱು
ವೆನೆಂದಂ ಖಳನು ‖ ೪೪ ‖

---

[1] ದಂದಂ (ಅ) [2] ಕೋ (ಅ) [3] ಸುರರೆಲ್ಲಂ ಮಡಿಯಿತು (ಕ,ಗ) [4] ನ್ನೇಂ (ಅ)

ಹಿಡಿದಾಹುತಿಯಂ ತುತ್ತಿಡುವರು [1]ಕೆಂಡಂಗಳ[1]
ಮಡಕೆಯೊಳಗೆ ಬೇಳ್ವರು ಸ್ರುಕ್ ಸ್ರುವೆಗಳನಾಹುತಿ
ಗೊಡುವರು ಮುನ್ನಳಿದಜಪಶುವಂ ಮಱಿದಲ್ಲಿಯ ಗಡ್ಡದುಪಾಧ್ಯರ ಕೊರಳ |
ಮಡಿದು ಕೆಡಹಿ ಗಂಟಲನೊಡೆಮುಱಿಯುವರತಿಭಯ
ಹೊಡೆದೊಂದೊಂದಂ ಮಾಡುತ್ತಿರೆಯಿರೆ ಮಿಾಱಿದ
ರಡಸಿದರಾಡಿದರುಱಿ ಕವಿದರು ಬೊಬ್ಬಿಟ್ಟರು ಸುಟ್ಟರು ಮಖಶಾಲೆಯನು ||೪೫||

ಕಡುಗಲಿ ವೀರೇಶಂ ಘುಡುಘುಡಿಸುತ್ತೊಳ ಪೊಕ್ಕಾ
ವೆಡೆ ನಿಂದಕನೆನುತ್ತೈತರೆ ಕಂಡಿದಿರೇ[2]ಳಲ್[2] ಕೆಡೆ
ಕೆಡೆ ಪಾಪಿ ಶಿವದ್ರೋಹಿಯೆನುತ್ತೆಱಗಲ್ತಲೆ ದುಟುದುಟು ದುಟನುರುಳೆ |
ದುಡುಮೆನೆ ಬೀಳಲ್ ಮುಂಡಂ ಬಾಯ್ಸವಿಗಾಟಿಸಿ
ನಡೆತಂದಾ ಹೋಮದ ಕುಂಡದ ಕೆಂಡದ ನಡು
ನಡುವಗ್ನಿಯ ಬಗೆದನಲನ ನಾಲಗೆಯೇಳಂ ಕಿತ್ತಂ ರಿಪುದಲ್ಲಣನು ||೪೬||

ನಿಲ್ಲದೆ ವಾಣಿಯವ್ರೋಲೆಯ ತೊಂಗಲನಿಳುಹಿದ
ರಲ್ಲಿಯ ಮುನಿಗಳ ಮಿಾಸೆಗೆ ಮಿಡುಗುರಿನಿಟ್ಟರು
ಹುಲ್ಲಂ ಕಚ್ಚಿಸಿದರು ಹೋಮದ ಹಿರಿಯರನೊದೆದರು ಕುಂಡದ ಕೆಂಡವನು |
ಚೆಲ್ಲಿದರೆಲ್ಲಾ ಸತಿಯರ ಸೆಱೆವಿಡಿದರು ಬಳಿ
ಕಲ್ಲೆಂಬವರಾರುರಿವರಿದರು ಹರಿದೆಱೆ[4]ಯನ[4]
ಸೊಲ್ಲಿಸಿ ದಕ್ಷನ ಮಂಡೆಯನೊದೆಸೆಂಡಾಡಿದರಾ ವೀರನ ಕಿಂಕರರು ||೪೭||

---

[1] ಕೆಂಡಗಳಾ (ಅ) [2] ಳಂ (ಅ) [3] ದ್ದಾ (ಅ) [4] ಯಂ (ಕ, ಗ)

ಮೃಡನೋಲಗಕೀ ದಕ್ಷನನೊಯ್ಯ[1]ಲ್ಬೇಕೊ
ಯ್ವೊಡೆ[2]ಹೊಂ[3]ದಿದ ಹೊಂದಿದನೆತ್ತುವೆನಿನ್ನೆಂದೆಂ
ಬೊಡೆ ತಲೆಯುಂ ಬಲ್ಲಿದರೊದೆಸೆಂಡಾಡಿದರಿನ್ನೆಂತೆಂದುರವಣಿಸಿ ।
ಕೆಡೆದಿರ್ದಜಪಶುವಿನ ತಲೆಯುಂ ಮುಂಡದ ಮೇ
ಲಿಡಿಸಿದ ರುಂಡವ ಜೀವಂಗೊಟ್ಟಾ ನಿಂದಕ
ನೊಡಲಸುರರು ಮನುಗಳು ಮುನಿಗಳು ಸಹಿತಂ ಕೋಡಗ[4]ಗಟ್ಟಂ
ಕಟ್ಟಿದರು ॥ ೪೮ ॥

ಖಳದಕ್ಷನ[5]ಹೆಡಗು[6]ಡಿಯನು ದಿಗಧೀಶರ ಮುಂ
ದಲೆಯನು ಮುನಿಗಳ ಗಡ್ಡಂಗಳನಮರರ ಹೆಡ
ತಲೆಯನು ಯಜ್ಞನ ಕುಡಿಗೆಯ್ಯನು ಸತಿಯರ ಸೆಜ್ಜೆಯನು
ಹಿಡಿದತಿ ನಡೆಸುತ್ತ ।
ಕುಲಿಶಂ ಚಕ್ರಂ ಮೊದಲಾದಾಯುಧಮಂ ತಳಿ
ದುಳಿದೈರಾವತ ಮೊದಲೆನಿಸಿದ ವಾಹನಸಂ
ಕುಲವಂ ನಲಿದೇಜಿ ಗಣಂಗಳು ನಡೆದರು ಸಂಭ್ರಮವದ
ಸೇವಣ್ಣಿಪೆನು ॥ ೪೯ ॥

ಕಡುಗಲಿಗಳ ಬೊಬ್ಬೆಯು ಮೊಳಗುವ ಗೆಲ್ಲವಜೆಯ
ಬಿಡದೊಂಲುವ ಕಹಳೆಯು ಕುಂಬುವ ಕೊಂಬಿನ ಹೊ
ಯ್ದುಡುಗದ ಭೇರಿಯುನಡಸುವ ಗರ್ಜನೆಗಳ ಪಡೆಯೊಳು ಪುಟ್ಟುವ
ನಿಜದನಿಯ ।
ಎಡಬಲದೊಳು ಹಾಡುವ ಹರಸುವ ಹೊಗಳುವ
ಹೊಡವಡುವಾರತಿಯೆತ್ತುವ ನಾನಾ ನಾದಂಗಳ
ಸಡಗರದಿಡುಕುಜಿ ನಡುವಡರ್ದಂ ಪೊಕ್ಕಂ ಕೈಲಾಸವನಚಲಿತ
ಬಳನು ॥ ೫೦ ॥

---

1 ಲೆಕೊಯಿ (ಅ) 2 ವೊಂ (ಅ) 3 ದಯಾನಿಧಿ (ಕ,ಗ) 4 ಗಂಟಂ ಗಟ್ಟಿದನ (ಅ)
5 ಜಡಮು (ಅ)

ಅರರೇ ಮಝುಭಾಪಪ್ರತಿಮ ಬಳಾಧಿಕನೇ
ಉರು ಪಟುಭಟ ನಿಮ್ಮಿಂದೀ ಹೊಟ್ಟೆಯ ಹೊಲಿಗೆಯ
ಹುಱಿ ಹಱಿದುದು ಬಸುಱ ಬಱಿಂ ಹೋದುದು ಬಯಕೆಗೆ ಬಿಡುಗಡೆಯಾ
ಯಿತ್ತೆಂದು।
ಹರಸುವ ಮಾಱಿಯ ಹೊಗಳುವ ವೃತ್ಯವ ನಲಿದ
ಬ್ಬರಿಸುವ ಮರುಳ್ಗಳ ಹುಡುಕುವ ಶಾಕಿನಿಡಾಕಿನಿ
ಯರನಾಡುವ ಬೇತಾಳರನೀಕ್ಷಿಸಿ ನಗುತಂ ನಡೆದಂ ವೀರೇಶ್ವರನು
॥ ೫೧ ॥

ಯುವತಿಯೆ[1]ಬಾ ಹೇಳಿವ[1]ರೊಳು ದಕ್ಷನೆನಿಪನಾ ತಾಹೋ(?)
ಗುವ[2]ಣಲ್ಲಿಗೆ[2]ಕುಱಿಮೊಗದವನಲ್ಲಾ ಅವುದವು
ದವುದಿಸ್ಸೀ ಹೊಲೆಮೋಱಿಗೆ ಬೇಕೇ ಬೇಕಹಿಭೂಷಣ ನಿನ್ನಯ
ಮಾತು।
ಇವನೇಕಿಂತಾದನುವಿನ್ನೂ ಕೇಳಾಕೇ
ಳುವುದಿಲ್ಲಂ ಹುಸಿಯಲ್ ನಿನ್ನಾಣೆ ಶಿರಸ್ಸಂ ಕಡಿ
ದವಿಮುಖವಿಟ್ಟಂ ವೀರೇಶನೆನಿಪೀ ಸೂಳ್ನುಡಿ ನೆರೆದವು ಸತಿಯರೊಳು
॥ ೫೨ ॥

ಈ ಬಂದನೆ ಶಿವದೂಷಕ ಗಜ ಕಂಠೀರವನೀ
ಬಂದನೆ ಶಿವದೂಷಕ ಕುಲಮದಮರ್ದನ
ನೀ ಬಂದನೆ ಶಿವದೂಷಕ ಸಂಕುಲ ವನನಿಧಿಮಥಿತ ಮಹಾ
ಮಂದರನು।
ಈ ಬಂದನೆ ಶಿವದೂಷಕ ತಿಮಿರದಿವಾಕರ
ನೀಬಂದನೆ ತೊಲತೊಲಗೆಂದುಲಿಯುತ್ತಿಹ ಕಹ
ಳಾ[3]ಬಹಳಸ್ವನದಿಂ[3] ನಡೆತಂದರಮನೆಯಂ ಪುಗುತಂದಂ
ಪಟುಭಟನು ॥ ೫೩ ॥

---

1 ರೆನ್ನಿದಿ ಕ,ಗ) 2 ನೆಲ್ಲಿಯ (ಕ,ಗ) 3 ಬಂಧುರ ನಿನದಿಂ (ಅ)

ಕರೆದಲ್ಲದೆ ತರಬೇಡಬುಜಾಂಬಕ ಮುಖ್ಯಾ
ಮರರಾರುವನೆಂದು ಗಣಂಗಳ್ಗೆ ಬೆಸಂವೇ
ಳ್ದಿರಿಸಿ ಸಮಂತರಮನೆಹೊಕ್ಕಂದೊದವಿದ ಪರಿಭವಮಂ ಬೀಳ್ಕೊಂಡು।
ಚರಣಂಗಳಿಗೆಱಗಿದ ವೀರೇಶನನಘಸಂ
ಹರನಾದರಿಸುತ್ತಿಪ್ಪನಿತಕ್ಕಂ ಕವಿದೊ
ತ್ತರಿಸಿದರುರವಣಿಸಿದರಪ್ರತಿಮನ ಮೇಲಣ ಮುನ್ನಣೆಯ ಮಹಾ
ಭಟರು ॥ ೩೪ ॥

ಘನಯಜ್ಞನ ಶಿರವಿದು ದಕ್ಷನ ತಲೆಯಿದು ಕಾ
ಲನ ತೋಳಿದು ಭಗಲೋಚನವಿದು ಪೂಷಾದಿ
ತ್ಯನ ಹಲ್ಲಿದು ವಾಣಿಯ ಮೂಗಿದು ಮೃಗದೊಗಲಿದು ಗದೆಯಿದು
ಹೊಸಚಕ್ರವಿದು ।
ಅನಲನ ನಾಲಿಗೆಯಿವು ಸುರಪತಿ ಮುಖ್ಯರ ವಾ
ಹನವಿವು ಮಂಡನ ಶಸ್ತ್ರಾಸ್ತ್ರಾವಳಿಯಿವು ಸ
ನ್ಮುನಿಗಳ ಸೃಕ್‌ಸ್ರುವವಿವು ಚಿತ್ತೈಸೆಂದೊಪ್ಪಿಸಿದರು ವೀರನ ಕಿಂಕರರು
॥ ೩೫ ॥

ಹಿಂದಱಿಯದೆ ನಿಂದಿಸಿದೀ ದೋಷಂ ಕುಱಿಮೊಗ
ದಿಂದಱಿಯಲ್ ಬರುತಿದೆ ಪಶುವಾಂ ಪಶುಪತಿ ನೀ
ನೆಂದು ಮಹಾದೈನ್ಯದಿ ದಕ್ಷಂ ಕೀರ್ತಿಸೆ ಮೆಲ್ಲನೆ ನಗುತೇಳಿಸಿ ಕೃಪೆಯಿಂ।
ಎಂದನು ಮನವೊಲಿದುದ ಬೇಡೆನೆ ಕ್ರತುಫಲವಂ
ತಂದೆ ಕರುಣಿಸೆನಗೆನೆ ಶತಯಜ್ಞದ ಫಲಗಳ
ನಿಂದುಧರಂ ಕೊಟ್ಟಂ ಸುರರ ಶಿರದೊಳಗಭಯ ಕರವನಿಟ್ಟಂ
ಕರುಣಾಕರನು ॥ ೩೬ ॥

ಸಾಯದೆ[1]ಬದುರ್ಕಿದಜ[1]ಹರಿ ಸುರ ಸಂಕುಲವ
ನ್ಯಾಯವನೆಂದುಂ ನೀಂ ಬಳಸದಿರೆಮ್ಮಲ್ಲಿಯ
ಪಾಯಂಗೊ[2]ಳ್ಳದ[2]ಹವ್ಮೇಱಿದ ಸಾಕ್ಷಾಚ್ಛ್ರೀವೀರದ
ರುದ್ರನುಮಿವನ ।
ಘಾಯಕೆ ತರಹರಿಸಲ್ ಬಾರದೆನುತ ಹಂಪೆಯ
ರಾಯನವರ ಕಳುಹಿದ ಕೃತಿಯಂ ರಚಿಸಿದ ಕವಿ
ರಾಯನ ವರಸುತ ರಾಘವದೇವನ ಬಿನ್ನಪಮಂ ಸದ್ಭಕ್ತಜನರ್ ಕೇಳ
॥ ೫೭ ॥

---

[1] ಬದುಕಿದೆರಜ (ಕ,ಗ) [2] ಳದೀ (ಅ)

ಅಂತು ಸಂಧಿ ೩ಕ್ಕಂ ಪದನು ೧೫೭ಕ್ಕಂ ಮಂಗಳಮಹಾ

ಶ್ರೀ ಶ್ರೀ ಶ್ರೀ

ಮಹಾ ಕವಿ ಹರೀಶ್ವರ ವಿರಚಿತ

ವೀರಭದ್ರ ದೇವರ ರಗಳೆ

——:o:——

ಕಂದಃ—

ಪಿರಿದುಂ ಬಗೆಯದೆ ದಕ್ಷಾ|
ಧ್ವರಮಂ ನಿರ್ಧೂಮಧಾಮಮಂ ಮಾಡಿ ಸುಧಾ||
ಕರಧರನ ವಿರೂಪಾಕ್ಷನ|
ಚರಣವನೈತಂದು ವೀರಭದ್ರಂ ಕಂಡಂ||

ಲಲಿತ ರಗಳೆ—

ಶ್ರೀರಜತಗಿರಿಯೊಳೊಪ್ಪುವ ಸಭಾನಿಳಯದೊಳ್|
ಮಾರಾರಿ ಹಂಪೆಯ ವಿರೂಪಾಕ್ಷನೊಪ್ಪದೊಳ್||

ಭೂತೇಶನಪ್ರತಿಮರೂಪನೊಪ್ಪುತ್ತಿರ್ದ|
ನಾತನೊಡ್ಡೋಲಗವನೇನೆಂಬೆನೆಸೆದಿರ್ದ||

ಲಕ್ಷ್ಮೀಸರಸ್ವತಿಗಳೊಲಿದು ಚಾಮರವಿಕ್ಕೆ|
ಸೂಕ್ಷ್ಮದಿಂದಿಂದ್ರಾಣಿ ನಲಿದು ಸೀಗುರಿಯಿಕ್ಕೆ||

ರಂಭೆ ಯೂರ್ವಶಿ ತಿಲೋತ್ತಮೆ ಮಂಜುಘೋಷೆಯರ್|
ಶಂಭುವಿನ ಕೆಲಬಲದೊಳುಪ್ಪುವತಿ ನೀರೆಯರ್||

ತರದಿಂದ ದೇವವನಿತೆಯರ್ ಪಲರ್ಕುಳ್ಳಿರಲ್|
ಸುರನಾರಿಯರ್ಸಮುಚಿತಾಸನದೊಳೊಪ್ಪಿರಲ್||

ಕರಿವದನನುಂ ತಾರಕಾರಿಯುಮಂ ಬಂದಿರಲ್|
ಸರಸಿಜಭವಂ ಸರಸಿಜೋದರಂ ಬಂದಿರಲ್||

ಕೆಲಬಲದೊಳೊಪ್ಪ ದಿಂದಮರಗಣನಾಯಕರ್।
ಛಲಿಗಳಪ್ರತಿಮರತಿರಥರುಗ್ರನಾಯಕರ್॥

ಸಚರಾಚರವನಳಿವ ಮಾಡುವಾಟದ ಕಿರಿಯ।
ರಚಲರಭವರ್ತಮತಮಗೆ ಮುಖ್ಯರತಿಬಳರ್॥

ಕಂತುಹರನಾಪ್ತ ಪರಿವಾರವೆಂದೆನಿಸಿರ್ಪರ್।
ಸಂತತಂ ಪರಮಂಗೆ ಪರಮ ಬಂಧುಗಳಪ್ಪ॥

ನೆನೆವ ಮನವೀವ ಕೈವಿಡಿವ ಕೈದುಗಳೆನಿಪ।
ತನಿನೇಹದೊಲ್ಮೆ ಕಡುಬಾಕುಳಿಗಳೆಂದೆನಿಪ॥

ಪುರವಂ ಕ್ಷಣಾರ್ಧದೊಳ್ಸುಟ್ಟುರುಪಿದರ್ ಕೆಲರ್।
ಶರಭರೂಪಾಗಿ ತಲೆದಂದ ಶರಣರ್ಕೆಲರ್॥

ಲೀಲೆಯಿಂ ಮನಸಿಜನನುರುಪಿದರ್ಕೆಲರಲ್ಲಿ।
ಕಾಲನಂ ಕೋಪದಿಂ ಸುಟ್ಟವರ್ಕೆಲರಲ್ಲಿ॥

ಸಿಡಿಲ ಬಳಗಮನೊಂದುಗೂಡಿ ಗಡಣಿಸಿದಂತೆ।
ಮೃಡನತಿಬಲಂ ಬೇರೆ ಬೇರೆ ರೂಪಾದಂತೆ॥

ಕೆಲರು ಸಾಲೋಕ್ಯದರ್ ಕೆಲರು ಸಾಮೀಪ್ಯದರ್।
ಕೆಲರು ಸಾರೂಪ್ಯದರ್ ಕೆಲರು ಸಾಯುಜ್ಯದರ್॥

ಹೊಗಳಲೆನ್ನಳವೆ ಗುರು ವಿರುಪಾಕ್ಷನಣುಗರಂ।
ಬಗೆಗಗೋಚರರೆನಿಪ ಶಿವಲಿಂಗ ಸೊಬಗರಂ॥

ಇಂತೆಸೆವ ನಂದೀಶ್ವರಾದಿ ಗಣತತಿ ಬಂದು।
ಕಂತುಹರನಿಕ್ಕೆಲದೊಳೆಸೆಯೆ ನಲವಿಂ ನಿಂದು॥

ಭೃಗುವು ದೂರ್ವಾಸರ್ ದಧೀಚಿ ಕಾಶ್ಯಪರೆಂಬ।
ಮಿಗೆ ಭಗೀರಥ ಜಹ್ನು ಜಮದಗ್ನಿ ಶುಕರೆಂಬ॥

ಜೈಮಿನಿ ವಶಿಷ್ಠ ಮಾರ್ಕಂಡೇಯರೆಂದೆಂಬ।
ರೋಮಜಂ ಜಾಬಾಲ ಗಾರ್ಗ್ಯ ಗೌತಮರೆಂಬ॥

ತರದಳೊಪ್ಪುವ ರಾಜಋಷಿ ದೇವಋಷಿಗಳಿಂ।
ಪರಮ ಕಾರುಣಿಕರೆನಿಪಾ ಬ್ರಹ್ಮಋಷಿಗಳಿಂ॥

ಸುರಪ ಶಿಖಿ ಯಮ ನೈಋತಾಪ್ಪತಿಗಳೆಂಬರಿಂ।
ನರವಾಹನೀಶಾನರೆಂಬ ದಿಕ್ಪಾಲರಿಂ॥

ಎಸೆವ ಕಿನ್ನರರ ಸಿದ್ಧರ ಮೊತ್ತವದುಬೇರೆ।
ಪೆಸರ ಗರುಡರ ಖೇಚರರ ಮೊತ್ತವದು ಬೇರೆ॥

ಇರೆ ಸುರರು ದನುಜ ವಿದ್ಯಾಧರರ ವೀಧಿಗಳ್।
ನೆರೆದ ಗಂಧರ್ವರ ಫಣೀಶ್ವರರ ಪಙ್ತಿಗಳ್॥

ಮೆರೆಯಲಜಕೋಟಿ ಪಂಕಜನಾಭಕೋಟಿಗಳ್।
ತುರುಗೆ ರವಿಕೋಟಿಗಳ್ ಶೀತಾಂಶು ಕೋಟಿಗಳ್॥

ಎಸೆವುತಿರೆ ಸಾಲಿಟ್ಟು ಮಕುಟಂಗಳೊಂದು ದೆಸೆ।
ಒಸೆದೊಸೆದು ಕೈಮುಗಿವ ಯಕ್ಷತತಿಯೊಂದು ದೆಸೆ॥

ಕಿವಿಗುಡುವುದೆಮಗೆಂಬ ನಾದಂಗಳೊಂದು ದೆಸೆ।
ತವಕದಿಂ ತುತಿಯಿಸುವ ವೇದಂಗಳೊಂದು ದೆಸೆ॥

ಧರೆ ಜಲಂ ಸಪ್ತಾರ್ಚಿ ವಾಯುವಾಕಾಶದಿಂ।
ಖರಕಿರಣ ಹಿಮಕಿರಣ ವಾತ್ಮಸಂತಾನದಿಂ॥

ಬೆಸವೇಳ್ದುದಂ ಬಯಸುವಣಿಮಾದಿ ನಿಕರದಿಂ।
ಬೆಸಸುಬೆಸಸೆಮಗೆಂಬ ಸಾಮರ್ಥ್ಯವೊತ್ತದಿಂ॥

ಪವಣಿಸುವಡರಿದೆನುತ್ತಿರ್ಪ ಶಾಸ್ತ್ರಂಗಳಿಂ।
ತಮತಮಗೆ ಹೊಗಳುತೊಪ್ಪುವ ಪುರಾಣಂಗಳಿಂ॥

ಮೌನದಿಂ ನಿಂದಿರ್ಪ ತರ್ಕಸಂದೋಹದಿಂ।
ಧ್ಯಾನಿಸುತ್ತಿರ್ಪ ಸಕಲಾಗಮವ್ಯೂಹದಿಂ॥

ಹತ್ತಿ ಸಾರ್ದೋಲಗಿಪ ಚೆಲ್ವುಗಳ ಮೊತ್ತದಿಂ।
ಮುತ್ತಿ ಬಂದೋಲಗಿಪ ಸಂಪನ್ನಿಕಾಯದಿಂ॥

ತರತರಂಗೊಂಡಿರ್ಪ ಪುಣ್ಯಸಂತಾನದಿಂ।
ನೆರೆನೆರೆದು ಬರುತಿರ್ಪ ಬಯಕೆಗಳ ಮೊತ್ತದಿಂ॥

ನಲಿದು ಬಂದೋಲಗಿಪ ಸಕಲ ಸುಖನಿಕರದಿಂ।
ಸಲೆ ಕೈಗಳಂಮುಗಿವ ವೀರಗಣ ನಿವಹದಿಂ॥

ಕಡೆಕಡೆಯೊಳೋಲಗಿಪ ಜಸವೆಣ್ಗಳಿಕ್ಕೆಯಿಂ।
ಮೃಡನ ತೋಳ್ಗಳನೋಲಗಿಪ ಜಯತತಿಗಳಿಂ॥

ಚರಣಮಂ ಪಿಡಿದಿರ್ಪ ಮಂಗಳದ ಪಙ್ತಿಯಿಂ।
ಹರವರಿಯೊಳುರಿವ ಘನ ತೇಜಂಗಳಿಕ್ಕೆಯಿಂ॥

ಕಡೆಗಂಗಳಂ ಬಯಸುತಿರ್ಪ ಕಾರುಣ್ಯದಿಂ।
ಮೃಡನ ವರವಂ ಪಾರ್ದು ನಿಂದಿರ್ಪ ಭಾಗ್ಯದಿಂ॥

ಎನಗೆತನಗೆನುತಿರ್ಪ ಭೋಗಂಗಳೊಗ್ಗಿನಿಂ।
ತನತನಗೆ ನಲಿಪ ಗಣಪದವಿಗಳಗುರ್ವಿನಿಂ॥

ನಿರ್ವಿಕಾರದೊಳಿರ್ಪ ಶಾಂತಿಗಳ ಕೊರ್ವಿನಿಂ।
ಶರ್ವನಂ ಬಯಸುತಿಹ ಮಂಗಳದಗುರ್ವಿನಿಂ॥

ಬೆಳಗನುಗುಳುತ್ತಿರ್ದ ಕಾಂತಿಗಳ ಬಳಗದಿಂ।
ತಿಳಿಯಲೆಂದಿರ್ದಖಿಳ ವಿದ್ಯಾಸಮೂಹದಿಂ॥

ಸಾರೆ ಬಂದೋಲಗಿಸಲೆಂದಿರ್ದ ನೃತ್ಯದಿಂ।
ಕಾರುಣ್ಯಮಂ ಬಯಸಿ ನಿಂದಿರ್ದ ಸತ್ಯದಿಂ॥

ಇಂತು ಸಕಲೈಶ್ವರ್ಯದುನ್ನತವನೊಳಕೊಂಡ।
ನಂತಂತೆ ಹೊಗಳಲಾರದ ಘನವನೊಳಕೊಂಡ॥

ದೆಂತೆಂತುಪಮೆಗಗ್ಗಳವಾದುದಾಸ್ಥಾನ।
ವಂತಂತೆ ಮೆರೆದುದು ವಿರೂಪಾಕ್ಷನಾಸ್ಥಾನ॥ ೮೦

ಆ ಸಮಯದೊಳು ದಂಡಧರರೆಂಬ ಭಟರಲ್ಲಿ।
ವಾಸವನೆ ನುಡಿ ಬೇಡ ಸಂತವಿರು ನೀನಿಲ್ಲಿ॥

ಕಾಯ್ಪುನುಡುಗಗ್ನಿ ಹೆರೆಸಾರ್ಕಾಲ ಕೌಣಪನೆ।
ಸೈಪಿನೊಳಿರಬ್ಧಿಪತಿ ಸುಳಿಯದಿರ್ಮಾರುತನೆ॥

ತೆರಹುಗುಡು ಗಂಧರ್ವರಾಜ ಕಿನ್ನರಪತಿಗೆ।
ಬರಿದೆ ಗಳಪದಿರೆಲವೊ ಬೊಮ್ಮನಿನ್ನುನ್ನತಿಗೆ॥

ಬಿನ್ನವಿಸು ಮನ್ನಣೆಯ ವನಜಾಕ್ಷ ಕೈಮುಗಿದು।
ನಿನ್ನ ಹೆಡೆಗಳನುಡುಗಿ ನಿಲ್ಲಹಿಪ ಹೆಡೆತಿಗೆದು॥

ಕಳಕಳವಿದೇಕೆ ಮಾಣ್ಮಾಣು ಹೋ ಹೋ ಎನುತೆ।
ಅಳವಲ್ಲ ಸಂತೈಸ ಬಾರದಾಹಾ ಎನುತೆ॥ ೮೬

ಇವನಾವ ಬೊಮ್ಮಾಂಡದಬ್ಜಜಂ ಹೇಳೆಂದು।
ಇವನಾವ ಬೊಮ್ಮಾಂಡದಬ್ಜೋದರನುಮೆಂದು॥

ಆವಾವ ಸ್ವರ್ಗಂಗಳಿಂದ್ರರ್ಕಳಿವರೆಂದು।
ಆವಾವ ಲೋಕದವರೀ ಮಹಾ ನೃಪರೆಂದು॥

ಇಂತು ಪಡಿಯರ್ತವ್ಮೊಳ್ಳೊಳ್ನುಡಿವ ಸಮಯದೊ--
ಳುಂತೆ ತುಂಬುರ ನಾರದರ್ ಮಧ್ಯ ರಂಗದೊಳ್॥

ನವ ವೀಣೆಯಿಂ ಬಹು ಸುಗತಿ ಸುಸ್ವರಂ ಬಡೆಯೆ।
ವಿವಿಧ ರಾಗಂಗಳಂ ನೃಪ ಶಕ್ತಿಗಳ್ ತಡೆಯೆ॥

ಕೆಯ್ಯೆ ಮನವಾದ ತೆರದಿಂ ಬಾರಿಸುತ್ತಮಿರೆ।
ಸುಯ್ಯಗ್ಗಳಂ ಮರೆದೋಲಗಂ ನಾಡೆ ಕೇಳುತಿರೆ॥

ಇಂತು ತುಂಬುರನಾರದರ್ವಿಣೂಪಾಕ್ಷನಂ।
ಸಂತಸದೊಳೋಲಾಡಿಸುತ್ತ ವಿಷಮಾಕ್ಷನಂ॥

ಕೇಳಿಸಿದನಂತರಂ ಕಿನ್ನರರ್ಸವಿಗೂಡಿ।
ಮೇಳೈಸುತಾರ್ಯೆಸಿ ಸಭೆಗೆ ಹರುಷಂ ಮೂಡೆ॥

ಮನದೊಳಗೆ ಶಾಂತಿಯಂ ಸರವಡಗದಂದದಿಂ।
ಕೊನೆ ಮಿಂಚಿನೋಳ್ ಕಾಂತಿಲತೆ ಹುಟ್ಟಿದಂದದಿಂ॥

ಬೋಳೈಸಿ ರಾಗಂಗಳಂ ಕರೆವ ಮಾಳ್ಕೆಯಿಂ।
ಮೇಳೈಸಿ ನೆರೆದ ಸಭೆ ಕರುವಿಟ್ಟ ಮಾಳ್ಕೆಯಿಂ॥

ಕಿವಿಯೊಡ್ಡಿ ಕೇಳುತಿರೆ ಚಿತ್ತಮಂ ಮಿಗೆ ಸಲಿಸಿ।
ಕಿವಿಯುಬಳಿ ಸಂದುವಿಂದ್ರಿಯಚಯಂ ತಲ್ಲಣಿಸಿ॥

ಸಭೆಯೊಂದೆ ಮನವಾದ ಮಾಳ್ಕೆಯಿಂ ಕೇಳುತಿರೆ।
ಅಭವನಂ ಸುಖದ ಮಱಹಲ್ಲಲ್ಲಿ ನೆರೆವುತಿರೆ॥

ಇಂತು ಮುನ್ನಿನ ಪರಿಯೊಳಿರ್ದುದಾ ದೇವಸಭೆ।
ಅಂತಿರ್ದುದಾಗಳೇತೀವಿಡುತ ಪರಮಸಭೆ॥

ಇಂತು ಸಭೆಯಂ ಸುಖದ ಸೈವೆರಗಿನೊಳಗಿರಿಸಿ।
ಸಂತಸದಿ ನಾದರಸದೊಳ್ ಚಿತ್ತಮಂ ಸಲಿಸಿ॥

ರಾಗದಿಂ ಕಿನ್ನರರ್ ಪಾಡು ತೆಂದುಂ ಮೆಱೆಯೆ।
ರಾಗಂಗಳಿಂದಮೃತನಾದಂ... ಕಱೆಯೆ॥

ತನತನಗೆಸೆವ ಮಧ್ಯಮಾದಿ ಭೂಪಾಳಂಗ।
ಳನು ರಾಗದಿಂದೆ ಧೇಶಾಕ್ಷಿ ಪಳಮಂಜರಿಗ॥

ಳಾದಿಯಾಗಿರ್ದ ಬಹುರಾಗಂಗಳಲ್ಲಲ್ಲಿ।
ನಾದದಿಂ ಕೇಳಿಸೆ ಹರಂ ಸುಖದೊಳಿರಲಲ್ಲಿ॥

ನಾದದುನ್ಮತ್ತವಾದುದು ದೇವಸಭೆಯೆಲ್ಲ।
ನಾದಮೂರ್ತಿ ಯೆನಿಸಿದನಂದು ಗಿರಿಜೆಯ ನಲ್ಲ॥

ನೇನೆಂಬೆನೋಲಗಂ ಜೊಮ್ಮಿನೊಳಗಿರ್ದಂತೆ॥
ಜೇನಯ್ಯಸುರಿವಳೆಯದೊಳಗೆ ನಾದತಿರ್ದಂತೆ॥

ರಾಗರಸದೊಳಗೆ ಮುಳುಗಿರ್ದುದೊಡ್ಡೋಲಗಂ।
ರಾಗದಿಂದಿರ್ದನಭವಂ ಸುಖದ ಮೂಲಿಗಂ॥

ಇರಲಿತ್ತ ಹಂಸಗಳ್ ಚಕ್ರವಾಕಗಳಿರ್ಪ।
ಸರಸಿಗೆ ಬಕಂ ನೋಡಲೆಂದು ಮೆಲ್ಲನೆ ಬರ್ಪ॥ ೧೩೮

ತೆಱದಿಂದೆ ಬಂದು ದಕ್ಷಂ ಸಭೆಯ ನಡುವೆ ನಿಲೆ।
ಕಱಿಗೊರಲನವನನೀಕ್ಷಿಸದೆ ಸುಖದಿಂದೆ ನಿಲೆ॥

ಮಱದು ಕೇಳುತ್ತಮಿರೆ ಮನ್ನಿಸನಳಿಯನೆಂದು।
ಪೊಱಮಟ್ಟನಲ್ಲಿಂದೆ ಮುಳಿದು ನಿಂದಿಸುತಂದು॥

ಪರಮಾಣು ಮೇರುವಿನ ಹೆಂಪಿಂಗೆ ಮುಳಿವಂತೆ।
ಸರಸಿ ಸಾಗರದ ಗಾಂಭೀರ್ಯಕ್ಕೆ ಮುಳಿವಂತೆ॥

ತರಗೆಲೆ ದವಾನಲನ ಕಾಯ್ಪಿಂಗೆ ಮುಳಿವಂತೆ।
ಗರುಕೆ ಕಲ್ಪದ್ರುಮದ ಸಂಪದಕೆ ಮುಳಿವಂತೆ॥

ಇರದೆ ಮಿಂಚುಂಬುಳು ದಿನೇಶಂಗೆ ಮುಳಿವಂತೆ।
ಪುರಹರಂಗಕಟಕಟ ದಕ್ಷಂ ಮುಳಿಯುತ್ತಿಂತೆ॥ ೧೪೦

ಬರುತೆಂದನೆನ್ನನಪಮಾನವಂ ಮಾಡಿದನ।
ನಿರದೆ ಭಂಗಿಸುವೆ ನಾನ್ನೈದೆ ಹೆಱಿಸೂಡಿದನ॥

ಎಂದು ತನ್ನಾಶ್ರಮಕೆ ಗಳಗಳನೆ ನಡೆತಂದು।
ನೊಂದು ನುಡಿದಂ ವಿಶ್ವಕರ್ಮಂಗೆ ನೀನೊಂದು॥
ಯಾಗಮಂಟಪವನೆತ್ತೆಂದು ಪೇಳ್ವನಿತಕ್ಕೆ।
ಬೇಗದಿಂ ನೆಗೆದುದಾಗಳೆ ಭೂಮಿಯುಗಲಕ್ಕೆ॥
ಭೂಮಿಗೆ ವಿಚಿತ್ರವಾದುದು ಮಂಟಪಂ ನೋಡೆ।
ಹೋಮಕುಂಡಂ ಸುಡುವ ಮುಳ್ಳೈಳ್ಳುಗಳ್ಕೂಡೆ॥
ನಡುವೆ ಯೂಪಸ್ತಂಭ ವಿಂಬಿನಿಂ ಮೆರೆವುತಿರೆ।
ಕೊಡದಿಂದೆ ತಮತಮಗೆ ನವಘೃತವ ನಡಕುತಿರೆ॥
ಕರೆಸಿಪಂ ಪೆಣ್ಮಕ್ಕಳಳಿಯಂದಿರಂ ಕೂಡೆ।
ಬರಿಸಿದಂ ಹರಿಯಜಪುರಂದರರುಮಂ ಕೂಡೆ॥
ದಿಗಧೀಶರಂ ತ್ರಿದಶರಂ ದಿವ್ಯ ಮುನಿಗಳಂ।
ಜಗದೊಳುಳ್ಳರಸುಮಕ್ಕಳನೆಸೆವ ಮನುಗಳಂ॥
ದ್ವಿಜಮುಖ್ಯರಂ ಬರಿಸಿ ನಿಜವರ್ಗಮಂ ತರಿಸಿ।
ದ್ವಿಜರಾಜನುಂ ರವಿಯುಮಂ ವಸುಗಳಂ ಬರಿಸಿ॥
ಪುರಹರಂ ಗಿರಿಜೆ ಗಣನಾಯಕರ್ ಹೊರಗಾಗೆ।
ನೆರಪಿದಂ ಪಾತಕಜನವ ನವನಿ ಬೆಱಗಾಗೆ॥
ಹೊಱಗೆ ಕಾಪಿಟ್ಟು ಶಕ್ರಾದಿ ದಿಕ್ಪಾಲರಂ।
ನೆಱೆ ಪೇಳ್ದು ತಾನಲ್ಲಿ ಸಕಲ ಭೂಪಾಲರಂ॥
ಬಂದು ದಕ್ಷಂ ಬ್ರಹ್ಮಸಭೆಗೆ ಕೈಮುಗಿದೆನಗೆ।
ಒಂದು ಯಾಗವನೊಡರ್ಚುವುದಕೆ ನೀವೆನಗೆ॥
ಕರುಣಿಪುದನುಜ್ಞೆಯಂ ಕುಡುವುದೆಂದೆನುತಮಿರೆ।
ವರಮುನಿ ದಧೀಚಿ ನುಡಿದಂ ಸಭೆಯು ನಡುಗುತಿರೆ॥
ಉಸುರಿಲ್ಲದೊಡಲಂತೆ ರವಿಪುಗದ ನಭದಂತೆ।
ಶಶಿಯಿಲ್ಲದಿರುಳಂತೆ ಹವಿಪುಗದ ಮುಖದಂತೆ॥

ಹರನಿಲ್ಲದೊಪ್ಪದೀ ಯಾಗವನುರಾಗದಿಂ।
ಕರೆದು ಬಿಜಯಂಗೆಯ್ಸಿ ತರ್ಪುದತಿವೇಗದಿಂ॥

ಎನೆ ದಕ್ಷನುರಿಯೊಳಗೆ ತುಪ್ಪವಂ ಹೊಯ್ದಂತೆ।
ಮುನಿದು ಭುಗಿಲೆನುತೆ ನುಡಿದವರಂ ಸಭೆಯು ಮುಂತೆ॥ ೧೭೦

ಹರನೀ ಸಭೆಯು ನಡುವೆ ಕುಳ್ಳಿರಲು ಯೋಗ್ಯನೇ।
ಗೊರವನಂ ಪೆಸಗೊಳದಿರಿಲ್ಲಿಗವ ಭಾಗ್ಯನೇ॥

ಸುರರಸ್ತ್ರಮಾಲೆಯಂ ಕೊರಲೊಳಿಟ್ಟರ್ಪನಂ।
ಕರೆವರೇ ಛೀ ಪುಲಿಯ ತೊವಲನುಟ್ಟರ್ಪನಂ॥

ಮರೆದು ಮಗಳಂ ಕೊಟ್ಟೊಡನಿತರಿಂದಾ ಧೂರ್ತ।
ಅರುಹನಪ್ಪನೆ ಪಾಣ್ಬನಿನ್ನೆಮಗೆ ಬೇಡಾತ॥

ನುಡುಗು ಹೋ ಮುನಿಪತಿ ನಿನಗೀವೊಂದು ಮಾತೆಂದು।
ನುಡಿಯಲ್ ದಧೀಚಿಗಂಕುರಿಸೆ ಕೋಪವದಂದು॥

ನಿಟ್ಟೊರಸಿ ಕಳೆಯಲ್ಬಗೆದನವನ ಜನ್ಮಮಂ।
ನೆಟ್ಟ ಹರಗಲ್ಬಗೆದನವನ ಕುಲವೆಲ್ಲಮಂ॥ ೧೮೦

ನೋಡಿದವನಾಗತ ಜ್ಞಾನದಿಂದಂ ನಿಂದು।
ಮಾಡುವವನೊಬ್ಬನುಂಟೆಂದು ಸೈರಿಸಿ ನಿಂದು॥

ಕೇಳೆಲೆವೊ ದಕ್ಷ ನೀನಂಜದೆನ್ನಯ ಮುಂದೆ।
ಫಾಳಾಕ್ಷನಂ ಸ್ವಾಮಿಯಂ ದೇವನಂ ಕುಂದೆ॥

ನುಡಿಯುದಕ್ಕೇನದಕ್ಕೇನೆಲವೊ ಕುಳ್ಳಿರ್ದು।
ಉಡುಕುಳಿಗಳಂ ದಿಟಂ ಗಡ ದೈವವೆಂದಿರ್ದು॥

ಕುನ್ನಿಗಳನೇ ನೆಚ್ಚಿ ಜನ್ಮವಂ ತೊಡಗಿದ್ದೆ।
ಇನ್ನೇನು ಹಸನಾಯ್ತು ಹರಣಮಂ ನೀಗಿದ್ದೆ॥

ಇವನ ನುಡಿಯುಂ ಕೇಳ್ದು ಮರುಮಾತು ಕುಡದರ್ಗೆ।
ಶಿವಭಕ್ತಿಯಾಗದಿರ್ಕೆಂದುಮಿಂತೀ ದ್ವಿಜರ್ಗೆ॥

ಈ ಪಾತಕನ ಮಖಂ ಕಡೆಮುಟ್ಟದಿರ್ಕೆಂದು।
ಶಾಪಮಂ ಕೊಡೆ ಕೇಳ್ದರಿಲ್ಲಿ ಎಮಗೇನೆಂದು॥

ಆಗಳ್ಮಹಾ ಮುನಿ ದಧೀಚಿಯೊಡನೆದ್ದವರು।
ರಾಗದಿಂದಿರುವರುಂ ಶಾಪವರ್ಜಿತರವರು॥

ಉಪಮನ್ಯು ದೇವಲನಗಸ್ತ್ಯ ಗೌತಮರೆಂದು।
ಕುಪಿತದಿಂದಂ ಬರೆ ವಶಿಷ್ಠನುಂ ಭೃಗುವಂದು॥

ನಡೆದಂ ದಧೀಚಿಮುನಿ ತನ್ನಾಶ್ರಮಕ್ಕೆಂದು।
ಮೃಡನರಸಿಗರುಪಲಿತ್ತಂ ನಾರದಂ ಬಂದು॥

ತಂದೆ ಮಾಡುವ ಜನ್ನಮಂ ನೋಡಲೆಂದಗಜೆ।
ಇಂದುಮೌಳಿಗೆ ಬಿನ್ನಪಂ ಮಾಡಲಾ ಗಿರಿಜೆ॥

"ಬೇಡವಂ ಬಗೆವನಲ್ಲಲೆ ಗೌರಿ ಹೋಗದಿರು।
ನಾಡೆ ಮೂರ್ಖಂ ಜರಿವನೆಲೆ ಭಕ್ತೆ ಹೋಗದಿರು॥

ಬೇಡೆಂದು ಬೆಸಸುತಿರೆ" ಕೇಳದೆ ಮಹಾದೇವಿ।
ಕೂಡೆ ಕರೆಸಿದಳಮೃತಕರ ಮುಖಿಯರಂ ದೇವಿ॥

ಕರೆಯಿಸಲ್ ಬಂದರ್ವಿದಗ್ಧೆಯರ್ಮುಗ್ಧೆಯರ್।
ಹರನರಸಿಯೊಡನೈದೆ ಬಂದರತಿ ನೀರೆಯರ್॥

ನೆರೆದುಬಂದರ್ನಲಿದು ಕನ್ನೆಯರ್ ಚೆನ್ನೆಯರ್।
ಹರುಷದಿಂ ಸಲೆ ನಲಿದು ಬಂದರಾ ನೀರೆಯರ್॥

ಕಳಹಂಸಯಾನದಿಂ ನಡೆದುಬಂದರ್ಸತಿಯು।
ರಳಿಕಪಂತಳೆಯರಲ್ಲಿ ರತಿಯ ರೂಪಾನ್ವಿತೆಯು॥

ಪ್ರೀತಿರಹಿತನರಸಿಯೊಡನೈತಂದರೊಪ್ಪದಿಂ।
ಅತಿಶಯದಿ ಮಿಗೆ ಸಿಂಗರಂ ಮಾಡಿ ಬೇಗದಿಂ॥

ಅಸಮಾಕ್ಷನರಸಿ ಚಿತ್ರೈಸೆ ಮಿಗೆ ಹರುಷದಿಂ।
ಒಸೆದು ಬಿಜಯಂಗೆಯ್ವುದೆನೆ ದೇವಿ ರಾಗದಿಂ॥

ನಂದಿಕೇಶ್ವರನ ಬೆನ್ನೊಳು ಸುಖಾಸನವಿತ್ತು।
ಇಂದುಮುಖಿ ಕೆಲಬಲದ ಸತಿಯರ್ಗೆ ಮೊಗವಿತ್ತು॥

ನಡೆವಾಗಳಬಲೆಯರುಘೇ ಚಾಂಗು ಬೊಲ್ಲೆಂದು।
ನಡುವೆ ಸಂದಣಿ ರಂಭೆ ಹೆಜ್ಜೆಸಾರ್ದು ಬಾರೆಂದು॥

ಕೆಲಬಲದಿ ನಡುವೆ ಶಚಿ ಊರ್ವಸಿಗಳೆಂದೆಂಬ।
ಎಲೆಲೆ ಖೇಚರಿ ದೇವಿ ದೇವಿಯವಧಾರೆಂಬ॥ ೨೨೦

ಚಮರವಂ ಸೈತಿಕ್ಕು ಲಕ್ಷ್ಮಿ ಸೈತಿರುಯೆಂಬ।
ಅಮರ್ದು ಶಚಿ ನೀ ನೋಡಿ ಸೀಗುರಿಯನಿಕ್ಕೆಂಬ॥

ಸಸಿನೆತ್ತು ಬೆಳುಗೊಡೆಗಳಂ ಚಂದ್ರವಧುವೆಂಬ।
ಒಸೆದು ಬರುತಿರ್ಪ ಕಿನ್ನರಿಯರಂ ಪಾಡೆಂಬ॥

ಕಳಕಳ ನಿನಾದಂಗಳೊಪ್ಪೆ ಸತಿಯರ ನಡುವೆ।
ಸುಳಿವ ಗಂಧರ್ವ ಲಲನಾಕೋಟಿಗಳ ನಡುವೆ॥

ನಡೆತಂದಳಿಂದುವಿನ ಬೀಡು ಪೊರಮಟ್ಟಂತೆ।
ನಡೆತಂದಳೆಳೆವಳ್ಳಿಬನವೊಲ್ದು ಬರ್ಪಂತೆ॥

ಸಕಲ ದೇವತೆಗಳಧಿದೇವತೆಯು ಬರುತಿರ್ದೆ।
ಳಕಳಂಕ ಚಂದ್ರಧರನರ್ಧಾಂಗಿ ಬರುತಿರ್ದೆ॥ ೨೩೦

ಳಿಂತು ಬರೆವರೆ ಕಾಣಲಾಯ್ತು ದಕ್ಷನ ನಾಡು।
ಮುಂತೆ ಬರೆವರೆ ಮುಂದೆ ನಿಂದುದಾತನ ಬೀಡು॥

ಬಂದು ಪಟ್ಟಣವಂ ವಿಳಾಸದಿಂ ಪುಗುತಿರಲ್।
ಮುಂದೆ ಇದಿರ್ಗೊಂಬರಿಲ್ಲದೆ ನಡೆವುದೇಕೆನಲ್॥

ಒಡನೈದಿಬರ್ಪ ಸಂಗಡದ ಸತಿಯರ್ವೆರಸಿ।
ನಡೆತಂದು ನಂದಿಯಿಂದಿಳಿದು ಪುರಹರನರಸಿ॥

ರಾಹುವಿನ ಮುಂದೆ ಶಶಿಕಳೆ ಬಂದು ನಿಲುವಂತೆ।
ಸಾಹಸದ ದಳ್ಳುರಿಯ ಮುಂದೆ ಲತೆ ನಿಲ್ವಂತೆ॥

ತಂದೆ ದಕ್ಷನ ಮುಂದೆ ರುದ್ರಾಣಿ ನಿಲುತಿರಲ್।
ಮುಂದುಗಾಣದ ಕೋಪಿ ನೋಡದೆ ತಿರುಗುತಿರಲ್॥

ಎತ್ತಲಾ ದೇವಿ ಬಂದತ್ತತ್ತ ತಿರುಗುತಿರೆ।
ಸುತ್ತಿಬರೆ ದಕ್ಷನತಿ ವಿಮುಖನಾಗುತ್ತಮಿರೆ॥

ಮಗಳೆಂಬ ಸಲುಗೆಯಿಂದಂ ಮುಂದೆ ನಿಲುತಮಿರೆ।
ಬಗೆಯದಗಜೆಯನವಂ ಬಯ್ಯೆ ಸಭೆ ಕೇಳುತಿರೆ॥

ಹೇಳಬಾರದು ನರಕಿ ನುಡಿದ ಸುಡುನುಡಿಗಳಂ।
ಭಾಳಾಕ್ಷನಂ ನಿಂದಿಸಿದನೊಲ್ದ ಪರಿಗಳಂ॥

ತನ್ನನೇನೆಂದೊಡಂ ತಾನದಕೆ ಸೈರಿಸಿದ।
ಳನ್ಯಾಯದಿಂ ಶಿವನನೆಂದೊಡೆ ದೇವಿ ಕೋಪಿಸಿದ॥

ಳೊಳಗೊಳಗಳಲ್ದಳ್ಬಳಲ್ದಳ್ಮಹಾದೇವಿ।
ಹಳವಳಿಸಿ ಕಣ್ಗೆಟ್ಟು ಕರಗುತಿರ್ಪಳ್ದೇವಿ॥

ಸುಯ್ಯೊಡನೆ ಕಿಡಿ ಪೊರಮಡುತ್ತಮಿರೆ ಸುಯ್ವುತುಂ।
ಕೆಯ್ಯಂ ಮೊಗದೊಳಿಟ್ಟು ಮಿಗೆತಡೆದು ಸುಯ್ವುತುಂ॥

ಮೆಲ್ಲನೆಚ್ಚತ್ತು ಚಿಂತಿಸಿ ಕುಪಿತೆ ನೋಡಿದಳ್।
ಸಲ್ಲಲಿತೆ ತನ್ನ ಮನದೊಳಗೆ ಮಾತಾಡಿದಳ್॥

ಸ್ಯೆರಿಸೆನೆ ಹರಣದೊಡೆಯನ ನಿಂದೆಗೈದಪನ।
ಧಾರಿಣಿಗಕೀರ್ತಿ ಪಿತೃವಧೆಗಿಂತು ಸಿಲ್ಕಿದೆನೆ॥

ಹರನಿಂದೆಗೈದನಂ ಕೊಲ್ವುದಲ್ಲಾ ಸಾವು।
ದರವರಿಸಲಾಗದಿಂತನುಮಾನವಿಂನೇವು॥

ಎನುತಿರಲ್ಕೋಪ ಉಬ್ಬರಿಸಿ ತನುವಂ ಮೀರೆ।
ವನಿತೆ ಕಣ್ಣಂ ಮುಚ್ಚಿ ನೆನೆದಳಭವನ ನೀರೆ॥

ಒಳಗಣಾತ್ಮಜ್ಯೋತಿಯಿಂದೆ ತನುವಂ ಮುಸುಕೆ।
ಬೆಳಗಾದಳಾ ಸಭೆಯ ಕಣ್ಗೆ ತಮವಂ ಮುಸುಗೆ॥

ಆಗಳಾ ಸಭೆ ಮರುಗಿ ಕೌತುಕಂ ಬಡುತಮಿರೆ।
ಮೇಗರಿವವರ್ಕೆಲರ್ ಪೊಲ್ಲವೆಂದೆನುತಮಿರೆ॥

ಪೊಗಿಡುವಿನಲ್ಲಿ ಬೇಗೆಯುನಿಕ್ಕಿದಂತಾಗೆ।
ಪೂಗಣೆಯನಡಸಿ ದಳ್ಳುರಿ ಮುಸುಕಿದಂತಾಗೆ॥

ಮಲ್ಲಿಗೆಯ ಬಿರಿಮುಗುಳನುರಿ ಕೊಂಡ ತೆರೆನಾಗೆ।
ಅಲ್ಲಲ್ಲಿ ಪುರಜನಂ ಬಿಸುಸುಯ್ದು ಬೆರಗಾಗೆ॥

ಒಡೆವಂದ ಕೆಳದಿಯರ್ಧರೆಯೊಳಸುವಂ ಹೊಸೆದು।
ಮೃಡನರಸಿಯಂ ಕಾಣದಡಿಗಡಿಗೆ ಬಸವಳಿದು॥

ಬಳಿಸಂದವರ್ಕೆಲರ್ ಬಳಲುತಿರ್ಪರ್ ಕೆಲರ್।
ಅಳಲುತಿರ್ಪರ್ಕೆಲರ್ ಕೊರುಗುತಿರ್ಪರ್ಕೆಲರ್॥

ಕೆಲರೇನುವರಿಯದಂತಲ್ಲಿ ಬರೆದಂತೆ ನಿಲೆ।
ಕೆಲರೊಲಿದು ಪರಿಗಳಿಂದೊದರೆ ಕಳವಳಿಸಿ ನಿಲೆ॥

ತನಗೆಂತು ಜೀವಿಸುವ ಪರಿಯೆನುತ್ತಂತಂತು।
ನೆನೆನೆನೆದಳಲ್ದು ಬಿಸುಸುಯ್ಯುತಂತಿರಲಂತು॥

ಇತ್ತಲಂಬಿಕೆ ತನ್ನ ಕೋಪದೊಳ್ತಾನೆ ಸಲೆ।
ಅತ್ತಲಭವಂ ಮನಂ ಮರುಗಿ ದುಗುಡದೊಳು ನಿಲೆ॥

ತಾನೆ ಕೈಲಾಸಸುಖವೆಲ್ಲವಂ ಮರೆದಿರ್ದು।
ಏನುವುಮ್ಮಳಿಸಿ ದುಮ್ಮಾನದಿಂದಿರುತಿರ್ದು॥

ನಂದೀಶನಂ ಕರೆದಿದೇನು ಸೋಜಿಗವಯ್ಯ।
ಇಂದುಮುಖಿ ಬೇಡೆಂದಡೋದ ಫಲದಿಂದಯ್ಯ॥

ಸೊಗಸದೀ ಕಿನ್ನರರ ಗೀತವಿಂದೇಕಯ್ಯ।
ಬಗೆವುಗದು ನೀವಿಲ್ಲಿ ನುಡಿವ ಮಾತೇಕಯ್ಯ॥

ಅನಿಮಿತ್ತವಿಂತಿದೇಕಾಗುತಿರ್ದಪುದಯ್ಯ।
ವನಿತೆ ಬೇಡೆನೆ ಹೋದಳೇನಪ್ಪುದೆಂತಯ್ಯ॥

ಎನುತಿರಲ್ ನಂದಿಕೇಶ್ವರನಲ್ಲಿ ಬರುತಿರ್ದು।
ನನುಸುಯ್ಯನೆಂದಿನಂತಲ್ಲದೈತರುತಿರ್ದು॥

ನೆಳಲ್ವ ಕಿವಿ ಬಱಿಮೊಗಂ ಬಳಲ್ದ ತನು ದುಮ್ಮಾನ।
ವಳಲ್ವ ಮನದುತ್ಸವಂ ಕಳಲ್ದಂಗದಿಂ ಧ್ಯಾನ॥

ವೀಶನಂ ಮುಟ್ಟಿ ನೆನಹವೆ ಜೀವವಾಗಿ ಬರೆ।
ಭಾಸುರ ವಿಳಾಸವೆಲ್ಲವನೊಕ್ಕು ತಾನೆ ಬರೆ॥

ದೇವಿ ಯಿಲ್ಲಾರುಮಿಲ್ಲೇನಯ್ಯಿದೇನೆನಲ್।
ದೇವ ಬಿನ್ನಪವೆಂದೊಡಘವನಾಲಿಸುತಿರಲ್॥

ತಂದೆಯೆಂದಗಜೆ ದಕ್ಷನ ಮುಂದೆ ಪೋಗಿ ನಿಲೆ।
ನಿಂದಿಸಿದನೀಶ ನಿಮ್ಮಂ ದಕ್ಷನಲ್ಲಿ ಸಲೆ॥

ಕೇಳಲಾಱದೆ ತನಗೆ ತಾನೆ ಕೋಪಿಸಿದಳೆಂಬ।
ಭಾಳಲೋಚನ ನಿಮ್ಮ ನಿಜಕೆ ಸಂದಳುಮೆಂಬ॥

ನುಡಿಯೊಡನೆ ಮಸಗಿ ಘುಡುಘುಡಿಸುತಿರ್ದುದು ಕೋಪ।
ವೆಡೆಗೊಂಡುದಿಂಧುರನೊಳಗೆಯಾದನುತಾಪ॥

ವಾಗಳಾ ನಂದೀಶನಂ ಪತ್ತಿದುದು ಪಮಾನ।
ವಾಗಳ್ಗಣಂಗಳಿಗೆ ಮುತ್ತಿದುದು ದುಮ್ಮಾನ॥

ವಲ್ಲಿ ಭಿತ್ತಿಯ ಚಿತ್ರ ಕಳೆಗುಂದಿ ತಾನಿರ್ದು।
ವಲ್ಲಿ ಪುತ್ತಳಿಗಳೆಲ್ಲಂ ಸೊಂಪುಗೆಟ್ಟಿರ್ದು॥

ವಲ್ಲಿಯೋದುವ ಶುಕಾಳಿ ಮೂಗುವಟ್ಟಿರ್ದು।
ವಲ್ಲಿ ಸಲಹಿದ ಹಂಸಮಾಲೆ ನಡೆಗೆಟ್ಟಿರ್ದು॥

ವಲ್ಲಿ ಬೆಳಸಿದ ಲತಾವಳಿ ತಾನು ಕೊರಗುತಿರೆ।
ಅಲ್ಲಿಯೋವಿದ ಜನಂ ಜವ್ವನಂಗೆಡುತಮಿರೆ॥

ಭೋಗಂಗಳೊಂದೆಸೆಗೆ ಭಾಗಂಗಳೊರ್ದೆಸೆಗೆ।
ರಾಗಂಗಳೊರ್ದೆಸೆಗೆ ಯಾಗಮವದೊಂದೆಸೆಗೆ॥

ಸಂಪದವದೊರ್ದೆಸೆಗೆ ಭೂವನಿತೆಯೊರ್ದೆಸೆಗೆ।
ಸೊಂಪುಗಳದೊಂದೆಸೆಗೆ ಲಾವಣ್ಯವೊಂದೆಸೆಗೆ॥

ತಮತಮಗೆ ಸುಯ್ಯುತಂ ಮರುಗಿ ಮೊರೆಯಿಡುತಿರಲು।
ಶಿವನಂತರಂಗದಿಂ ಕೋಪವಡರುತ್ತಿರಲು॥

ನಂದೀಶನಱಿದು ಭಯದಿಂದೆ ಹಿಮ್ಮೆಟ್ಟುತಿರೆ।
ನಿಂದ ಗಣಸಂಕುಳಂ ಹೆಱಸಾರ್ದು ನಡುಗುತಿರೆ॥

ಕುಪಿತನಾದಂ ದೇವನಿನ್ನಾರೊ ಜೀವಿಪರು।
ವಿಪರೀತವೇನಪ್ಪುದಿದನಾರೊ ಭಾವಿಪರು॥

ಮುಳಿದೊಡೆ ಮಹಾಪ್ರಳಯವೊಬ್ಬರುಳಿವವರಿಲ್ಲ।
ತಿಳಿವೊಡರಿದುಗ್ರನಿರ್ದಿರವ ತಾನೇ ಬಲ್ಲ॥

ನೆನುತೆಲ್ಲರಂಜಿ ಕಣ್ಮುಚ್ಚೆ ಪರಮೇಶ್ವರಂ।
ನೆನೆಯಲರಿದೆನಿಪ ರೂಪಿನೊಳಿರ್ದನೀಶ್ವರಂ॥

ಇರೆ ದೇಹದೊಳು ಸುತ್ತಿ ಹೊತ್ತಿ ಹೊಗೆದುದು ಕೋಪ।
ಉರವಣಿಸುತೊಳಗೊಳಗೆ ಕುಂಭಿಕ್ಕಿದನ-ತಾಪ॥

ವಡಸಿ ನೆಗೆದುದು ಭಾಳಲೋಚನದ ಕೆಲದಿಂದೆ।
ಘುಡುಘುಡಿಸಿತದು ಮಸಗಿತದು ಬೆಮರನೆವದಿಂದೆ॥

ಕೋಪವೆಲ್ಲಂ ನೆರೆದು ಬಂದೊಂದೆಡೆಗೆ ಬಂದು।
ರೂಪಾಗಲನುಗೆಯ್ಯಲದರ ಮಧ್ಯದೊಳೊಂದು॥

ನೋಡಬಾರದ ಥಳಥಳಿಪ್ಪ ತೇಜೋಮೂರ್ತಿ।
ಕೂಡೆ ಪುಟ್ಟಿತ್ತಿ ದುರ್ದದಭವನಘಟನ ಮೂರ್ತಿ॥

ಭುಗಿಭುಗಿಲ್ ಛಿಟಛಿಟಲ್ ಬುಭುರ್ಗಿಲ್ ಭುಗಿಲೆಂಬ।
ಭುಗಿಛಿಟಲ್ ಭುಗಿಛಿಟಲ್ ಛಿಚ್ಛಿಟಲ್ ಭುಗಿಲೆಂಬ॥

ಧಗಿಲೆಂಬ ನುಡಿಗೆ ಧರಣೀತಳಂ ಬಿರಿಯುತಿರೆ।
ಭುಗಿಲೆಂಬ ರಭಸಕಂಬರತಳಂ ಸೆಡೆಯುತಿರೆ॥

ಹರಿಬೊಮ್ಮರಿರ್ದ ಬಿರಿಯೆ ಕುಲನಗಂಗಳ್ ಕುಸಿಯೆ।
ಪರಸಮಯಿಗಳ್ ಜರಿಯೆ ಜಲಧಿ ಕುಕ್ಕುಳಿಕ್ಕುದಿಯೆ॥

ರವಿರಥಂ ದೆಸೆಗೆಡಲ್ ಗಣಪತಿಗುಹರ್ ಬೆದರೆ।
ಭುವನಂ ಕಿವುಡುವಡಲ್ ಗಣಸಮಿತಿಗಳ್ ಕೆದರೆ॥

ಗಗನದೊಳ್ ಬರಸಿಡಿಲ್ ಮೂರ್ತಿಗೊಂಡೊಗೆವಂತೆ।
ಮಿಗೆ ಭಾಳಲೋಚನಂ ರೂಪುಗೊಂಡೊಗೆವಂತೆ॥

ಕಾಳಕೂಟದ ನಗದೊಳೊಗೆದ ಕೇಸರಿಯಂತೆ।
ಕಾಲಾಗ್ನಿಯಿಂದೆ ದಳ್ಳುರಿ ಭುಗಿಲನೊಗೆವಂತೆ॥

ಬೆಳಗು ಮೂಲೋಕದೊಳ್ ತೊಳತೊಳಗೆ ಕಡುಪಿಂದೆ।
ಘಳಿಲನೊಗೆದಂ ವೀರಭದ್ರಂ ನಿಟಲತಟದಿಂದೆ॥

ಏಕಜಡೆ ಲಿಂಗಂ ಶಿರೋಮಾಲೆಗಳ್ತೊಳಗೆ।
ಭೀಕರವೆನಿಪ್ಪ ಕೆಂಗಣ್ ಮಿಾಸೆಗಳ್ಬೆಳಗೆ॥

ಕುಂಡಲಂ ಕೋರೆದಾಡೆಗಳೊಪ್ಪಿ ತೋರುತಿರೆ।
ಚಂಡಾಂಶು ವೀರಫಳಕಂ ತೊಡರ್ವೆರೆವುತಿರೆ॥

ನಿಂದಂ ರಜತಗಿರಿಗೆ ಕೈಕಾಲ್ಗಳೊಗೆದಂತೆ।
ಮಂದರಂ ಮಸಗೆ ಕೋಪದಿ ರೂಪುಗೊಂಡಂತೆ॥ ೩೫೦

ನೋಡಿರೇ ಭಾಳನ ಮನಂ ಹೆತ್ತ ಶಿಶುವಿಂಗೆ।
ಮಾಡಿದರ್ ಜಾತಕರ್ಮವನಾಗಳಾತಂಗೆ॥

ನಾಮಕರಣಂ ವೀರಭದ್ರನೆಂಬುದು ತನಗೆ।
ನೇಮಿಸಿತು ಬಾಯ್ವೆಣ್ಣೆ ಬ್ರಹ್ಮಾಂಡವದು ತನಗೆ॥

ತೊಟ್ಟಿಲುಂ ತುಂಬಿದಾಕಾಶವಾದುದು ನೋಡ।
ಕಟ್ಟಿದ ಗುಣಂ ಪ್ರತಾಪ ಯಶಸ್ಸುಗಳ್ನೋಡ॥

ತೂಗುವ ಪ್ರಳಯ ಕೋಲಾಹಲ ಗಣಾಧಿಪರ್।
ಜೋಗುಳಂ ಪಾಡುವರ್ ಬೀರಸಿರಿ ಮಾರಿಯರ್॥

ಬಾಲಾಭರಣವೆ ಬೊಬ್ಬಿಡುವ ತಲೆಗಳ ಮಾಲೆ।
ಬಾಲತ್ವದಾಟವದು ಮಖವನುರುಪುವ ಲೀಲೆ॥ ೩೬೦.

ಎಂದೊಡವನೆಂತು ಪೊಗಳ್ದಪೆನಿನ್ನು ವೀರಮಂ।
ಇಂದು ಮೌಳಿಯ ಸಕಲ ಸಾಮರ್ಥ್ಯಸಾರಮಂ॥

ನೋಡನೋಡಲ್ ಬಳೆದನೆಲೆಲೆ ಬ್ರಹ್ಮಾಂಡಮಂ।
ಕೂಡೆ ಬಳೆದಂ ಬಳೆದ ನಮಮ ಬ್ರಹ್ಮಾಂಡಮಂ॥

ಮಿಾರಿ ನೋಡಿದರೆ ಮತ್ತಾ ಪರಿಗಳಂ ಕಳೆದ।
ನೂರುಮಡಿ ಮಿಗೆ ಶಂಭು ತಲೆದೂಗುತಿರೆ ಬಳೆದ॥

ಉಳ್ಳ ಕೋಪಂ ವೀರಭದ್ರನಂ ನೆಲೆಗೊಂಡು।
ಉಳ್ಳಿತುಳಿದುದು ಶಾಂತಿ ಶಂಕರನ ನೆಡೆಗೊಂಡು॥

ತನಗೆ ಸಿಸು ದಕ್ಷಯಾಗಕ್ಕೆ ಪುಟ್ಟಿದ ಮಾರಿ।
ತನಗೆ ಚಿಣ್ಣಂಕಾಲನೆಂಬವಗೆ ಉರಿಮಾರಿ॥

ಇಂತೆಸೆವ ತೀವ್ರದ ಮಹಾವೀರನಂ ಕಂಡು।
ಚಿಂತಿಸಿದನೀಶ್ವರಂ ತನ್ನೊಳ್ ಭಯಂಗೊಂಡು॥

ಏಕೆ ಕೋಪಿಸಿದೆ ನಿವನೇಕೆ ಹುಟ್ಟಿದನೆಂದು।
ಲೋಕೇಶ್ವರಂ ನಾಡೆ ಕೌತುಕವುನಾಳ್ದಂದು॥

ತಲೆದೂಗಿ ವೀರಭದ್ರನ ವದನವುಂ ನೋಡಿ।
ನಲಿದು ಮನದೊಳಗೆ ತೂಪಿರಿದನೊಲವಿಂ ಕೂಡಿ॥

ಕರೆದು ಬೆಸಸಿದನಭವನಾ ವೀರಭದ್ರಂಗೆ।
ಪರಸಮಯಸಂತಾನ ತಿಮಿರಮಾರ್ತಾಂಡಂಗೆ॥

ಕುರಿದಕ್ಷನಂ ಪಿಡಿದು ಜನ್ನಮಂ ಸುಟ್ಟುರುಪಿ।
ತರಿದಿಕ್ಕು ಮಾರಾಂತರಂ ಕಾಲನೋಳ್ನೆರಪಿ॥

ಎಂದು ಬೆಸಸಲ್ ಭದ್ರಕಾಳಿಯೊಡನೈತರಲ್।
ಅಂದು ಕೋಟಾಕೋಟಿ ರೋಮಜರ್‌ನಡೆತರಲ್॥

ಉರದಬಾಯವರಲ್ಲಿ ಕರದಕಣ್ಣವರಲ್ಲಿ।
ಶಿರದಕಾಲವರಲ್ಲಿ ಚರಣಮುಖದವರಲ್ಲಿ॥

ಬೆನ್ನಬಾಯರ್ಕೆಲರ್ ಕುಡಿದಾಡೆಯರ್ಕೆಲರ್।
ಕೆನ್ನೆಯುಗುರ್ಗಳ್‌ಕೆಲರ್ ಕಡುನಿಡಿಯವರ್ಕೆಲರ್॥

ಗಗನದೊಳ್ನಡೆಯುತಂ ಕಡಲಂ ಕುಲುಂಕುತಂ।
ದಿಗಿಭವಂ ಕೆಡಪುತಂ ಪೊಡವಿಯಂ ಹಿಳಿಯುತಂ॥

ರವಿರಥವನೆಡಹುತಂ ರಾತ್ರಿಪನನರೆಪುತಂ।
ಪವನನಮಂ ಪಿಡಿಯುತಂ ಭಗಣಮನೊಡರ್ಚುತಂ॥

ಪೊರಮಟ್ಟುದಲ್ಲಿ ವಸುಮತಿಯೆ ಬೆಸಲಾದಂತೆ।
ಪೊರಮಟ್ಟುದುಗ್ರಗಣತತಿ ಗಗನ ಬಿದ್ದಂತೆ॥

ದುಂದುಭಿಗಳಲ್ಲಲ್ಲಿ ಬೆಳ್ಗೊಡೆಗಳೆತ್ತಿ ಬರೆ।
ಸಂದಣಿಸಿ ಕೈದುಗಳ್ ಬೆಳಗ ನುಗುಳುತ್ತಮಿರೆ॥

ಈಬಂದನೆಲೆಲೆ ಭಾಳೇಕ್ಷಣನ ಸುತನೆಂಬ।
ಈಬಂದನಪ್ರತಿಮನತುಳಬಲನೆಂದೆಂಬ॥

ಹಿರುದನಿಯು ಕಹಳಾರವಂ ದೆಸೆಗೆ ಪರಿಯುತಿರೆ।
ತುರುಗಿದನಲಧ್ವಜಂ ಗಗನದೊಳ್ ಕುಣಿವುತಿರೆ॥

ಮುಸಗಿ ಕಾಳಾನಲನ ಹೊರಬೀಡ ಬಿಟ್ಟಂತೆ।
ಮುಸುಥೆಗುಬ್ಬುಸದ ನಂಜಿನಬನಂ ನಡೆವಂತೆ॥

ಅಚ್ಚರಿಯ ವೀರಭದ್ರನ ಬೀಡು ನಡೆಯುತಿರೆ।
ಮುಚ್ಚರಿಪ ದಕ್ಷಪುರವಲ್ಲಿ ನಸುದೋರುತಿರೆ॥

ಕಂಡು ಕೈವೀಸಿದಂ ವೀರಭದ್ರಂ ಹಾದಿ।
ಗೊಂಡು ಹರಿದುದು ಬೊಬ್ಬಿಡುತೆ ಸಕಲ ಭೂತಾದಿ॥

ಗಣನಿಕರವೈದಿ ಕೋಂಟೆಯನಾಕ್ಷಣಂ ಮುತ್ತೆ।
ಸೆಣಸಿ ಬಿಡದಾಯ್ದುಮುಲದುರಿಯ ಹಳವಿಗೆ ಎತ್ತೆ॥

ಬೊಬ್ಬಿಡಲು ಯಾಗಮಂಟಪವದಿರ್ದು ಸಭೆ ಕೆದರೆ।
ಬೆಬ್ಬಳಿಸಿ ದಕ್ಷನಬ್ಬರ ಮಿದೇನೆನುತೊದರೆ॥

ಹೋಗಿಂದ್ರ ಹೋಗಗ್ನಿ ಹೋಗಿ ದಿಕ್ಪಾಲರಿರ।
ಹೋಗು ಮುರಹರ ನೂಂಕಿ ನಡೆಯಿ ಭೂಪಾಲರಿರ॥

ಎಂದು ಚತುರಂಗ ಬಲಮಂ ಪೇಳ್ದನಾ ದಕ್ಷ।
ನೆಂದು ಘುಡುಘುಡಿಸಿ ಬರುತಿರ್ದುದು ಸರೋಜಾಕ್ಷ॥

ನಾದಿಯಾಗಿರ್ದಮರರೊಂದೆಸೆಯೊಳೊಡ್ಡಿದರ್।
ವಾದದಿಂ ದಿಕ್ಪಾಲರೊಂದೆಸೆಯೊಳೊಡ್ಡಿದರ್॥

ತೊಡಗಿತ್ತು ಚೂಣಿಕಾಳಗವಲ್ಲಿ ತನತನಗೆ।
ನಡೆದು ನೂಂಕಿತ್ತು ಮೂದಲಿಸುತಂ ತನತನಗೆ॥

ಬೆರಸಿ ಮಿರಿತ್ತು ಶಿವದ್ರೋಹಿ ದಕ್ಷನ ಬಲಂ।
ಹರಿಯಜದಿಶಾಧಿಪರ್ ನೂಂಕಿತಾಗಳೆ ನೆಲಂ॥

ಕವಿದಿಕ್ಕಿದಂತಾಗೆ ವೀರಭಂದ್ರಂ ಬಂದು।
ಸಲಿಸುವೆಂ ಇವರಸುವ ಬಾಳಬಾಯ್ಗುಟ್ಟುಕೆಂದು॥

ಬಱಸಿಡಿಲಬಳಗಂತಿರ್ದ ಗಣತತಿ ಸಹಿತ।
ಎರಗಿದಂ ಭೂಮಿತಳವದಿರ್ದು ಬಿರಿಯಲ್ಕಹಿತ॥

ಬಲವರಿಯಲ್ಕೈತಂದು ದಿಕ್ಕರಿಗಳಂ ಸೀಳ್ದು।
ಬಳಸಿ ದುವ್ವಾಳಿಸುವ ತುರಗಕುಲವಂ ಪೋಳ್ದು

ನೆರೆದ ರಥನಿಕರಮಂ ನುಚ್ಚುನೂರಂ ಮಾಡಿ।
ಪರಿವಾ ಪದಾತಿಗಳ ನರಿದು ಸಣ್ಣಂ ಮಾಡಿ॥

ಸಂಗರ ಧರೆಯೊಳಮಮ ಹೊಕ್ಕೊಕ್ಕಲಿಕ್ಕುತಿರೆ।
ಸಂಗಡಿಸಿ ನಾರದಮುನಿಯು ಲೀಲೆ ಪೆರ್ಚುತಿರೆ॥

ರಣದೊಳಗೆ ಮಾರಿಗೆ ಯರೋಚಕಮುದಾಗುತಿರೆ।
ತಣಿಯುಂಡ ಕಾಲಂಗೆ ಕೊಕ್ಕರಿಕೆ ಪುಟ್ಟುತಿರೆ॥

ಇಂತಿಂತು ವೀರಭದ್ರಂ ತವಿಸುತಿರಲಂದು।
ಮುಂತೆ ಹೊಯ್ಯಲ್ಗಡುತ್ತಂ ಒಬ್ಬನೈತಂದು॥

ಎಲೆ ದಕ್ಷ ನೀನೇಕೆ ಜನ್ನವೇಕೆಲೆ ಪಾಪಿ।
ನಿಲಲರಿದು ಕೇಳೆಲವೊ ಮುಂದುಗಾಣದ ಕೋಪಿ॥

ದೇವಿಯೂಳಿಗವಿಂದುಧರನ ಕಿವಿದಾಗಿತ್ತು।
ದೇವನಣುಗಂ ಬಂದನಮರಾಳಿ ತಿರುಗಿತ್ತು॥

ಇಂದಿರಂ ಸರಿದನಜನುಂ ಮೈಗರೆದನಂತಲ್ಲಿ।
ನೊಂದು ಹರಿ ಹರಿಣನಾಗಿಯೆ ಬೀಳ್ದನಂತಲ್ಲಿ॥

ಹಿಡಿವಡೆದವರ್ಕೆಲರ್ ಪುತ್ತೇರಿದರ್ಕೆಲರ್।
ಮಡಿವರಥಟರ್ಕೆಲರ್ಬೆತ್ತಲಿದ್ದರ್ಕೆಲರ್॥

ಹುಲ್ಗಚ್ಚಿದರ್ಕೆಲರ್ಬಾಯ್ವೆರಲವರ್ಕೆಲರ್॥ ೪೪೦
ಪಲ್ಗಿರಿವವರ್ಕೆಲರ್ನೀರೊಕ್ಕವರ್ಕೆಲರ್॥

ಬಂದುದಭವನ ದಾಳಿ ಕೊಂದುದೇಳಿಂ ನಿಲ್ಲಿ।
ಬೆಂದು ಹೋದುದು ನಿನ್ನ ಯಾಗವೆನುತಂತಲ್ಲಿ॥

ಎನುತಿರಲ್ ಪುರದ ಬಾಗಿಲ್ವಾಡಮಂ ಸುಡುತೆ।
ತನತನಗೆ ಕೇರಿಕೇರಿಯೊಳ್ಪೈದೆ ಕಿಚ್ಚಿಡುತೆ॥

ನೆರೆ ಬೀದಿವರಿವುತಂ ಒದೆದೆತ್ತಿ ಕೆಡುವುತಂ।
ಮರೆಯೊಗಲ್ಕಾಯ್ವುತಂ ಮಲೆತರಂ ಸೀಳುತಂ॥

ಕಿತ್ತು ಬರಸೆಳೆಯುತಂ ತಲೆಚಂಡನಾಡುತಂ।
ನೆತ್ತರಂ ಸೂಸುತಂ ಮುಲಿದು ತಲೆಯೊತ್ತುತಂ॥ ೪೫೦

ಉರಿದರಿಯುತಂ ಬಂದು ವೀರಭದ್ರಂ ಕಂಡು।
ಘರುಷಮಂ ಪುಟ್ಟಿಸುತೆ ಪಿರಿಯುಗಣವೈತಂದು॥

ಮುತ್ತಿದರ್ಪಾತಕಂ ಸವೆದ ಮುಖಸಾಲೆಯಂ।
ಸುತ್ತಿದರದೇನೆಂಬೆನವರೊಂದು ಲೀಲೆಯಂ॥

ಮಂಟಪವನೆತ್ತುವರ್ ದ್ವಿಜಸಭೆಯನೇಳಿಪರ್।
ಕಂಟಣಿಸ ದತ್ತುವರ್ ಗಜಬಜಂ ಮಾಡುವರ್॥

ಕಂಭಮಂ ತರಿಯುತಂ ಕದಂಗಳಂ ಮುರಿವುತಂ।
ಇಂಬಿನಿಂ ಕುಣಿಯುತಂ ಮಿಗೆ ಪುಟಂ ನೆಗೆವುತಂ॥

ಕೊಂಡದೊಳಗುಲಿಯುತಂ ನಿಂದಿರುಗಿ ನೋಡುತಂ।
ಕೆಂಡವಂ ಕೆದರುತಂ ಮುಂದೆ ಜರಿದಾಡುತಂ॥

ತೊನೆದು ಕೈಸರೆಗುಟ್ಟಿ ತೋಳೆತ್ತಿ ಪಾಡುತಂ।
ಮುನಿಗಳಂ ಹುರಿಗುಟ್ಟಿಹೊತ್ತುಗಳ ನಟ್ಟುತಂ॥

ಎಳ್ಳರಾಸಿಗಳನೆಲ್ಲರ ಮೇಲೆ ಚೆಲ್ಲುತಂ।
ಮುಳ್ಳೆಲ್ಲವಂ ಸುರರ ಮೋಱೆಯೊಳಗೆಳೆವುತಂ॥

ಇಂತು ಮುಂಗುಡಿಯ ಭೂತಂ ಮುಸಗುತಿರಲಂದು।
ಪಿಂತೈದಿ ಕಲಿ ವೀರಭದ್ರಂ ಮುಳಿದು ಬಂದು॥

ಉರಿಯ ನಾಲಗೆಗಳಂ ಕಿಳ್ತಿತ್ತಿ ಬಿಸುಡುತಂ।
ತಿರಿಗಿ ಪೂಷನ ಹಲ್ಗಳುದಿರೆ ಮುಳಿದೊದೆವುತಂ॥

ವಾಣಿಯಂ ಮೂಗರಿದು ಮಿಗೆ ಮುಂದುಗೆಡಿಸುತಂ।
ಮಾಣದಲ್ಲಿದಿರಾಂತರಂ ನಿಂದು ತವಿಸುತಂ॥

ಬರೆ ಕಂಡು ಸುರಸಮಿತಿ ಮರುಗಿ ಮುಮ್ಮಳಿಗೊಂಡು।
ನೆರೆದು ಗಗನದೊಳೆಲ್ಲರುಂ ವಿಸ್ಮಯಂಗೊಂಡು॥

ಏಕೆ ತೊಡಗಿದನಿವಂ ಜನ್ನಮಂ ಮರುಳಾಗಿ।
ಏಕೆ ಬಂದಳ್ಗಿರಿಜೆ ದಕ್ಷಂಗೆ ಹಗೆಯಾಗಿ॥

ಬೆಟ್ಟೇರಿ ಮೃತ್ಯುವಂ ಕರೆದುಕೊಂಡಂ ಪಾಪಿ।
ಇಟ್ಟಣಿಸಿದುದು ತನಗೆ ಸಾವು ಕೆಟ್ಟಂ ಪಾಪಿ॥

ಮುನ್ನವೆ ದಧೀಚಿ ಮುನಿ ಮುನಿದು ಶಾಪಂಗೊಟ್ಟ।
ಇನ್ನೇನೊ ಅಕಟಕಟ ಪಾಪಿ ದಕ್ಷಂ ಕೆಟ್ಟ॥

ಎನುತಮರರಳುತಲಿರೆ ಘುಡುಘುಡಿಸುತಂ ಮಸಗಿ।
ಮುನಿದು ಬಂದುರವಣಿಸಿ ಸಿಡಿಲೆರಗುವಂತೆರಗಿ॥

ಕೆಡೆಕೆಡೆ ಶಿವದ್ರೋಹಿ ಎನುತೆ ತಲೆಯಂ ಹೊಡೆದು।
ಉಡುಗುಡುಗು ಗರ್ವವನೆನುತ್ತೆ ತಲೆಯಂ ಕಡಿದು॥

ಒದೆದು ತಂದಾ ತಲೆಯನುರಿವ ಕೆಂಡದೊಳಿಕ್ಕಿ।
ಇದ ತಳೆದುಕೊಳ್ಳಾಹುತಿಯನಗ್ನಿ ಎನುತಿಕ್ಕಿ॥

ನುಡಿಯುತಂ ಹಿಡಿಹಿಡಿ ಸುರಾವಳಿಯನೆನುತಮಿರೆ।
ಮೃಡನಿತ್ತ ಬೆಸನಲ್ಲಿ ಮನಕೆ ತೋಱಿತ್ತಮಿರೆ॥

ನಡುನಡುಗಿ ಕೆಡೆದಿರ್ದ ಕುಱಿಯ ತಲೆಯಂ ತಂದು।
ಒಡಲ ಮೇಲಿಟ್ಟು ಜೀವಂಗೊಟ್ಟು ಕಲಿ ನಿಂದು॥

ದಕ್ಷನಂ ಹಿಡಿದು ಕೋಡಗಕಟ್ಟಿ ಕುಟ್ಟುತಂ।
ತ್ರ್ಯಕ್ಷನಣುಗಂ ಸುರರನವನೊಡನೆ ಕಟ್ಟುತಂ॥

ತಿರುಗಿ ಬಂದಂ ಭೂತಗಣವಲ್ಲಿ ಕುಣಿದಾಡೆ।
ಹರಭಕ್ತರೆಲ್ಲರುಂ ಹರುಷದಿಂ ತೂಗಾಡೆ॥

ಬರುತಿರಲ್ಮುಂದೆ ರಣರಂಗ ರಣರಣಕದೊಳ್।
ಮರುಳಪಡೆ ಎದ್ದುದೇನೆಂಬೆ ನೊಂದಣಕದೊಳ್॥

ಮೂಳೆಗಳ ತುಪ್ಪವಂ ತಲೆಯೋಡಿನೊಳು ಹೊಯ್ದು।
ಕಾಳಿಜದ ಖಂಡಮಂ ಮೆಲ್ಲಿತಪ್ಪವನಾಯ್ದು॥

ಮಿದುಳ ತೆಗೆತೆಗೆದು ರಾಶಿಗೂಳಂ ಹೊಯ್ದು।
ಮುದದಿಂದೆ ತಮತಮಗೆ ಮರುಳ್ಗಳೆಲ್ಲಂ ನೆರೆದು॥

ಬೊಟ್ಟಿಟ್ಟು ನೆತ್ತರಂ ಕರುಳಮಾಲೆಯನಿಕ್ಕಿ।
ಅಟ್ಟೆಗಳನೇರಿಕೊಂಡಲ್ಲಲ್ಲಿ ಮೆಯ್ಯಿಕ್ಕಿ॥

ಮಾಮಾರಿ ಮಾಂಕಾಳಿಗಳ್ತ್ರಿಯಿಂ ಪೊಡಮಟ್ಟು।
ಕಾಮಾಕ್ಷಿ ಚಾಮುಂಡಿಗಳ್ತ್ರಿಯಿಂ ಪೊಡಮಟ್ಟು॥

ಮೂಳೆದುಪ್ಪವನೆತ್ತಿ ತವಕದಿಂ ಕುಡಿಕುಡಿದು।
ಕಾಳೆಜದ ಖಂಡಮಂ ಸವಿಸವಿದು ಚಪ್ಪರಿದು॥

ತೇಗಿ ಬಾಳ್ಗಿಮ್ಮಯ್ಯ ವೀರಭದ್ರನೆ ಎನುತೆ।
ಕೂಗಾಡಿ ಪರಮಾಯು ವೀರಭದ್ರಂಗೆನುತೆ॥

ಹೊದ್ದಿ ಕುಳ್ಳಿರ್ದು ಮಿಗೆ ಸವಿಸವಿದು ನಿಗುರುತಂ।
ಓತಣವನಿಂದು ಎಮಗಿತ್ತ ಶೂಲಿಯ ಸುತಂ॥

ಎಂದು ಕುಣಿದಾಡುತಂ ಮರುಳ ಪಡೆ ಹರಸುತಿರೆ।
ನಿಂದದಂ ನೋಡಿ ವೀರಭದ್ರಂ ಹರಸುತಿರೆ॥

ದಕ್ಷಮುಖವಿಪಿನಕುಲದಾವಪಾವಕನೆಂಬ।
ದಕ್ಷಮುಖಜೀಮೂತಕುಳ ಮಹಾಬಲನೆಂಬ॥

ಬಿರುದೆತ್ತಿ ಕರೆವ ಕಹಳೆಗಳ ಘನಧ್ವನಿಯೊಳಗ।
ನಡೆತಂದನಪ್ರತಿಮ ವೀರಭದ್ರಂ ಮುಂದೆ॥

ಗುಡಿಗಟ್ಟಿತಲ್ಲಿ ಕೈಲಾಸದೊಳ್ ನಲವಿಂದೆ।
ಇದಿರ್ವಂದು ಹರನ ಗಣನಾಥರ್ಕಳಿದಿರ್ಗೊಂಡು॥

ಒಡಗೂಡಿ ಕೈಲಾಸದೊಳಗೆ ಬರುತಿರಲಂದು।
ಕಡು ಸೀರೆಯರ್ನೆರೆದು ಕರುಮಾಡದೊಳ್ನಿಂದು॥

ನೋಡಿ ನಲವಿಂ ವೀರಭದ್ರಂಗೆ ಕೈಮುಗಿದು।
ಕೂಡೆ ಗಣಸಂತತಿಗೆ ಎರಗಿ ಹರುಷದೊಳಂದು॥

ಹಿಂದೆ ಬರ್ಪವನಾವವಂ ದಕ್ಷನೆಂಬವನ।
ಇಂದುಧರನಂ ದೇವಿಯುಂ ನಿಂದೆಗೈದವನ॥

ತಲೆಯೊಂದುಪರಿ ದೇಹವೊಂದುಪರಿಯುವನವ್ವ।
ಚಲವೇಕೆ ತಾನೇಕೆ ಲಜ್ಜೆಯಿಲ್ಲದನವ್ವ॥

ಬೇಕುಬೇಕೀ ಮುಖಕೆ ದೇವನಂ ನಿಂದಿಪುದು।
ಬೇಕುಬೇಕೀ ಮುಖಕೆ ಯಾಗವಂ ಮಾಡಿಪುದು॥

ನಡೆತಪ್ಪುರಮರರೇತಕೆ ಖಳನೊಳೊಡನಾಟ।
ಒಡನಾಡಿಯುರಸಿಂತು ಮಾಡಿತ್ತುವನ ಕೂಟ॥

ಎಂದು ಪುರನಾರಿಯರ್ ಕೈಹೊಯ್ದು ನಗುತವಿರೆ।
ನಿಂದು ನೆಲೆನೆಲೆಗಳೊಳ್ ನೋಟಮಂ ಬೀರುತಿರೆ॥

ನಡೆತಂದು ಗಿರಿಜೇಶನರಮನೆಯು ನೊಳಪೊಕ್ಕು।
ಬಿಡದೆ ವೈವೆಚ್ಚುತಲಿ ನಲ್ಲವಿಂ ಮನಂಮಿಗ್ಕು॥

ವೀರಭದ್ರಂ ಬಂದು ದೂರದಿಂ ಪಶುಪತಿಗೆ।
ಮಾರಮದ ಮಥನಂಗೆ ಕಾರುಣ್ಯವಾರಿಧಿಗೆ॥

ನೆನೆವರ ನಿಧಾನಕ್ಕೆ ಭಕ್ತಜನ ಸುರತರುಗೆ।
ಮುನಿಜನಧ್ಯಾನಗಮ್ಯಂಗೆ ಜಗದ್ಗುರುವಿಂಗೆ॥

ಶರಣಜನಜನಕಂಗೆ ಶರಣಾಬ್ಧಿಚಂದ್ರಂಗೆ।
ಪರಮಾತ್ಮರೂಪಂಗೆ ಪಂಚೇಷುನಾಶಂಗೆ॥

ದುಷ್ಟಜನ ಶಿಕ್ಷಂಗೆ ಶಿಷ್ಟಜನ ರಕ್ಷಂಗೆ।
ಸೃಷ್ಟಿಸ್ಥಿತಿಪ್ರಳಯ ಹೃಷ್ಟಂಗನಷ್ಟಂಗೆ॥

ವೇದಾರ್ಥರೂಪಂಗೆ ವಾದಕ್ಕತರ್ಕಂಗೆ।
ವೇದಾಂಗವೇದ್ಯಂಗೆ ನಾದಪ್ರಮೋದಂಗೆ॥

ಮೆಯ್ಯಿಕ್ಕಿ ನಿಂದಾ ವಿರೂಪಾಕ್ಷಲಿಂಗಂಗೆ।
ಕೈಯೆತ್ತಿ ಪೊಡಮಟ್ಟನೆಮ್ಮ ಶಿವಲಿಂಗಂಗೆ॥

ಇದೆ ದೇವ ಬಿನ್ನಪಂ ಖಳದಕ್ಷಸಂತಾನ।
ವಿದೆ ದೇವ ಬಿನ್ನಪಂ ದೋಷಿ ಸುರಸಂತಾನ॥

ವಿದೆ ಚಕ್ರವಿದೆ ಕುಲಿಶವಿದೆ ಕಾಲದಂಡವಿದೆ।
ಇದೆ ಬೊಮ್ಮನಸ್ತ್ರವಿದೆ ಸಕಲ ಋಷಿವೃಂದವಿದೆ॥

ಇಂತೆಂದು ವೀರಭದ್ರಂ ಬಿನ್ನವಿಸಲಂದು।
ಮುಂತೆ ಮೈಯಿಕ್ಕಿ ಕೈಮುಗಿದು ದಕ್ಷಂ ನಿಂದು॥

ದೇವ ಸರ್ವಾಪರಾಧಿಯನೆನ್ನ ರಕ್ಷಿಪುದು।
ದೇವ ಮುಂದರಿಯದಜ್ಞಂಗೆನಗೆ ಕರುಣಿಪುದು॥

ಶಿಶು ತಪ್ಪ ಮಾಡಿದರೆ ಕೊಂದರೊಳರೇ ದೇವ।
ಪಶು ತಪ್ಪ ಮಾಡಿದರೆ ಕೊಂದರೊಳರೇ ದೇವ॥

ಶಿಶುವಾನೆ ಪಶುವಾನೆ ತಂದೆ ಪಶುಪತಿ ನೀನೆ।
ಶಶಿಧರನೆ ವಿಷಧರನೆ ದಯದಿಮಾಕ್ಷಿಸು ನೀನೆ॥

ಕರುಣಿಪುದನಾಥಂಗೆ ಕರುಣಿಪುದು ಭೀತಂಗೆ।
ಕರುಣಿಸುವುದೆಲೆ ದೇವ ಗರ್ವದಿಂ ಬೆಂದಂಗೆ॥

ಎಂದು ದಕ್ಷಂ ಕೃಪಾಭಾವದಿಂದೊರಲುತಿರೆ।
ಇಂದುಧರನಭಯವಿತ್ತಂ ಸುರರ್ಪೊಗಳುತಿರೆ॥

ಶತಯಜ್ಞದೊಂದು ಫಲಮುಂ ವೀರಭದ್ರನಿಂ।
ಹತನಾದ ದಕ್ಷಂಗೆ ಕೊಡಿಸಿದಂ ರುದ್ರನಿಂ॥

ಏನೆಂಬೆನುಬ್ಬಟೆಯ ಕರುಣೆ ಸುರರಂ ನೋಡಿ।
ತಾನೆಂದನಂತವರ್ಗಭಯಕರವಂ ನೀಡಿ॥

ಎನ್ನವರ್ಗಳಿಲ್ಲದಲ್ಲಿಗೆ ಪೋಗದಿರಿ ಎಂದು।
ಎನ್ನವರನರಿದಡ್ಡವೊಗವಾಗದಿರಿ ಎಂದು॥

ಮರೆದು ಡಂಭಕರೆಂಬರಂ ಬೆರಸದಿರಿರೆಂದು।
ಮರಹಿಲ್ಲದೆನ್ನನಾಗಳ್ನೆನೆಯುತಿರಿ ಎಂದು॥

ಅಂದಮರ ಸಂತತಿಗೆ ಕಾರುಣ್ಯವಂ ಮಾಡಿ।
ಮುಂದಿರ್ದ ವೀರಭದ್ರುನನಳ್ಕರಿಂ ನೋಡಿ॥ ೪೨೦

ತೆಗೆದು ತಳ್ಕೈಸುತಂ ಬಾಯತಂಬುಲವಿತ್ತು।
ಸೊಗಯಿಪ ಕುಮಾರಂಗೆ ಬೀಳುಡೆಯ ನೊಲಿದಿತ್ತು॥

ಕೊಂಡಾಡಿ ವೀರಭದ್ರುನನೆಲ್ಲರುಂ ನೋಡೆ।
ಮುಂಡಾಡಿದಂ ಭಕ್ತತತಿ ಹರುಷದೋಳ್ಕೂಡೆ॥

ದಕ್ಷಾದಿಸುರರನಂತವರವರ ಲೋಕಕ್ಕೆ।
ಆ ಕ್ಷಣಂ ತಾನೆ ಕಳುಹಿದನವರ ಲೋಕಕ್ಕೆ॥

ಮಂದಿರದೊಳೆಸೆವ ಗಣನಾಯಕರೊಳೊಪ್ಪಿದಂ।
ಇಂದುಧರನತುಳ ಬಳನಪ್ರತಿಮನೊಪ್ಪಿದಂ॥

ಅತನುಹರನನಿಮಿತ್ತ ಬಂಧುವಿಂತೊಪ್ಪಿದಂ।
ಅತಿದಾನಿಯತಿ ಕರುಣಿ ಯತಿಶಯದೊಳೊಪ್ಪಿದಂ॥ ೪೩೦

ಹಂಪೆಯ ವಿರೂಪಾಕ್ಷನನವರತಲೊಪ್ಪಿದಂ।
ಸೊಂಪಿನಿಂದನವರತ ಶಿವಶಂಭುವೊಪ್ಪಿದಂ॥

ಕಂದ||

ನಂದೀಶಾದಿ ಗಣೇಶರೊ|
ಳಂದಧಟಿಂ ಮೆರೆದ ವೀರಭದ್ರನ ಶಿಶುವಾ||

ನೆಂದು ಕೃಪೆಯಿಾವುತಿರ್ಕೆನ|
ಗೆಂದು ಶಶಿಮೌಲಿ ಹಂಪೆಯ ವಿರೂಪಾಕ್ಷಂ||

||ಶ್ರೀ ವೀರಭದ್ರ ದೇವರ ರಗಳೆ ಸಮಾಪ್ತಂ||

||ದಕ್ಷಾಧ್ವರ ರಗಳೆ ಸಮಾಪ್ತಂ||

ವೀರೇಶ ಚರಿತೆ ಕಥಾಸಾರ

ಪೀಠಿಕೆ

ಪರಶಿವನ ಸಭೆಯಲ್ಲಿ ಮನ್ನಣೆಯನ್ನು ಪಡೆಯದೆ, ದಕ್ಷಬ್ರಹ್ಮನು ಮಿಗಿಲಾದ ಕೋಪದಿಂದ, ಹರವಿರಹಿತವಾದ ಯಾಗವನ್ನು ಮಾಡಲು ಘುಡುಘುಡಿಸುತ್ತ ಬರಲು ಶಿವಭಕ್ತನಾದ ದಧೀಚಿಮುನಿಯು ದೇವತೆಗಳನ್ನೂ ಮನುಮುನಿಗಳನ್ನೂ ಶಾಪಿಸಿದನು.

ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯ, ಚಂದ್ರ ಮೊದಲಾದ ದೇವಪ್ರಮುಖರಿಂದ ನಮಸ್ಕರಿಸಿಕೊಳ್ಳಲ್ಪಡುವ ಸಂಪದ್ಯುಕ್ತವಾದ ಪಾದಗಳುಳ್ಳವನೂ, ಅಕ್ಷಯ, ಅದ್ವಯ ಅನುಪಮ ಮೊದಲಾದ ಮಹಿಮೆಗಳಿಂದ ಅತಿಶಯ ರೂಪನೂ ಆದ ಶಿವನು, ಸತೀವಿಯೋಗ ನಿಮಿತ್ತವಾಗಿ ತನಗುಂಟಾದ ಕೋಪಾಟೋಪದಿಂದ ದಕ್ಷಯಾಗವನ್ನು ನಾಶಮಾಡುವ ಸಲುವಾಗಿ ವೀರೇಶ್ವರನನ್ನು ಸೃಷ್ಟಿಸಿದನು. ಅಂತಹ ಮಹಿಮಾಶಾಲಿಯಾದ ಪಂಪಾಕ್ಷೇತ್ರಾಧಿಪತಿ ಶ್ರೀ ಗುರು ವಿರೂಪಾಕ್ಷನು ನಮಗೆ ಪ್ರಿಯತಮವಾದ ಶಿವಭಕ್ತಿ ಭಾಗ್ಯವನ್ನು ಅನುಗ್ರಹಿಸಲಿ. ೧

ತಲೆಯ ನೀಳವಾದ ಜಡೆಗಳ ಪೊದರಿನಲ್ಲಿ ಸಿಕ್ಕಿದ ಚಂದ್ರನ ಶರೀರದಿಂದ ಧಾರಾಪ್ರವಾಹವಾಗಿ ಸುರಿಯುತ್ತಿದ್ದ ಅಮೃತವನ್ನು ಹೀರಿ, ತೃಪ್ತಿಪಟ್ಟು ಘುಡುಘುಡಿಸುವ ಕೋಪದ ಪ್ರತಾಪವನ್ನು ಕಡಿಮೆಮಾಡಿಕೊಂಡು, ಯಾವುದು ಶಾಂತಿಯ ಮಡುವೆನಿಸಿ ಕೃಪಾಮಯವಾದ ದೃಷ್ಟಿಯ ಪ್ರಕಾಶದಿಂದ ಶೋಭಿಸುತ್ತಿರುವುದೋ, ಅಂತಹ ಹಣೆಗಣ್ಣಿನಿಂದ ಪರಿಶೋಭಿಸುವ ನಗೆಮೊಗದೊಡೆಯನಾದ ಶ್ರೀಗುರು ಹಂಪೆಯ ವಿರೂಪಾಕ್ಷನು ಸದಾ ನಮ್ಮನ್ನು ರಕ್ಷಿಸಲಿ. ೨

ಅಕ್ಷಯ, ಅಕ್ಷರ, ಉಕ್ಷಧ್ವಜ ಎಂಬ ಮೊದಲಾದ ಹೆಸರುಗಳಿಂದ ನಾಶರಹಿತನಾದವನು ಎಂಬ ಮಹಿಮೆಯಿಂದ ಕೂಡಿದ, ತ್ರಿನೇತ್ರನೂ,

ವೃಷಭಧ್ವಜನೂ, ಶರಣರನ್ನು ಕಾಪಾಡತಕ್ಕವನೂ, ಕಾಲಕೂಟ ವಿಷವನ್ನು ಪಾನಮಾಡಿದವನೂ, ಪಾಪಿಗಳಿಗೆ ಭಯಂಕರನೂ, ಮರೆಹೊಕ್ಕವರನ್ನು ಕಾಪಾಡತಕ್ಕವನೂ, ಭಕ್ತರಿಗೆ ಮೋಕ್ಷವನ್ನೀಯತಕ್ಕವನೂ ದಕ್ಷಯಾಗವನ್ನು ನಾಶಮಾಡಿದವನೂ, ತನ್ನ ಹೊಟ್ಟೆಯಲ್ಲಿ ಸಮಸ್ತ ಲೋಕಗಳನ್ನು ಅಡಗಿಸಿಕೊಂಡಿರುವವನೂ, ಅಪಾರವಾದ ಪರಾಕ್ರಮಕ್ಕೆ ಆಶ್ರಯಸ್ಥಾನವಾದವನೂ ಆದ ಶ್ರೀ ವೀರೇಶ್ವರನು ನಮ್ಮನ್ನು ಸದಾ ರಕ್ಷಿಸಲಿ. ೩

ಪರಿಣಾಮದ ಕಣಿ, ಶಾಂತಿಯ ನಿಧಿ, ಭಕ್ತಿಯ ಸಾಗರ, ಏಕೋನಿಷ್ಠೆಯ ಹರ, ಅತಿಸಾಮರ್ಥ್ಯದ ತರು, ನೀತಿಯ ಕಡಲು, ದಯಾಗಾರ, ಪುಣ್ಯದ ಪುಂಜ, ಸತ್ಯದ ಸದನ, ಹರುಷದ ಮಡು, ಸರ್ವಜ್ಞತ್ವದ ಶಾಸನ, ಸುಸ್ಥಿರದಾಸ್ಥಲಯುಕ್ತ ಎಂಬ ಘನತರವಾದ ಕೀರ್ತಿಯಿಂದ ಲೋಕವಿಖ್ಯಾತನಾಗಿರುವ ಹಂಪೆಯ ಹರಿಹರದೇವನ ಕಾರುಣ್ಯದ ಸುಪ್ರಭೆಯು ನಮ್ಮ ಮನೋಮಂದಿರದಲ್ಲಿ ಸದಾ ಬೆಳಗುತ್ತಿರಲಿ. ೪

ವಿಚಾರ ಮಾಡಲು ಎಲ್ಲಕ್ಕೂ ಬಲವಾದುದು ಶಿವನ ಅಷ್ಟಾಂಗ; ಅದಕ್ಕೂ ಬಲ ರುದ್ರ; ರುದ್ರನಿಗೂ ಬಲವಾದುದು ಅವನ ಹಣೆಗಣ್ಣು; ಆ ಹಣೆಗಣ್ಣಿಗಿಂತಲೂ ಬಲವಾದವನು ವೀರೇಶ್ವರನು. ಅಂತಹ ಮಹಾನುಭಾವನಾದ ವೀರಭದ್ರನ ಪರಾಕ್ರಮವನ್ನು ಬಣ್ಣಿಸಲು ಆದಿಶೇಷನಿಗೆ ಸಾಧ್ಯವೇ ? ಅವನ ಪರಾಕ್ರಮವನ್ನು ಲೆಕ್ಕಿಸಲು ಸೂರ್ಯನಿಗೆ ಸಾಧ್ಯವೇ? ಅವನ ಮಾಹಾತ್ಮ್ಯವನ್ನು ವಿಮರ್ಶಿಸಲು ದೇವೇಂದ್ರನಿಗೆ ಸಾಧ್ಯವೇ! ಅಂದ ಮೇಲೆ ನಮ್ಮಂತಹ ಸಾಮಾನ್ಯರಿಂದ ಶ್ರೀ ವೀರಭದ್ರನ ಮಹಿಮಾಯುಕ್ತವಾದ ಚರಿತ್ರೆಯನ್ನು ಬರೆಯಲು ಸಾಧ್ಯವೇ ? ಆದರೂ, ಪುಣ್ಯಾತ್ಮರಾದ ಶಿವಭಕ್ತರ ಕೃಪಾಪ್ರಭಾವದಿಂದ ನಾನು ಆ ವೀರಭದ್ರನನ್ನು ಹೊಗಳಲು ಪ್ರಯತ್ನಿಸಿರುವೆನು. ೫

ಈ ಕಾವ್ಯದಲ್ಲಿರುವ ಬಗೆಬಗೆಯ ರಸ ಮತ್ತು ಭಾವಾರ್ಥಗಳು, ಉತ್ತಮವಾದ ಶೈಲಿ, ಸಂಧಿ, ಸಮಾಸ, ವಿಭಕ್ತಿ, ಅಲಂಕಾರ, ಯತಿ, ಧಾತು, ಕ್ರಿಯೆ, ಕಾರಕ, ಪ್ರಕೃತಿ, ಪ್ರತ್ಯಯ ಮೊದಲಾದ ವಾಕ್ಯರಣ

ಮತ್ತು ಅಲಂಕಾರ ಶಾಸ್ತ್ರ ವಿಚಾರಗಳು ಮೊದಲಾದುವುಗಳಲ್ಲಿ ಏನಾದರೂ ಮನುಷ್ಯ ಸ್ವಭಾವದಿಂದ ತಪ್ಪುಮಾಡಿದ್ದರೆ, ನಿಮ್ಮವನೆಂಬ ಕಾರಣದಿಂದ ಅಂತಹ ತಪ್ಪುಗಳನ್ನು ಮನ್ನಿಸಿ, ಪರರು ಅಣಕಿಸಲು ಅವಕಾಶವಿಲ್ಲದಂತೆ ಮಾಡಿ ಆನಂದ ಚಿತ್ತರಾದ ಲೋಕದ ಶಿವಭಕ್ತರು ನನ್ನ ಮೇಲೆಕರುಣಿಸಿ ಈ ಕಾವ್ಯವನ್ನು ತಿದ್ದಿ ಸರಿಪಡಿಸಲಿ. ೬

ಬಹಳವಾಗಿ ಅಹಂಕರಿಸಿ ಲೋಕಬಾಧಕನೆನಿಸಿದ ಹಿರಣ್ಯಕಶ್ಯಪುವಿನ ಬೆನ್ನನ್ನು ಬಗೆದು, ಅದರಿಂದ ಸೋರುವ ಬಿಸಿರಕ್ತವನ್ನು ಕುಡಿದು, ಅದರಿಂದುಂಟಾದ ಪ್ರಮತ್ತತೆ ಮತ್ತು ಮರುಳಾಟಗಳ ದೆಸೆಯಿಂದ ಲೋಕಗಳನ್ನು ಪುಡಿಪುಡಿಮಾಡುತ್ತಿದ್ದ ನರಸಿಂಹನ ಹಣೆಯಲಿಪಿಯನ್ನು, ದೇವತೆಗಳ ಪ್ರಾರ್ಥನಾನುಸಾರ ಶರಭಾವತಾರವನ್ನು ಧರಿಸಿ ತೊಡೆದು ಹಾಕಿದ ವೀರೇಶನ ಮಹಿಮಾಯುಕ್ತವಾದ ಚರಿತ್ರೆಯನ್ನು ಹೇಳುತ್ತೇನೆ. ನಿರ್ಮಲ ಚಿತ್ತರೂ ಅಪ್ರತಿಮ ಶಿವಭಕ್ತರೂ ಆದ ಸಜ್ಜನರು ಈ ಕಥೆಯನ್ನು ಕೇಳಲಿ. ೭

ಈ ಕಾವ್ಯದ ಹೆಸರು 'ವಿರೇಶ್ವರ ಚರಿತೆ.' ಈ ಕಾವ್ಯದ ಅಧಿಪತಿ ಓರುಂಗಲ್ಲಿನ ವೀರಭದ್ರಸ್ವಾಮಿ. ಈ ಗ್ರಂಥಕ್ಕೆ ಸಾಹಾಯಕರಾದವರು ಲೋಕದ ಸದ್ಭಕ್ತರು. ಈ ಕಾವ್ಯವನ್ನು ಸಂತೋಷದಿಂದ ಹೇಳಿದವನು ಯತಿಪತಿಯಾದ ಹಂಪೆಯ ಹರಿಹರದೇವರ ಕಾರುಣ್ಯದ ಸುತನೂ ಶಿವಕವಿಗಳ ಭೃತ್ಯನೂ ಆದ ಹಂಪೆಯ ರಾಘವಾಂಕ ಪಂಡಿತನು. ಅಂದಮೇಲೆ ಈ ಪ್ರಪಂಚದಲ್ಲಿ ಈ ಕಾವ್ಯವನ್ನು ಮೆಚ್ಚದ, ಅಪ್ಪಿಕೊಳ್ಳದ ಸತ್ಪುರುಷರಾರು.? ೮

ಪ್ರಪಂಚದಲ್ಲಿ ಪೂಜ್ಯರಾದ ಶಿವಭಕ್ತರಿಗೂ, ಭಗವಂತನಾದ ಶಿವನಿಗೂ ಸಮರ್ಪಿಸಿದ ಬುದ್ಧಿಯಲ್ಲಿ ಮರೆತಾದರೂ, ಅಜ, ಹರಿ, ಸುರಪತಿ, ಗಿರಪತಿ, ಮೊದಲಾದ ಸಾಮಾನ್ಯ ದೇವತೆಗಳನ್ನೂ, ರಾಜರೇ ಮೊದಲಾದ ಭವಿಗಳನ್ನೂ, ಸ್ತೋತ್ರಮಾಡಿದೆನಾದರೆ ನಾನು ಶಿವದ್ರೋಹಿಯಾಗುವೆನು; ಎಂಬ ವಿಖ್ಯಾತವಾದ ಬಿರುದಿನಿಂದ ಪ್ರಸಿದ್ಧನಾದ ಶಿವಕವಿ ಹಂಪೆಯ ರಾಘವಾಂಕ ಪಂಡಿತನು ಈ ಮೀಸಲುಗವಿತೆ (ವೀರೇಶಚರಿತೆ) ಯನ್ನು ಬರೆದಿದ್ದಾನೆ. ಆದ್ದರಿಂದ ನಿರ್ಮಲಚಿತ್ತರಾದ ಸತ್ಪುರುಷರು ಈ ಪವಿತ್ರವಾದ ಕಾವ್ಯವನ್ನು ಮನವಿಟ್ಟು ಕೇಳಿರಿ. ೯

——:o:——

ಕಥಾ ಪ್ರಾರಂಭ

——:o:——

(ಸಂಧಿ—೧)

ಈ ಕಾವ್ಯಕ್ಕೆ ಮೊದಲಾವುದೆಂದರೆ—ಪ್ರಚಂಡವಾದ ತೆರೆಗಳಿಂದಲೂ, ಓಡಾಡುವ ನೀರಾನೆಗಳು, ಮೊಸಳೆ, ಮೀನು ಮೊದಲಾದ ಜಲಜಂತು ಗಳಿಂದಲೂ, ತುಂಬಿರುವ, ಜಲಚರಪ್ರಾಣಿಗಳ ಬಾಲಗಳ ಬಡಿಯೋಣದ ರಿಂದುಂಟಾಗುವ ನೀರಿನ ಹನಿಗಳು ರತ್ನಗಳಂತೆ ಕಂಗೊಳಿಸುತ್ತ, ಶ್ವೇತದ್ವೀಪ ವನ್ನು ಅಣಕಿಸುವುವೋ ಎಂಬಂತಿರುವ ವಿಸ್ತಾರವಾದ ಸಾಗರವು ಒಪ್ಪುತ್ತಿದೆ. ಅಂತಹ ಸಮುದ್ರದಿಂದ ಸುತ್ತುವರಿದಿರುವ ಭೂಭಾಗವು ಶೋಭಿಸುತ್ತಿದೆ. ಆ ಭೂಮಿಯ ಶಿರೋಮಣಿಯಂತೆ ಮೇರುಪರ್ವತವು ಕಂಗೊಳಿಸುತ್ತಿದೆ. ವಿಖ್ಯಾತವಾದ ಆ ಮೇರುವಿನ ಉತ್ತರಭಾಗವನ್ನು ನಾನು ಏನೆಂದು ಬಣ್ಣಿಸಲಿ? ೧೦

ಆ ಮೇರುವಿನ ಉತ್ತರಭಾಗದಲ್ಲಿ ಪ್ರಸಿದ್ಧವಾಗಿರುವ, ಶಿವನ ವಾಸಸ್ಥಾನವೆನಿಸಿದ, ದೇವತೆಗಳಿಗೆ ಸಂತೋಷವನ್ನುಂಟುಮಾಡುವ, ಮಾಯಾಸಂಬಂಧವಾದ ಗುಣಗಳನ್ನು ಪರಿಹರಿಸುವ ಲೋಕದ ಸಮಸ್ತ ಪರ್ವತಗಳನ್ನೂ ಧಿಃಕರಿಸುತ್ತಿರುವ ಕೈಲಾಸವು, ಚಂದ್ರಬಿಂಬಗಳ ರಾಶಿಯೋ? ಘಟ್ಟಿಗೊಂಡ ಬೆಳುದಿಂಗಳೋ? ಪರಮೇಶ್ವರನ ಕೀರ್ತಿಲತೆಯ ಫಲವೋ? ಲೋಕಾವಳಿಯ ಕಂಗಳಿಗೆ ಮಂಗಳದ ಒಬ್ಬುಳಿಯೋ? ಭಕ್ತರ ಭಾಗ್ಯದ ಹೆಬ್ಬೆಳೆಯ ಹೊಸ ರಾಶಿಯೋ? ಲೋಕದ ಪುಣ್ಯದ ಸಂತೆಯೋ? ಎಂಬಂತೆ ವೈಭವದಿಂದ ಮೆರೆಯುತ್ತಿದೆ. ೧೧

ಜನನಮರಣಾತೀತವಾದ ಆ ಕೈಲಾಸದಲ್ಲಿ ಶಂಕರನ ಅರಮನೆಯು ಆಕಾಶವನ್ನು ಬಗೆದು, ಎಲ್ಲ ಲೋಕಂಗಳ ನೆತ್ತಿಯಮೇಲೆ ಮೆಟ್ಟಿ ನಿಂತ ಗಿರಿರಾಜನ ಕಿರೀಟವೋ ಎಂಬಂತೆ, ಅಸಂಖ್ಯಾತವಾದ ಸೂರ್ಯ ಬಿಂಬಗಳ

ಬೆಳಗಿನಿಂದ ಅದ್ಭುತವಾಗಿ ಶೋಭಿಸುತ್ತಿದೆ. ಆ ಶಿವನ ಅರಮನೆಯ ಓಲಗ ಶಾಲೆಯು ಸುವರ್ಣ, ನವಮಣಿ, ಸ್ಪರ್ಶಮಣಿ, ಚಂದ್ರಕಾಂತಶಿಲೆ, ಚಿಂತಾರತ್ನ ಇವುಗಳಿಂದೊಡಗೂಡಿದ ಗೋಡೆ ಮತ್ತು ನೆಲಗಟ್ಟುಗಳಿಂದ ಶೋಭಿಸುತ್ತಿದೆ. ಅದನ್ನು ನಾನು ಎಷ್ಟೆಂದು ಬಣ್ಣಿಸಲಿ? ೧೨

ಸಕಲ ಚರಾಚರ ಜನ್ಮಸ್ಥಳನೂ, ಮಂಗಳದರ್ಪಣದಂತೆ ಶೋಭಿಸ ತಕ್ಕವನೂ ಆದ ಶಿವನು, ಆತನ ಓಲಗಶಾಲೆಯಲ್ಲಿ ವಿರಾಜಮಾನವಾದ ನವಮಣಿಗಣಮಯವಾದ ಸಿಂಹಾಸನದಲ್ಲಿ ಸಮಸ್ತ ದೇವತೆಗಳ ಸ್ತೋತ್ರ ಗಳನ್ನು ಸ್ವೀಕರಿಸುತ್ತ, ಭಕ್ತರ ಅಭೀಷ್ಟಗಳನ್ನು ನೀಡುತ್ತ, ಜಂಗಮಕಲ್ಪ ದ್ರುಮವೆಂಬಂತೆ ಪರಿಶೋಭಿಸುತ್ತಿದ್ದನು. ೧೩

ಆ ಪ್ರಸಂಗದಲ್ಲಿ ಶಿವನ ಹಣೆಗಣ್ಣಿನ ಉರಿಬಿಸಿಲಿನಿಂದ ಬಳಲುತ್ತಿರುವ ತಲೆಯಲ್ಲಿರುವ ಚಂದ್ರನಿಗೆ ಅಮೃತವನ್ನು ಉಣಬಡಿಸುವಂತೆ ಚಾಮರಗಳು ವಿಜೃಂಭಿಸುತ್ತಿರಲು, ತಲೆಯನ್ನು ಅಲಂಕರಿಸುವ ಹಾವುಗಳಿಗೆ ಆಹಾರ ವನ್ನು ಕೊಡುತ್ತಿರುವರೋ ಎಂಬಂತೆ ಸ್ತ್ರೀಯರು ಬೀಸಣಿಕೆಗಳಿಂದ ಗಾಳಿ ಯನ್ನು ಬೀಸುತ್ತಿರಲು, ನಾನಾ ದೇವಪ್ರಮುಖರ ತೊಡಿಗೆಗಳಿಂದ ಅಲಂಕೃತ ವಾದ ತಲೆಗಳು ನಾಚುವುದಕ್ಕಾಗಿಯೋ ಎಂಬಂತೆ ಸುಂದರಿಯರಿಂದ ಹಿಡಿದೆತ್ತಿದ ಕನ್ನಡಿಗಳು ಶೋಭಿಸುತ್ತಿರಲು, ವನದೇವತೆಯರಿಂದ ಉಪಚರಿ ಸಲ್ಪಡುತ್ತಿರುವ ವಸಂತನೋ ಎಂಬಂತೆ ಪರಶಿವನು ಆ ತನ್ನ ಸಿಂಹಾಸನ ದಲ್ಲಿ ಶೋಭಿಸುತ್ತಿರುವನು. ೧೪

ಎಡ ಬಲ ಭಾಗಗಳಲ್ಲಿ ಕೈಮುಗಿದು ನಿಂತಿರುವ ವಿಷ್ಣು ಬ್ರಹ್ಮರಿಂದಲೂ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಪದವಿಗಳನ್ನು ಅನು ಭವಿಸುತ್ತಿರುವ ಗಣಂಗಳಿಂದಲೂ, ಶಿವನ ಕಡೆಗಣ್ಣಿನ ಕಿಂಕರರೆನಿಸಿರುವ ಲಕ್ಷ್ಮೀಸರಸ್ವತಿಯರಿಂದಲೂ, ಸಾಲುಸಾಲಾಗಿ ನಿಂತಿರುವ ದಿಕ್ಪತಿಗಳೇ ಮೊದಲಾದ ದೇವತೆಗಳಿಂದಲೂ, ಮನುಮುನಿಗಳ ವೃಂದದಿಂದಲೂ ಆ ಶಿವ ಸಭೆಯು ಪರಿಶೋಭಿಸುತ್ತಿದ್ದಿತು. ೧೫

ಅಂತಹ ದಿವ್ಯಸಭೆಯಲ್ಲಿ ಮಂಗಳಮಯನೂ, ಜಿತದೂಷಣ, ಅತಿಭೀಷಣ, ಅಘಶೋಷಣ, ಅಹಿಭೂಷಣ ಎಂಬ ಕೀರ್ತಿವೆತ್ತನೂ ಆದ

ಪರಶಿವನು, ಸಮ್ಮುಖದಲ್ಲಿ ಸಭೆಯಲ್ಲಿ ಓಡಾಡುತ್ತಿದ್ದ ಶಿವಗಣಂಗಳ ಕಿರೀಟಗಳ ಕಾಂತಿಯಿಂದಲೂ, ಅವರು ಝಳಪಿಸುವ ಖಡ್ಗಗಳಿಂದುಂಟಾಗುವ ಪ್ರಕಾಶದಿಂದಲೂ, ಚಂದ್ರಕಾಂತಶಿಲೆಯ ಒಡವೆಗಳಿಂದ ಅಲಂಕೃತರಾದ ದೇವಸ್ತ್ರೀಯರ ದೇಹಸಂಪತ್ತಿನ ಪ್ರಕಾಶದಿಂದಲೂ ಶೋಭಾಯಮಾನನೆನಿಸಿದ್ದನು. ೧೩

ಅತ್ತ, ಸಪ್ತಸಮುದ್ರಗಳಿಂದ ಆವರಿಸಲ್ಪಟ್ಟಿರುವ ಭೂ ಭಾ ಗ ದ ಲ್ಲಿ ಪ್ರಸಿದ್ಧನಾಗಿರುವ, ಎಲ್ಲ ರಾಜಾಧಿರಾಜರುಗಳನ್ನು ಜಯಿಸುವ ಪರಾಕ್ರಮದಿಂದ ಕೂಡಿರುವ, ನಾನಾ ದೇವತೆಗಳಿಂದ ಕೂಡ ಜಯಸೇಸೆಯನ್ನು ಪಡೆದಿರುವ, ಪರಾಕ್ರಮಶಾಲಿಯಾದ ದಕ್ಷಪಿತಾಮಹನು ಮೂಲೋಕದಲ್ಲಿ ಪ್ರಸಿದ್ಧನಾಗಿರುವನು. ೧೭

ಇತ್ತ, ಅಖಿಲಕ್ಕೆ ಆಧಾರನೂ, ಭವಕ್ಕೆ ದೂರನೂ, ಮಹಿಮೆಗೆ ಆಗರನೂ, ನಿಜಸುಖದ ಸಾರನೂ ಆದ ಪರಶಿವನು, ಆ ತನ್ನ ದಿವ್ಯಸಭೆಯಲ್ಲಿ ಸರಸ್ವತಿಯ ವೀಣೆಯನ್ನೂ, ತುಂಬುರನಾರದರ ಬಿನ್ನಹವನ್ನೂ, ನಂದಿ ಮಹಾಕಾಳರ ತಾಳಗತಿಯನ್ನೂ, ಭೃಂಗೀಶನ ನರ್ತನವನ್ನೂ, ರಂಭೆಯ ಕೇಳಿಕೆಯನ್ನೂ ಬ್ರಹ್ಮನ ವೇದಘೋಷವನ್ನೂ, ಚಂಡೇಶನ ಹೊಗಳಿಕೆಯನ್ನೂ ಲಾಲಿಸುತ್ತ ಆನಂದದಿಂದ ಮೆರೆದಿರುತ್ತಿರುವನು. ೧೮

ಆ ಸಮಯದಲ್ಲಿ, ಬ್ರಹ್ಮ, ವಿಷ್ಣು, ಚಂದ್ರ, ಸೂರ್ಯ ಮೊದಲಾದ ಎಲ್ಲ ದೇವತೆಗಳ ಲೋಕಗಳನ್ನೂ ಹೊಕ್ಕು, ಅವರುಗಳಿಂದ ಅಪಾರವಾದ ಸನ್ಮಾನವನ್ನೂ, ವಂದನೆಯನ್ನೂ, ಉಪಚಾರವನ್ನೂ, ಉ ಡು ಗೊ ರೆಯನ್ನೂ, ಗೌರವವನ್ನೂ ಕೈಗೊಂಡು, ಅತಿಶಯವಾದ ಸ್ವಾಭಿಮಾನದಿಂದ ಇನ್ನು ಮುಂದೆ ಕೈಲಾಸಪತಿಯಾದ ಪರಮೇಶ್ವರನಿಂದ ವಿಗಿಲಾದ ಸೇವೆಯನ್ನು ಕೈಗೊಳ್ಳಲು ಬಯಸಿ ಬಂದ ದಕ್ಷಬ್ರಹ್ಮನು ಅಹಂಕಾರದಿಂದ ಆ ಶಿವನ ಸಭೆಯನ್ನು ಪ್ರವೇಶಿಸಿದನು. ೧೯

ವಿಷ್ಣುವೇ ಮೊದಲಾದ ಸಮಸ್ತ ದೇವತೆಗಳಿಂದ ನಮಿಸಿಕೊಳ್ಳ ತಕ್ಕವನೂ, ಸಮಸ್ತವೇದಾಗಮಗಳ ಸ್ತೋತ್ರಕ್ಕೆ ಪಾತ್ರನೂ, ಮನು

ಮುನಿಗಳ ಮನೋನೇತ್ರಗೋಚರನೂ ಆದ ಪರಶಿವನನ್ನು ಲೆಕ್ಕಿಸದೆ, ತನ್ನ ಅಳಿಯನೆಂಬ ನಿಮಿತ್ತ ಅವನಿಂದ ವಂದನೆಯನ್ನು ಕೈಗೊಳ್ಳಲಿಚ್ಛಿಸಿ, ಗರ್ವಿಷ್ಠನಾಗಿ ಆ ದಕ್ಷಬ್ರಹ್ಮನು ಕೆಂಡದ ತೊಡಿಗೆಗೆ ಮನವಿಟ್ಟ ಅರಗಿನ ಪುತ್ತಳಿಯಂತೆ' ಪರಮಶಿವನ ಸಭೆಯನ್ನು ಪ್ರವೇಶಿಸಿದನು. ೨೦

ಈ ಬಗೆಯಿಂದ ಕೈಲಾಸದ ಸಭೆಯನ್ನು ಪ್ರವೇಶಿಸಿದ ಅಹಂಕಾರಿಯಾದ ದಕ್ಷಬ್ರಹ್ಮನನ್ನು ಪರಶಿವನು ಕಂಡರೂ ಕಾಣದವನಂತೆ ಉಪೇಕ್ಷಿಸಿದನು. ಆದರೆ, ಒಂದು ವಿಧದಿಂದ ಶಿವನು ಅವನನ್ನು ನೋಡದೆ ಮರೆತನೆಂಬುದು ಸುಳ್ಳು. ಕೋಟಿ ಬ್ರಹಾಂಡದ ಕರ್ತೃವಾದ ಮತ್ತು ಸಂರಕ್ಷಕನಾದ ಶಿವನಿಗೆ ಅವನ ಆಗಮನವನ್ನು ಅರಿಯುವುದು ಕಷ್ಟವೇ? ಆದರೆ, ದಕ್ಷನ ಅಹಂಕಾರಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಶಿವನು ಮಾಡಿದನೆಂದು ಮಾತ್ರ ತಿಳಿಯಬಹುದಲ್ಲವೆ? ೨೧

ಈ ರೀತಿ ಸಭೆಗೆ ಬಂದರೂ ತನ್ನನ್ನು ಸನ್ಮಾನಿಸದಿರುವ ಪರಿಸ್ಥಿತಿಯನ್ನು ತಿಳಿದು ದಕ್ಷನು ಆಶ್ಚರ್ಯಗೊಂಡನು. ಮರುಳನಾದ ಶಿವನು ಸತ್ಕರಿಸದಿದ್ದರೆ ಹೋಗಲಿ; ತನ್ನ ಮಗಳಾದ ದಾಕ್ಷಾಯಣಿಯಾದರೂ ತನ್ನನ್ನು ಮರ್ಯಾದಿಸಬೇಡವೆ? ಎಂದು ಅವಳನ್ನು ನಿರೀಕ್ಷಿಸಿದನು. ಆದರೆ, ಗಂಡನು ಗೌರವಿಸದಿರುವವರನ್ನು ಹೆಂಡತಿಯು ಪುರಸ್ಕರಿಸುವುದು ಸತೀಧರ್ಮವಲ್ಲವೆಂದು ತಿಳಿದು ದಾಕ್ಷಾಯಣಿಯು ಮೌನವನ್ನು ವಹಿಸಿದಳಲ್ಲದೆ ಬೇರೆಯಲ್ಲ ಎಂಬುದನ್ನು ಅವನು ಅರಿಯದಾದನು. 'ದೊರೆಯ ಕಿರೀಟದ ಮುತ್ತು ತನ್ನ ಜನ್ಮಸ್ಥಳವಾದ ಚಿಪ್ಪನ್ನು ಇಳಿದಾದರದಿಂದ ಕಂಡಂತೆ' ತಂದೆಯಾದ ತನ್ನನ್ನು ತಿರಸ್ಕಾರದಿಂದ ನೋಡಿದ ತನ್ನ ಮಗಳನ್ನೂ, ತನಗೆ ಯಾರೂ ಸನ್ಮಾನವನ್ನು ಮಾಡದಿರುವ ಆ ಶಿವಸಭೆಯನ್ನೂ ಕಂಡು ದಕ್ಷನು ತನ್ನ ಮನಸ್ಸಿನಲ್ಲಿ ಹಳಹಳಿಸಿದನು. ೨೨

ಆಗ ಆ ಸಭಾಜನರು "ಈ ದಕ್ಷನು ಎಂತಹ ಪಾತಕವನ್ನು ಮಾಡಿರುವನೋ? ಅಲ್ಲವಾದರೆ ಸರ್ವಜ್ಞನಾದ ಶಿವನೂ, ಶಿವೆಯೂ ಇವನನ್ನು ಮನ್ನಿಸುವುದಿಲ್ಲವೇತಕ್ಕೆ? ಅವರ ಅಂತಸ್ಥವನ್ನು ಅರಿಯದೆ ದಕ್ಷನನ್ನು ಈ

ಶಿವಸಭೆಯಲ್ಲಿ ಗೌರವಿಸುವುದು ನಮಗೆ ಉಚಿತವಲ್ಲ"ಎಂದು ಬಗೆದು ಸಭೆಯು ಸುಮ್ಮನಿದ್ದಿತು. ಹೀಗೆ ತನಗಾದ ಅಪಾರವಾದ ಅಪಮಾನ ದಿಂದ ಕಳವಳಗೊಂಡು ಚಿಂತೆಯೆಂಬ ವನಕೆಯಿಂದ ಕುಟ್ಟಲ್ಪಟ್ಟ ದೇಹವುಳ್ಳ ದಕ್ಷನು, ವಿಪುಲವಾದ ಸಂತಾಪದಿಂದಲೂ, ಕೋಪಾವೇಶದಿಂದಲೂ ಮುಂದರಿಯದೆ ತನ್ನ ಆಲೋಚನಾಗೃಹಕ್ಕೆ ಬರುತ್ತಿದ್ದನು. ೨೩

ಆ ಸಮಯದಲ್ಲಿ ಪಾಪಾತುರನಾದ ದಕ್ಷಬ್ರಹ್ಮನು, ತಾನು ಅಜ್ಞಾನ ದಿಂದ ಮುಂದಾಲೋಚನೆಯಿಲ್ಲದೆ ಕೈಲಾಸಕ್ಕೆ ಹೋದೆನೆಂದು ಕರೆಗಟ್ಟಿದ ಬಿರುಗೋಪದಿಂದ ತನ್ನನ್ನು ತಾನೇ ನಿಂದಿಸಿಕೊಳ್ಳುತ್ತ ಬರುತ್ತಿದ್ದನು. ಆಗ ಅವನು ಕೊಂಚದೂರ ನಡೆಯುವುದು, ಅಲ್ಲಲ್ಲಿಯೇ ನಿಲ್ಲುವುದು, ಮಾರ್ಗ ಮಧ್ಯೆ ಬರುವವರನ್ನು ಕುರಿತು ನಾನಾಬಗೆಯಿಂದ ಆಲೋಚಿಸುವುದು, ನಿಟ್ಟುಸಿರುಬಿಡುವುದು, ಶಿವನನ್ನು ಬಯ್ಯುವುದು ಎಂಬೀ ಲಕ್ಷಣಗಳಿಂದ ಕೂಡಿ ತನ್ನ ಪಟ್ಟಣದ ಕಡೆಗೆ ನಡೆಯುತ್ತಿದ್ದನು. ೨೪

ಆ ದಕ್ಷಪಿತಾಮಹನು ಲೋಕದ ಹಲವು ರಾಜಾಧಿರಾಜರುಗಳಿಂದ ಸನ್ಮಾನವನ್ನು ಹೊಂದಿದ, ದೇವಾಧಿವೇವತೆಗಳಿಂದ ಎರಗಿಸಿಕೊಂಡ ತನ್ನ ಅನುಪಮವಾದ ಪರಾಕ್ರಮಕ್ಕೆ ಎಂತಹ ದುರ್ಗತಿ ಬಂದಿತು? ಎಂಬ ಸಂಕಟ ದಿಂದ ತಿರುಗಾಡುವ ಚಿಂತಾಚಿತ್ರವೋ ? ಸ್ವೈರಗಿನ ಸಾಕಾರವೊ ? ಎಂಬ ಸಂಕಟದಿಂದ, ಕೋಪವನ್ನು ಎರಕಹೊಯ್ದು ಮಾಡಿದ ಪುತ್ತಳಿಯೋ ಎಂಬಂತೆ ನಡೆದು ಬಂದು ತನ್ನ ಪಟ್ಟಣವನ್ನು ಪ್ರವೇಶಿಸಿದನು. ಹಾಗೂ ತನ್ನ ಅರಮನೆಯಲ್ಲಿ ನಿಂತನು. ೨೫

ಆಗ ಅವನು ತನ್ನನ್ನು ಎದುರುಗೊಳ್ಳಲು ಬಂದ, ಆನೆ, ಕುದುರೆ, ಪದಾತಿ ಮೊದಲಾದ ಸೈನಿಕರನ್ನೂ, ಕಹಳೆ, ಭೇರಿ ಮೊದಲಾದ ನಾನಾ ಮಂಗಳ ವಾದ್ಯಗಳನ್ನೂ ಗಮನಿಸದೆ, ತನ್ನನ್ನು ಆವರಿಸಿದ ಅಪಾರವಾದ ದುಃಖಾಪಮಾನಗಳಿಂದ ಕಳವಳಗೊಂಡಿದ್ದನು ೨೬

ಆಗ ರೋಷಪೂರ್ಣನಾದ ದಕ್ಷಬ್ರಹ್ಮನು, ತಾನು ತನ್ನ ತೊಡೆಗಳನ್ನು ಬಡಿದುಕೊಳ್ಳುತ್ತ ನಾನು ಒಂದು ಮಹಾಯಜ್ಞವನ್ನು ಮಾಡುವೆನು;

ಶಿವನ ದೇವತ್ವವನ್ನು ಸುಡುವೆನು ; ಶೂಲಿಯನ್ನು ನಾನಾಪ್ರಕಾರವಾಗಿ ಹಿಂಸಿಸುವೆನು ; ನನ್ನ ಓಲಗಶಾಲೆಗೆ ಸಮಸ್ತ ದೇವತೆಗಳನ್ನೂ ಕರೆಯಿಸು ವೆನು. ನನ್ನ ಮಾತುಕೇಳದ ದೇವತೆಗಳ ಮತ್ತು ಮನುಮುನಿಗಳ ಶಿರ ಸ್ಸನ್ನು ಛೇದನ ಮಾಡಿಸುವೆನು ; ಎಂದು ಮೊದಲಾಗಿ ಪಾಪಾತುರ ಬುದ್ಧಿ ಯಿಂದ ಗರ್ಜಿಸತೊಡಗಿದನು. ೨೭

ಆ ಕೂಡಲೇ ಆತುರದಿಂದ ಮಂತ್ರಿ ವಿದಗ್ಧನನ್ನು ಕರೆಸಿ ಸಂದರ್ಭವನ್ನು ಕುರಿತು ಆಲೋಚಿಸಿ, ಅಂದು ತನಗಾದ ಅಪಮಾನವನ್ನು ಹೋಗಲಾಡಿಸಿ, ರುದ್ರನ ಸರ್ವೇಶತ್ವವನ್ನು ಧ್ವಂಸಮಾಡಿ ತಾನೇ ಲೋಕೇಶ್ವರನಾಗುವಂತೆ ಮಹಾಯಾಗದ ಮುಖದಿಂದ ಶಕ್ತಿಯನ್ನು ಸಂಪಾದಿಸಿ, ಲೋಕದಲ್ಲಿ ತನ್ನ ಪ್ರಭುತ್ವವನ್ನು ಹೆಚ್ಚಿಸಿಕೊಳ್ಳುವಂತೆ ಮಾಡಬೇಕೆಂದೂ, ಅಂತಹ ಮಹಾ ಯಾಗಕ್ಕೆ ತಕ್ಕ ಪದಾರ್ಥಗಳನ್ನು ಕೂಡಲೇ ಸಂಗ್ರಹಿಸಬೇಕೆಂದೂ, ಕ್ಷಣವೂ ಬಿಡುವಿಲ್ಲದೆ ಆ ಯಾಗಕ್ಕೆ ಬೇಕಾಗುವ ಎಲ್ಲ ಪದಾರ್ಥಗಳನ್ನೂ ತರಿಸ ಬೇಕೆಂದೂ ನಿರೂಪಿಸಿದನು. ೨೮

ಆಗ ವಿವೇಕಿಯಾದ ಆ ಮಂತ್ರಿಯು, ದಕ್ಷನ ಈ ಉದ್ಯಮವನ್ನು ಕಂಡು ಮರುಗಿ, ಈ ಮುಂದೆ ಹೇಳುವಂತೆ ವಿವೇಕವನ್ನು ಬೋಧಿಸ ತೊಡಗಿದನು. 'ಎಲ್ಲ ವಸ್ತುಗಳನ್ನೂ ಸೃಷ್ಟಿಸಬಲ್ಲುದು ಭೂಮಿ, ಆ ವಸ್ತು ಗಳೆಲ್ಲವೂ ಭೂಮಿಯನ್ನು ಸೃಷ್ಟಿಸಬಲ್ಲುವೆ ? ಶಿವನು ಒಲಿದರೆ ಯಾಗ ಸಹಸ್ರದ ಫಲ ಪ್ರಾಪ್ತವಾಗುತ್ತದೆ. ಆ ಯಾಗಗಳು ಶಿವನ ಪದವಿಯನ್ನು ಕೊಡಬಲ್ಲುವೆ ? ಪ್ರಭುವೆ, ಅದೇಕೆ ಹೀಗೆ ಮೂರ್ಖನಾಗಿ ಮಾತನಾಡುವೆ ಎಲ್ಲಿಯೂ ಸಲ್ಲದ ಹೊಲ್ಲದ ಕಾರ್ಯವನ್ನು ಉದ್ಯೋಗಿಸಿದೆ ? ಈ ಕಾರ್ಯವು ನಿನಗೆ ಶುಭ ಪ್ರದವಾದುದಲ್ಲ' ಎಂದು ಬುದ್ಧಿ ಹೇಳಲು – ಪಾಪಿಯಾದ ದಕ್ಷನು ಅವನ ಬೋಧೆಯನ್ನು ತಿರಸ್ಕರಿಸಿ ಈ ಪ್ರಕಾರ ಹೇಳಿದನು. ೨೯

'ಎಲೈ ಮಂತ್ರಿಯೆ, ಹೀಗೇಕೆ ಮಾತನಾಡುವೆ? ಯಾಗದಿಂದಾಗದ ಕಾರ್ಯವಾವುದು ? ವಸಿಷ್ಠ ಮುನಿಯು ಶಪಿಸಿದ ಮಹಾಭೂಪನಾದ ತ್ರಿಶಂಕುವಿನ ತಂದೆಯಾದ ತ್ರಯ್ಯಾರುಣಿಯನ್ನು ಸ್ವರ್ಗಕ್ಕೆ ಕಳಿಸಿದ

ಬ್ರಹ್ಮನ ಮೇಲಿನ ಕೋಪದಿಂದ, ವಿಶ್ವಾಮಿತ್ರಋಷಿಯು ಯಜ್ಞದ ಮುಖದಿಂದ ಸಮಸ್ತ ವಸ್ತುಗಳನ್ನೂ ಸೃಷ್ಟಿಸಲಿಲ್ಲವೆ ? ಆದ್ದರಿಂದ ಘನತಮವಾದ ಯಜ್ಞಗಳಿಂದ ಸಾಧ್ಯವಾಗದಿರತಕ್ಕುದಾವುದು ? ಕಾರಣ, ನೀನು, ನಾನು ಕೈಗೊಂಡ ಕಾರ್ಯಕ್ಕೆ ಎದುರುಬರದೆ ನನಗೆ ಸಹಾಯನಾಗು. ಇಲ್ಲವಾದರೆ ನಿನ್ನನ್ನು ಈಕ್ಷಣವೇ ಕೊಂದುಬಿಡುವೆನು ಎಂದನು. ಆಗ ಈ ಮುಂದೆ ಹೇಳುವಂತೆ ಅವರೀರ್ವರನಡುವೆ ಸಂಭಾಷಣೆಯಾಯಿತು. ೩೦

ಮಂತ್ರಿವಿದಗ್ಧ:–ಎಲೈ ದಕ್ಷ ಬ್ರಹ್ಮನೆ, ಕೊಂದರೂ ಕೊಲ್ಲು ; ಶಿವದ್ವೇಷಮಯವಾದ ಈ ಯಾಗವನ್ನು ಕೈಗೊಳ್ಳಬೇಡ. ಖಂಡಿತವಾಗಿಯೂ ಬೇಡ.

ದಕ್ಷಬ್ರಹ್ಮ:–ಛೆ! ಛೆ! ನೀನು ಎಷ್ಟು ಹೇಳಿದರೂ ನಾನು ಈ ಯಾಗವನ್ನು ಬಿಡುವುದಿಲ್ಲ.

ಮಂತ್ರಿ:–ಇದು ಬಹಳ ಅಯೋಗ್ಯ ಕಾರ್ಯ.

ದಕ್ಷ:–ಇದು ಉತ್ತಮ ಕಾರ್ಯ. ಲೇಸು, ಲೇಸು.

ಮಂತ್ರಿ:–ಅಯ್ಯೋ ! ದಕ್ಷಪಿತಾಮಹ, ಪೂಜ್ಯನಾದ ನೀನು ಇದರಿಂದ ಲೋಕದ ನಿಂದೆಗೆ ಗುರಿಯಾಗುವೆಯಲ್ಲ !

ದಕ್ಷ:–ಆದದ್ದಾಗಲಿ !

ಮಂತ್ರಿ:–ಖಂಡಿತವಾಗಿಯೂ ಕೆಟ್ಟುಹೋಗುವೆ.

ದಕ್ಷ:–ಕೆಟ್ಟರೆ ಕೆಡುತ್ತೇನೆ. ಈ ಯಾಗವನ್ನು ಬಿಡುವುದಿಲ್ಲ. ಖಂಡಿತ.

ಮಂತ್ರಿ;–ನಿನ್ನ ಮಗಳು ಇದರಿಂದ ಕುಪಿತಳಾಗುವುದಿಲ್ಲವೆ ?

ದಕ್ಷ:–ಬಿಡುಬಿಡು. ಆದರಾಗಲಿ. ಕೋಪಿಸಿಕೊಳ್ಳಲಿ ಚಿಂತೆಯಿಲ್ಲ.

ಮಂತ್ರಿ:–ನಿನ್ನ ಕೀರ್ತಿ ವ್ಯರ್ಥವಾಗುತ್ತದೆ.

ದಕ್ಷ:–ಇದರಿಂದ ನನಗೆ ಕೀರ್ತಿಯುಂಟು.

ಮಂತ್ರಿ:–ಮನಬಂದಂತೆ ಮಾಡುವುದನ್ನು ಬಿಡು ಎನ್ನೊಡೆಯಾ ?

ದಕ್ಷ:–ನಾನು ಖಂಡಿತವಾಗಿಯೂ ಬಿಡುವುದಿಲ್ಲ. ಹಾಗೆ ಬಿಟ್ಟರೆ ನೀನೇ ನನ್ನನ್ನು ನೋಡಿ ನಗು ಎಂದು ಕೋಪದಿಂದ ಹೇಳಿದನು. ೩೧

ಆಗ ಮಂತ್ರಿಯು ನೀನು ಯಾಗವನ್ನು ಕೈಗೊಂಡರೆ ಶಿವನ ಬಂಟರಾದ ಗಣಂಗಳು ಬಂದು ಹೋಗದ ಸ್ಥಳವಾವುದು ? ಎಂದು ಕೇಳಲು ಆಗ

ದಕ್ಷನು ಶ್ರೀ ಕ್ಷೇತ್ರಕಾಶಿಗೆ ಪಡುವಣ ದಿಕ್ಕಿನ ರಮ್ಯಾಶ್ರಮದಲ್ಲಿರುವ ಕನಖಳಪುರದಲ್ಲಿ ನಾನು ಯಾಗವನ್ನು ಮಾಡುವೆನೆಂದನು. ಆಗ ಮಂತ್ರಿಯು ಯಾಗವನ್ನು ಮಾಡುವ ಋತ್ವಿಜರಾರು? ಎಂದು ಕೇಳಲು, ಮುನೀಶ್ವರರು ಎಂದನು. ಯಾಗವನ್ನು ನಡೆಸುವ ಸಂರಕ್ಷಕನಾರು ಎಂದು ಮಂತ್ರಿಯು ಕೇಳಲು, ಶ್ರೀಮಹಾವಿಷ್ಣುವೆಂದೂ, ಯಾಗಶಾಲೆಯ ಕಾಹಿನ ಕಡುಗಲಿಗಳು ದಿಕ್ಪಾಲಕರೆಂದೂ ದಕ್ಷನು ಉತ್ತರಕೊಟ್ಟನು. ಆಗ ವಿದಗ್ಧ ಮಂತ್ರಿಯು 'ಇವರೆಲ್ಲರೂ ಶಿವನಿಲ್ಲದ ಯಾಗಕ್ಕೆ ಬರಲಾರರು. ಇದನ್ನು ನೀನು ನೆನಪಿನಲ್ಲಿಡು' ಎಂದು ಹೇಳಿದನು. ೩೨

ದಕ್ಷ:-ನಾನು ಕರೆದರೆ ಬರುವುದಿಲ್ಲವೆಂದು ಹೇಳುವ ಮುನಿಗಳನ್ನೂ ಸುರರನ್ನೂ ಕೊಂದು ಹಾಕುತ್ತೇನೆ.

ಮಂತಿ:-ನೀನು ಹೀಗೆ ಭಯೋತ್ಪಾದವಮಾಡಿದರೆ ಯಾಗಕ್ಕೆ ಬರತಕ್ಕವರಾರು? ಯಾಗಕ್ಕೆ ಎಲ್ಲರನ್ನೂ ಉಪಾಯದಿಂದ ಕರೆತಂದು ಯಾಗವನ್ನು ಹೂಡು. ನಿನ್ನ ಬಲಪ್ರದರ್ಶನದಿಂದ ಕಾರ್ಯಸಾಧನೆಯಾಗುವುದಿಲ್ಲ, ದೇವತೆಗಳು ಒಲಿಯುವುದಿಲ್ಲ.

ದಕ್ಷ:-ಒಳ್ಳೆಯ ಉಪಾಯ. ನೀನು ಹೇಳಿದಂತೆಯೇ ಈ ಕಾರ್ಯವನ್ನು ಕೈಗೊಳ್ಳುತ್ತೇನೆ. ೩೩

ಆದಿಶೇಷನ ಪದವಿಯನ್ನು ಭೂಮಿಯ ಒಂದು ಚಿಕ್ಕಹಾವು ಅಪೇಕ್ಷಿಸುವಂತೆ, ಮೇರುಪರ್ವತದ ಮಹತ್ವವನ್ನು ಒಂದು ಕಿರಿಯ ಗುಡ್ಡ ಬಯಸುವಂತೆ, ಸಮುದ್ರದ ಗಂಭೀರತೆಯನ್ನು ಅಡವಿಯ ಒಂದು ಸಣ್ಣ ಹಳ್ಳ ಅಪೇಕ್ಷಿಸುವಂತೆ, ಕಲ್ಪವೃಕ್ಷದ ಔದಾರ್ಯವನ್ನು ಭೂಮಿಯ ಒಂದು ಒಣಗಿದ ಕಾರೆಯು ಸ್ಪರ್ಧಿಸುವಂತೆ, ಸರ್ವಜ್ಞನೂ, ಸರ್ವೇಶ್ವರನೂ ಆದ ಪರಮೇಶ್ವರ ಶಂಕರನ ಪದವಿಯನ್ನು ದಕ್ಷನು ಬಯಸಿ ಗಣಕರನ್ನು ಬರಮಾಡಿದನು. ೩೪.

ಆ ಪಾಪಾತುರನಾದ ದಕ್ಷಬ್ರಹ್ಮನು ಅವಸರವಸರವಾಗಿ ಈ ದಿನವೇ ಹೊರಟು ಬರಬೇಕೆಂಬ ಅರ್ಥದ ಪತ್ರಗಳನ್ನು, ವಿಷ್ಣು, ಬ್ರಹ್ಮ, ದಿಕ್ಪಾಲಕರು, ದೇವತೆಗಳು, ವಿದ್ಯಾಧರರು, ಕಿನ್ನರರು, ಖೇಚರರು, ಗರುಡರು, ಉರ

ಗರು, ಗುಹ್ಯಕರು, ಗಂಧರ್ವರು, ಮರುದ್ಗಣಗಳು, ತುರುಗಾನನರು, ಮನುಮುನಿಗಳು ಮೊದಲಾದವರಿಗೆಲ್ಲ ಬರೆದುಕಳುಹಿಸಿದನು. ೩೫

ಆತುರದಿಂದ ಕಾಶಿಗೆ ಪಶ್ಚಿಮ ದಿಕ್ಕಿನಲ್ಲಿರುವ ಕನಖಳಪುರದಲ್ಲಿ ಜಗದಗಲದ ಒಂದು ದೊಡ್ಡ ಓಲಗಶಾಲೆಯನ್ನು ಆ ಪಾಪಿಯಾದ ದಕ್ಷನು ಏರ್ಪಡಿಸಿದನು. ಆಹ್ವಾನಿತರೆಲ್ಲರೂ ಬಂದರು. ಅಲ್ಲಿ ನೆರೆದ ಎಲ್ಲ ಮುನಿಗಳನ್ನೂ, ದೇವತೆಗಳನ್ನೂ ಕುರಿತು 'ನನಗೆ ಒಂದು ಯಾಗವನ್ನು ಮಾಡಲು ಅಪ್ಪಣೆಯನ್ನು ಕೊಡಬೇಕು' ಎಂದು ಪ್ರಾರ್ಥಿಸಿದನು. ಆಗ ಇದು ಶಿವದ್ರೋಹಮಯವಾದ ಯಾಗವೆಂದು ತಿಳಿಯದೆ ಅವರೆಲ್ಲರೂ ಈ ಯಾಗಕ್ಕೆ ಒಪ್ಪಿಗೆಯನ್ನಿತ್ತು ಅಂತೆಯೇ ತಮ್ಮ ವಿನಾಶದ ಸಮ್ಮತಿಯನ್ನೂ ಒಡಂಬಟ್ಟರು.

ಆಗ ಯಾಗಾಭಿಜ್ಞರಾದ ಮುನಿಗಳನ್ನೆಲ್ಲ ಕರೆಯಿಸಿ ಯಾವ ಯಾಗವು ಶ್ರೇಷ್ಠವಾದದ್ದೆಂದು ದಕ್ಷನು ಪ್ರಶ್ನಿಸಲು, ಅವರು 'ಅತ್ಯಗ್ನಿಷ್ಟೋಮ'ಎಂದು ಉತ್ತರ ಹೇಳಿದರು. ಕೂಡಲೇ ಯಜ್ಞದ್ರವ್ಯಗಳನ್ನು ತರಹೇಳಿ, ಭೂಮಿಯನ್ನು ಶೋಧಿಸಿ, ಶಾಲಾವೇದಿಕೆ ಮೊದಲಾದುವುಗಳನ್ನು ಮಾಡಿಸಲು ತೊಡಗಿದನು. ೩೭

ಅಲ್ಲಿಂದ ಮುಂದೆ, ದೊಡ್ಡ ಕುಂಡ, ಡಮರುಗಾಕಾರದ ವೇದಿಕೆ ಮೊದಲಾದ ಯಾಗ ಸಿದ್ಧತೆಯ ಕಾರ್ಯಕ್ರಮಗಳನ್ನು ಆತುರದಿಂದ ಮಾಡಿಸಿದನು ಯಜ್ಞಕ್ಕೆ ಬಂದ ಜನರ ವಿನಾಶಕ್ಕೆ ಪೂರ್ವಸಿದ್ಧತೆ ಮಾಡಿಸಿದಂತೆ. ೩೮

ಹೊಸಮೊರ, ಸುರಭಿ, ಕಪಾಲ, ಉಲೂಖ, ಮೃಗಾಜಿನ, ಸರ್ಪಿ, ಸೋಮ, ಕುಶ, ಮಹಾವಿರಣಿ, ವಿಶಾಣ, ಶಂಖ, ಶಶಕ, ಬಾಧಿರಿ, ಉಪಶಮಿ, ಪಶು, ಶಸ್ತ್ರ, ರಜ್ಜು ಮೊದಲಾದ ಯಾಗ ಸಾಮಗ್ರಿಗಳನ್ನು ದ್ರೋಹಿಯಾದ ದಕ್ಷನು ಸಿದ್ಧಗೊಳಿಸಿದನು. ೩೯

ಹೋತೃ, ಸದಸ್ಯ, ಬ್ರಹ್ಮ, ಅಧ್ವರ್ಯು ಮೊದಲಾದ ಯಾಗಕ್ಕೆ ಅಂಗವಾದ ಎಲ್ಲ ಸಿದ್ಧತೆಗಳನ್ನೂ ಮಾಡಿ ತನ್ನ ಮರಣದ ಸಿದ್ಧತೆಯನ್ನು

ತಾನೇ ಮಾಡಿಕೊಳ್ಳುತ್ತಿರುವ ಆ ದಕ್ಷನು ಯಾಗರಕ್ಷಣೆಗೆ ದಿಕ್ಪಾಲಕರನ್ನು ಕರೆದನು. ೪೦

ನೀವೆಲ್ಲರೂ ನಿಮ್ಮ ಸ್ಥಲಗಳನ್ನು ಭದ್ರವಾಗಿ ಕಾದಿರಬೇಕು ; ಎಂದು ಅವರಿಗೆ ಅಪ್ಪಣೆಯನ್ನು ಕೊಟ್ಟು, ಮುಕುಂದನಿಗೆ ಅಗ್ರಾಸನವನ್ನಿತ್ತು, ಮತ್ತುಳಿದ ಮಾನ್ಯರಿಗೆಲ್ಲ ಉಚಿತಾಸನವನ್ನುಸಲ್ಲಿಸಿ, ಕೈಯಲ್ಲಿ ಕೋಡನ್ನು ಹಿಡಿದು, ಮೈಗೆ ಬೆಣ್ಣೆಯನ್ನು ಬಳಿದುಕೊಂಡು, ಮೃಗದೊವಲನ್ನು ಆಚ್ಛಾದಿಸಿಕೊಂಡು ಆ ಪಾಪಿಯಾದ ದಕ್ಷನು ಯಜ್ಞಾರಂಭಕ್ಕೆ ಸಿದ್ಧನಾದನು. ೪೧

ಹೀಗೆ ಯಾಗವು ಪ್ರಾರಂಭವಾಗುವ ಕಾಲದಲ್ಲಿ ಸರ್ವದ್ರವ್ಯ ಸಂಸ್ಕಾರ ಪರಿಷೇಚನ ಪರಿಸ್ತರಣಾದಿಗಳನ್ನು ಒದವಿಸಿ ಯಾಗವನ್ನು ಪ್ರಾರಂಭಿಸಲು, ಯಾಗ ಪ್ರಾರಂಭಕ್ಕೆ ಅನುಜ್ಞೆಯನ್ನು ಕೊಡುವ ಮುನಿಗಳೆಲ್ಲರೂ ಬಂದರೆ ನೋಡಿ ಎನಲು, ದಧೀಚಿ ಮಹರ್ಷಿಯು ಬಂದಿಲ್ಲೆಂಬ ಉತ್ತರವನ್ನು ತಿಳಿದು ತತ್‌ಕ್ಷಣವೇ 'ಬೆಟ್ಟವನ್ನು ಹತ್ತಿ ಮೃತ್ಯುವನ್ನು ಕರೆಯಲು' ಕಳಿಸುವಂತೆ ಆ ದಧೀಚಿಯನ್ನು ಕರೆಯಲು ಸೇವಕರನ್ನು ಕಳುಹಿಸಿದನು.

ಅಲ್ಲಿಂದ ಹೊರಟು ಬಂದ ಸೇವಕರು ಪಂಪಾಕ್ಷೇತ್ರದಲ್ಲಿ ಮುನಿಗಳ ಸಮೂಹದಲ್ಲಿ ಪ್ರಸನ್ನ ಚಿತ್ತನಾಗಿ ಪ್ರತ್ಯಕ್ಷ ಪರಮೇಶ್ವರನಂತಿದ್ದ ದಧೀಚಿಗೆ ದಕ್ಷನ ಜನ್ನದ ಬಿನ್ನಹವನ್ನು ಸಮರ್ಪಿಸಿದರು.

ಆಗ ಈ ಮುಂದೆ ಹೇಳುವಂತೆ ಅಲ್ಲಿ ಸಂಭಾಷಣೆಯಾಯಿತು.

ದಧೀಚಿ:–ಯಾಗದ ಪ್ರಾರಂಭವೆಂದು ?

ಸೇವಕರು:–ಈ ದಿನವೇ !

ದಧೀಚಿ:–ಯಾವ ಹೊತ್ತು ?

ಸೇವಕರು:– ಈ ಹೊತ್ತೇ

ದಧೀಚಿ:– ಕೈಲಾಸ ಪತಿಯಾದ ಶಂಕರನು ಬಂದಿರುವನೆ ? ಮತ್ತುಳಿದ ಋಷಿ ಶ್ರೇಷ್ಠರೆಲ್ಲರೂ ಬಂದಿರುವರೆ ?

ಸೇವಕರು:–ಎಲ್ಲರೂ ಬಂದಿರುವರು.

ಎಂದು ಹೇಳಲು ಹರುಷಾತಿರೇಕದಿಂದ ಶಿವಭಕ್ತಿ ಪುಂಗವನಾದ ದಧೀಚಿಯು ಸಂಭ್ರಮದಿಂದ ಯಾಗಶಾಲೆಗೆ ಹೊರಟನು. ೪೩

ನಾಲ್ಕು ವೇದಗಳಿಗೆ ಸಿಲುಕದಿರುವ, ಅಜ ಹರಿಗಳಿಗೆ ಅಸದಳನಾದ, ಅಪ್ರತಿಮನೂ, ಅಭವನೂ ಆದ ಎನ್ನೊಡೆಯ ವಿರೂಪಾಕ್ಷನನ್ನು ಇಂದು ಕಣ್ಣಾರ ಕಂಡು ಸಂತೋಷಪಡುವೆನು ಎಂಬ ಉತ್ಸಾಹದಿಂದ, ಇಳಿಯಬಿದ್ದ ಜಡೆ, ಸುತ್ತಿದ್ದ ಚರ್ಮ, ಅಂತಿಂತು ಬಳಿದ ವಿಭೂತಿ ಇವುಗಳಿಂದ ಕೂಡಿ ಆ ಮಹಾತ್ಮನಾದ ದಧೀಚಿಯು ಬಹು ವೇಗದಿಂದ ದಕ್ಷನ ಯಾಗಶಾಲೆಯನ್ನು ಬಂದು ಸೇರಿದನು. ೪೪

ಆಗ ಆ ದಧೀಚಿಯು ಆ ಯಾಗಶಾಲೆಯನ್ನೆಲ್ಲ ತಿರುತಿರುಗಿ ನೋಡಿ, ಅಧ್ಯಕ್ಷಸ್ಥಾನದಲ್ಲಿಯೂ, ವೇದಗಳಶಿರೋಭಾಗದಲ್ಲಿಯೂ, ಮಂತ್ರಗಳ ಮಸ್ತಕದಲ್ಲಿಯೂ, ಜಟಾಮುಕುಟ ಕುಂಡಲ ಧಾರಿಗಳಲ್ಲಿಯೂ, ತನ್ನ ಇಷ್ಟ ಮೂರ್ತಿಯಾದ ಶಿವನು ಇಲ್ಲದಿರುವುದನ್ನು ಕಂಡು, ಕುಪಿತನಾಗಿ ಯಾಗ ಶಾಲೆಯನ್ನು ಸುಟ್ಟು ಬೂದಿ ಮಾಡುತ್ತೇನೆ ಎಂದು ಅಬ್ಬರಿಸುವವನಾದನು.

ಆಗ ಘುಡುಘುಡಿಸುತ್ತ ಕೋಪಾರೂಢನಾದ ಆ ದಧೀಚಿಗೂ, ಶಿವ ದ್ರೋಹಿಯಾದ ದಕ್ಷನಿಗೂ ಈ ಮುಂದೆ ಹೇಳುವಂತೆ ಸಂಭಾಷಣೆಯಾಯಿತು.

ದಧೀಚಿ:– ಎಲೈ ದಕ್ಷಾ, ಪುರಾಂತಕನಾದ ಶಂಕರನೆಲ್ಲಿ? ನಮ್ಮ ಪರಶಿವನೆಲ್ಲಿ? ಜಾಗ್ರತೆ ತೋರಿಸು.!!

ದಕ್ಷ:– ಪುರಾಂತಕ ಎಂದರೆ ಯಾರು ?

ದಧೀಚಿ:–ಅಧ್ವರದ ಒಡೆಯನು. ಜಗತ್ಪತಿಯಾದ ಶಂಕರನು.

ದಕ್ಷ:– ಅವನೇಕೆ ಇಲ್ಲಿಗೆ ?

ದಧೀಚಿ:– ಈ ಯಾಗವನ್ನು ರಕ್ಷಿಸ ಬೇಡವೆ ?

ದಕ್ಷ:– ಓಹೋ ! ಬೇಡ.

ದಧೀಚಿ:– ಯಾವ ಕಾರಣ ಬೇಡವೆನ್ನುವೆ ?

ದಕ್ಷ:– ಅವನ ಹೆಸರನ್ನು ಇಲ್ಲಿ ಎತ್ತಬೇಡ. ಅವನು ಇಲ್ಲಿಗೆ ಅಯೋಗ್ಯನು.

ದಧೀಚಿ:– ಛೀ ! ಬಿರುನುಡಿಯನ್ನಾಡುವೆ ! ಶಿವನು ಪರಮ ಪವಿತ್ರನು.

ದಕ್ಷ:– ಅವನು ಮೂಳೆಗಳನ್ನೂ ಚರ್ಮವನ್ನೂ ತಲೆಬುರುಡೆಗಳನ್ನೂ ಅಲಂಕರಿಸಿಕೊಳ್ಳುವವನು. ಸುಡುಗಾಡಿನಲ್ಲಿ ವಾಸಿಸುವವನು. ಆದರಿಂದ ಶಿವನು ಅಪವಿತ್ರನು. ೪೬

ಈ ಬಗೆಯಾಗಿ ದಕ್ಷನು ಶಿವನಿಂದೆಯನ್ನು ಮಾಡಿದುದನ್ನು ಕೇಳಿ ದಧೀಚಿ ಮುನಿಯು ಘನ ಮಂಗಳಮಯನಾದ ಶಿವನು ಯಾವುದನ್ನು ಉಡುವನೋ ಅದು ಪವಿತ್ರ. ಯಾವುದನ್ನು ತೊಡುವನೋ ಅದು ಪುನೀತ. ಆ ಮಹಿಮನ ವಿಷಯವನ್ನು ಪಾಪಿಯಾದ ನೀನೇನು ಬಲ್ಲೆ? ನಿನ್ನ ವಿಷಯ ಹಾಗಿರಲಿ, ಸನ್ಮಾರ್ಗದಲ್ಲಿ ನಡೆದ ವಿಷ್ಣು ಬ್ರಹ್ಮೇಂದ್ರಾದಿಗಳೂ, ಮನು ಮುನಿಗಳೂ, ಶಿವರಹಿತವಾದ ಈ ಯಾಗಕ್ಕೆ ಒಪ್ಪಿಗೆಯಿನ್ನಿತ್ತರೆಂತು ? ಯಾಗಾಧಿಪತಿಯಾದ ಆ ಮಹಾ ಮಹಿಮನನ್ನು ಮರೆತರೆಂತು? ಎಂದನು. ಆಗ ದಕ್ಷನು ನೀನು ಹೇಳಿದ ಎಲ್ಲ ಮಹಿಮೆಗಳೂ ನನ್ನ ಅಳಿಯ ಎನಿಸಿ ಕೊಳ್ಳಲಾರವು ಎಂದು ಮುನಿಯನ್ನು ಮೂದಲಿಸಿದನು. ೪೭

ಈ ಬಿರುನುಡಿಗಳಿಂದ ಕುಪಿತನಾದ ಆ ಋಷಿಯು,ಆ ನಿನ್ನ ಅಳಿಯನು ಹರಿಯಜಕಂತೆ ಅಳಿಯತಕ್ಕವನಲ್ಲ. ನಿನ್ನ ಅಧ್ವರದಂತೆ ಅಳಿಯ ತಕ್ಕ ವನಲ್ಲ. ಅಹಂಕರಿಸಿದವರನ್ನು ಅಳಿಸತಕ್ಕವನು. ಅವನು ಸಾಮಾನ್ಯ ಅಳಿಯನೆಂದು ತಿಳಿಯ ಬೇಡ ಎಂದನು. ಆಗ ದಕ್ಷನು ದಧೀಚಿಯು ಹೊಗಳಿದ ಶಿವನ ಬಣ್ಣನೆಗೆ ಕ್ರುದ್ಧನಾಗಿ, ನೀನು ಹೇಳುವ ಆ ಶಿವನು, ಅರೆವೆಣ್ಣು, ಅಕುಲೀನ, ಅನಾಮಿಕ, ಅಬದ್ಧ, ನಿರ್ಗುಣದೈವ, ಅಂತಹ ಆ ದುರ್ದೈವಿಯಾದ ಹರನನ್ನು ಈ ಯಾಗಶಾಲೆಯಲ್ಲಿ ನೆನೆಯಬೇಡ ಎಂದು ಹೇಳಲು, ದಧೀಚಿಮುನಿಯು ಶಿವನಿಂದೆಯನ್ನು ಕೇಳಿ ಕೋಪಿಸಿಕೊಂಡು ದನ್ನು ನಾನೆಂತು ಹೇಳಲಿ!

ಆಗ ದಧೀಚಿಯ ಕಣ್ಣಿನಲ್ಲಿ ಕೋಪದ ಕಿಡಿಗೆದರಿತು. ಉರಿ ಹಬ್ಬಿತು. ನುಡಿ ಬಿರುಸಾಯಿತು. ಹುಬ್ಬುಗಂಟುಬಿತ್ತು. ತುಟಿ ಅಳ್ಳಾಡಿತು. ಪೂಸಿದ ವಿಭೂತಿ ಕರಗಿತು. ಕಮಂಡಲುಜಲ ಕುದಿಯಿತು. ಕೂದಲು ನೇರವಾದುವು. ಯೋಗದಂಡವು ಕೈ ಜಾರಿತು. ಈ ಪ್ರಕಾರದಿಂದ ಕೋಪಾರೂಢನಾದ ದಧೀಚಿಯು ಶಿವನಿಂದೆಯನ್ನು ಕೇಳಿ ಉದ್ರೇಕಿತನಾಗಿ ಸಭೆಯು ನಡುಗುವಂತೆ ಮಾತನಾಡಿದನು. ೪೮

ಎಲೈ ಪಾಪಿಯಾದ ದಕ್ಷನೆ, ನಿನ್ನ ಯಾಗನಡೆಯದಿರಲಿ. ನಿನ್ನ ತಲೆಯು ಹುಡಿಯಾಗಲಿ. ನಿನ್ನ ಯಾಗವು ನಾಶವಾಗಲಿ. ಈ ಯಾಗಕ್ಕೆ ಸಹಾಯರಾದ ಹರಿಯ ಹರಣವು ಹೋಗಲಿ. ಪೂಷನ ಹಲ್ಲುಗಳು ಮುರಿಯಲಿ. ಕಾಲನ ಕೈಗಳು ಕತ್ತರಿಸಲಿ, ಇಂದ್ರನು ನೋಯಲಿ, ಬ್ರಹ್ಮನ ಹೆಂಡತಿಯ ಮೂಗು ಕತ್ತರಿಸಲಿ, ದಿಕ್ಪಾಲಕರು ಭಂಗಿತರಾಗಲಿ, ಮಿಕ್ಕವರು ಹುಲುಹಿಡಿಯಲಿ, ನಿನ್ನ ಯಾಗವು ಸರ್ವಸ್ವನಾಶವಾಗಲಿ ಎಂದು ಶಾಪವನ್ನಿತ್ತನು. ೫೦

ಮತ್ತು ಸ್ವಾಮಿಯನ್ನು ವಂಚಿಸಿ ಕಳ್ಳತನದಿಂದ ಉಣ್ಣಲು ಬಂದ ಅಗ್ನಿಯ ನಾಲಗೆಯು ಸೀಳಾಗಲಿ, ದೇವತೆಗಳೆಲ್ಲಾ ಸಾಯಲಿ, ಮಿಕ್ಕವರು ಹುಲುವಿಡಿಯಲಿ, ತಿಳಿಯದೆ ಇಲ್ಲಿಗೆ ಬಂದು ಸೇರಿರುವ ಸಕಲ ಮುನಿಸ್ತೋಮವೂ ಶಿವನ ಪಾದಗಳನ್ನು ಕ್ಷಮಾಯಾಚನೆ ಮಾಡಲಿ, ಔದ್ಧತ್ಯದಿಂದ, ಅಹಂಕಾರದಿಂದ, ಇಲ್ಲಿ ಕೂಡಿರುವವರೆಲ್ಲರೂ ವೇದಾರ್ಥದಂತೆ ನಡೆಯದೆ ನರಕಕ್ಕೆ ಹೋಗಲಿ. ಹಿಡಿ ಹಿಡಿ ಶಾಪವನ್ನು ಕೊಳ್ಳು ಎಂದು, ದಕ್ಷನನ್ನೂ, ಅವನ ಯಾಗಶಾಲೆಯನ್ನೂ ಶಪಿಸಿ, ಸಭೆಯು ಕಂಪಿಸುತ್ತಿರಲು ದಧೀಚಿಯು ಅಲ್ಲಿಂದ ಅತಿ ವೇಗವಾಗಿ ಹೊರಟು ಹೋದನು. ೫೧

ಆ ದಧೀಚಿ ಮುನಿಯ ಶಾಪದಿಂದ ಕಂಪಿತರಾದ, ಆಗಸ್ತ್ಯ, ವಸಿಷ್ಠ, ಭೃಗು, ದೇವಲ, ಗೌತಮ, ಉಪಮನ್ಯು ಎಂಬ ಮುನಿಮುಖ್ಯರೂ, ಅವರ ಹಿಂದೆ ಎಂಟು ಸಾವಿರ ಋಷಿಗಳೂ, ಈ ಯಜ್ಞವು ಶಿವದ್ವೇಷಮಯವೆಂದು ಅರಿಯದೆ ಬಂದೆವಲ್ಲಾ! ಶಿವನು ಇಲ್ಲಿಗೆ ಬರುವನೆಂದು ತಿಳಿದಿದ್ದೆವಲ್ಲಾ! ಈ

ದಧೀಚಿ ಮಹಾಮುನಿಯ ಶಾಪದ ಹೊರೆಯನ್ನು ಧರಿಸುವವರಾರು? ಶಿವ ರಹಿತವಾದ ಈ ಯಾಗದಲ್ಲಿ ಇರುವುದಾದರೂ ಎಂತು? ಎಂದು ಹೇಳುತ್ತ ತಮ್ಮ ತಮ್ಮ ಆಶ್ರಮಗಳಿಗೆ ಸದ್ದಿಲ್ಲದೆ ತೆರಳಿದರು. ಮತ್ತುಳಿದ ಮೂವತ್ತೆರಡು ಸಾವಿರ ಮಂದಿ ಮುನಿಗಳು ಶಾಪಗ್ರಸ್ಥರಾಗಿ ಆ ಯಾಗಶಾಲೆಯಲ್ಲಿ ಉಳಿದರು. ೫೨

ಆಗ ರಾಕ್ಷಸಿಯು ಹೀರಿದ ಹಾಲಿನ ಕುಂಭವಾಯ್ತು ಆ ದಕ್ಷನ ಸಭೆ. ಸಭಿಕರು ಮುಂದೇನು ಮಾಡುವುದೆಂದು ಕಕಮಕ ಹಿಡಿದರ ಕೆಲರು ಬಂದದ್ದೇ ತಪ್ಪು, ಬಂದ ಮೇಲೆ ಹೋಗುವುದು ಸರಿಯಲ್ಲವೆಂದರು. ಕೆಲರು ದಕ್ಷನ ದಾಕ್ಷಿಣ್ಯಕ್ಕೆ ಕಟ್ಟುಬಿದ್ದರು. ಆಗ ಈ ಗಡಿಬಿಡಿಯನ್ನು ನೋಡಿ ಕಲಹಪ್ರಿಯನಾದ ನಾರದನು ಎಲ್ಲರಿಗೂ ಧೈರ್ಯ ಹೇಳಿ, ಹಿಡಿದ ಕಾರ್ಯವನ್ನು ಬಿಡಬೇಡಿ, ಯಾಗವನ್ನು ನಡೆಯಿಸಿ, ಶಿವನ ಕೃಪೆಯಿದ್ದಂತಾಗಲಿ ಎಂದು ದಕ್ಷಾದಿಗಳಿಗೆ ಧೈರ್ಯಹೇಳಿ ಇತ್ತ ಕೈಲಾಸದ ಕಡೆಗೆ ಧಾವಿಸಿದನು. ೫೩

ಅನಂತರ ಮುಖ್ಯ ಮುನಿಗಳೆಲ್ಲಾ ಹೋದಮೇಲೆ ಯಜ್ಞವು ದಕ್ಷನ ಧೈರ್ಯದೊಂದಿಗೆ ಮುಂದುವರಿಯಿತು. ಆ ಯಾಗಶಾಲೆಯಲ್ಲಿ ವೈದಿಕರು ಘೋಷಿಸುತ್ತಿದ್ದಾಗ ಗಾಯತ್ರೀ ಮೊದಲಾದ ಮಂತ್ರಧ್ವನಿಯು ದಕ್ಷನ ಅವಜ್ಞತೆಯನ್ನು ಉದ್ಘೋಷಿಸುತ್ತಿವೆಯೋ ಎನ್ನುವಂತಿತ್ತು.

ಆಮೇಲೆ ಪದ್ಧತಿಯಂತೆ ಯಾಗಶಾಲೆಯಲ್ಲಿ ಶಸ್ತ್ರವನ್ನು ಮಸೆ, ಯೂಪವನ್ನು ಪೂಜಿಸು, ಹಗ್ಗದಿಂದ ಮೇಕೆಯನ್ನು ಕಟ್ಟು, ಅದು ಕೂಗಿಕೊಳ್ಳದ ಹಾಗೆ ಅದರ ಗಂಟಲನ್ನು ಮುರಿದು ಮರ್ದಿಸು, ಬಳಿಕ ಅದನ್ನು ವಿಧ್ಯುಕ್ತವಾಗಿ ಉಪಚರಿಸು, ಅಂಗಾಂಗಗಳನ್ನು ಪೂಜಿಸು, ಅಜಪಶುವನ್ನು ಕೊಯ್ಯಿ, ಅದರ ಪಲಲವನ್ನು ತೆಗೆ, ಅದರ ರಕ್ತವನ್ನು ಬಸಿ, ವಪೆಯನ್ನು ಸುಲಿ, ಬೆಂಕಿಯಲ್ಲಿ ಕಾಯಿಸು, ಆಹುತಿಯನ್ನು ಕೊಡು, ಮಿಕ್ಕ ಎಸರನ್ನು ಪುರೋಡಾಶಪ್ರಾಶನವನ್ನು ಮಾಡು ಎಂಬ ಮೊದಲಾದ ಗಡಿಬಿಡಿಯು ಹೊಲೆಗೇರಿಯಲ್ಲಿ ನಡೆಯುವಂತೆ ದಕ್ಷನ ಯಾಗಶಾಲೆಯಲ್ಲಿ ನಡೆಯುತ್ತಿರಲು ಇತ್ತ ನಾರದಮುನಿಯು ಕೈಲಾಸವನ್ನು ಬಂದು ಸೇರಿದನು. ೫೪

ನಾರದಮುನಿಯು ಕೈಲಾಸಕ್ಕೆ ಬಂದು ಆನಂದದಿಂದ ಅಘನಾಶನಾದ ಈಶನನ್ನು ವಂದಿಸಿ, ರಿಪುವೃಂದ ವಿಮೋಚನ ರಚನಾವಚನ ಪ್ರಚಯದಿಂದ ಕೀರ್ತಿಸಿ, ವಿನಯದಿಂದ ಪಕ್ಕಕ್ಕೆ ನಿಲ್ಲಲು, ಚಂದ್ರಚೂಡನಾದ ಶಂಕರನು ನಾರದನ ಕೈಂಕರ್ಯವನ್ನು ಕಂಡು, 'ದುಗುಡಾಂಬುಧಿ ಮಂದಿರ' ಎಲ್ಲಿ ಹೋಗಿದ್ದೆ? ಹತ್ತಿರ ಬಾ, ವಿಶೇಷವೇನು? ಎಂದು ಪ್ರಶ್ನಿಸಲು, ದಕ್ಷನ ಯಾಗಶಾಲೆಯೆಂಬ ಅರಣ್ಯಕ್ಕೆ ಕಾಳ್ಗಿಚ್ಚಿನಂತಿರುವ ಬೀಜರೂಪವಾದ ಮಾತು ಗಳನ್ನು ಶಿವನಲ್ಲಿ ಬಿನ್ನೈಸಿದನು. ೫೬

ನಾರದ:—ಯಾಗ ದೀಕ್ಷಿತನಾಗಿರುವ ದಕ್ಷ ಬ್ರಹ್ಮನಲ್ಲಿಗೆ ಹೋಗಿದ್ದೆ.

ಶಿವ:—ಅದೇನು? ದಕ್ಷನು ಯಾಗವನ್ನೇಕೆ ಮಾಡುತ್ತಿರುವನು?

ನಾರದ:—ಅವನು ನಿಮ್ಮನ್ನು ನಿಂದಿಸಿ ಈಗಲೇ ಯಾಗವನ್ನು ಪ್ರಾರಂಭಿ ಸಿರುವನು.

ಶಿವ:—ಯಾಗಕ್ಕೆ ಎಲ್ಲರೂ ಬಂದರೆ? ಅವರಲ್ಲಿ ಎನಗಾಗಿ ಯಾರೂ ವಿರೋ ಧಿಸಲಿಲ್ಲವೆ?

ನಾರದ:—ಉಂಟು. ಶಿವಯೋಗೀಂದ್ರ ದಧೀಚಿ ಪ್ರತಿ ಮಾತ್ರ ವಿರೋ ಧಿಸಿದನು. ೫೭

ಶಿವ:—ನೆಟ್ಟನೆ ಹೇಳು. ಆ ನನ್ನ ಭಕ್ತನು ಅಲ್ಲೇನು ಮಾಡಿದನು?

ನಾರದ:—ಆ ದಧೀಚಿಯು ಮದಸೊಕ್ಕಿದ ಕರಿಯು ಕೊಳವನ್ನು ಹೊಕ್ಕಂತೆ ಯಾಗಶಾಲೆಯನ್ನು ಹೊಕ್ಕು, ಅಗ್ರಾಸನದಲ್ಲಿ ನಿಮ್ಮನ್ನು ಕಾಣದೆ, ಘುಡುಘುಡಿಸುತ್ತ ಸಭೆಯಕಡೆಗೆ ತಿರುಗಿ, ವಿಷ್ಣು ಬ್ರಹ್ಮಾದಿ ದೇವತೆಗಳಿಗೆಲ್ಲ ಶಾಪವನ್ನು ಕೊಟ್ಟು, 'ಈ ದಕ್ಷಯಾಗವು ಹಾಳಾಗಲಿ' ಎಂದು ಹೇಳಿ ಹೋದನು. ಅವನ ಹಿಂದೆಯೇ ವಿವೇಕಿಗಳಾದ ವಸಿಷ್ಠಾದಿ ಋಷಿಗಳೂ ಹೊರಟುಹೋದರು. ಮತ್ತುಳಿದವರು ಯಾಗವನ್ನು ನಡೆಸುತ್ತ ಇದ್ದಾರೆ ಎಂದು ಬಿನ್ನೈಸಿದನು. ೫೮

ಆಗ ದಾಕ್ಷಾಯಣಿಯು ತಂದೆಯ ಯಾಗವಾರ್ತೆಯನ್ನು ಕೇಳಿ ಕುಪಿತಳಾಗಿ, ನಾಸೀಗಲೇ ಹೋಗಿ ತಂದೆಯಾದ ದಕ್ಷನಿಗೆ ಬುದ್ಧಿಹೇಳಿ ಯಾಗವನ್ನು ನಿಲ್ಲಿಸುವೆನು. ಅಲ್ಲವಾದರೆ ಅದನ್ನು ಧ್ವಂಸಮಾಡುವೆನು. ಆದ್ದರಿಂದ 'ಪೂಜ್ಯಶಂಕರಾ, ನಾನು ತಂದೆಯ ಮನೆಗೆ ಹೋಗಿ ಬರಲು ಅಪ್ಪಣೆಯನ್ನು ಕೊಡು' ಎಂದು ಶಿವನಿಗೆ ಬಿನ್ನೈಸಿದಳು. ಆಗ ಶಿವನು 'ಪ್ರಿಯಸತೀ, ಪಾಪಿಯಾದ ದಕ್ಷನು ನಿನ್ನ ಮಾತನ್ನು ಕೇಳನು. ಅಲ್ಲಿಗೆ ಹೋಗುವುದರಿಂದ ಕೇಡು ತಪ್ಪದು' ಎಂದನು. ೫೯

ಆಗ ದಕ್ಷಪುತ್ರಿಯು, 'ಎಲೈ ಶಂಕರನೆ, ಪೂಜ್ಯನಾದ ನಿನಗೆ ವಿರೋಧಿಯಾದ ಆ ದಕ್ಷನು, ನನಗೆ ತಂದೆಯೆಂತಾದಾನು? ಅಂಥವನನ್ನು ತಂದೆಯೆಂದು ಭಾವಿಸಿದರೆ ಸತಿಯೆಂಬ ನಾಮವು ನನಗೆ ಸಾರ್ಥಕವಾದೀತೆ? ಏನಾದರೂ ಆಗಲಿ, ನಾನು ದಕ್ಷನ ಯಾಗಶಾಲೆಗೆಹೋಗಿ ಅವನಿಗೆ ಬುದ್ಧಿಯನ್ನು ಹೇಳುವೆನು. ಆದಂತಾಗಲಿ, ಅಪ್ಪಣೆಯನ್ನು ಕೊಡು' ಎಂದು ಶಿವನನ್ನು ಒಲಿಸಿ, ರುದ್ರಕನ್ನಿಕೆಯರೊಡನೆ ಪುಷ್ಪಕವನ್ನು ಹತ್ತಿ ದಕ್ಷನ ಯಾಗಶಾಲೆಗೆ ಅಭಿಮುಖಳಾದಳು. ೬೦

ಅನಂತರ ಶಿವನು ಕಳಿಸಿದ ವೈಗಾವಲು ಗಣಗಳೊಡನೆ ಪುಷ್ಪಕಾರೂಢಳಾಗಿ ಹಸನ್ಮುಖಿಯಾದ ದಾಕ್ಷಾಯಣಿಯು ಅತಿವೇಗದಿಂದ ಪ್ರಯಾಣ ಮಾಡಿ ಖನಕಳಪುರದಲ್ಲಿದ್ದ ದಕ್ಷನ ಯಾಗಶಾಲೆಯನ್ನು ಸೇರಿದಳು. ೬೧

ತನ್ನ ಸುಪುತ್ರಿಯಾದ ದಾಕ್ಷಾಯಣಿಯು ಮುಂದೆ ಬಂದು ನಿಂತಿದ್ದರೂ ದಕ್ಷನು ಅವಳನ್ನು ನೋಡದೆ ಮುಖವನ್ನು ತಿರುಗಿಸಿಕೊಂಡನು. ಆಗ ಅವನ ಮುಖವು ಚಂದ್ರನಿಲ್ಲದ ರಾತ್ರಿಯಂತೆಯೂ, ಸೂರ್ಯನಿಲ್ಲದ ಆಕಾಶದಂತೆಯೂ ಕಾಂತಿಶೂನ್ಯವಾಗಿತ್ತು. ದಾಕ್ಷಾಯಣಿಯು ತಂದೆಯ ಈ ಸ್ಥಿತಿಯನ್ನು ನೋಡಿ, ಅವನಲ್ಲಿ ಮಾತಾಡುವ ತವಕದಿಂದ ಅವನು ಮುಖವನ್ನು ತಿರುಗಿಸಿದ ಕಡೆಗೆ ತಾನೂ ಹೋಗಿ ನಿಲ್ಲುತ್ತಿದ್ದಳು. ೬೨

ಇಷ್ಟಾದರೂ ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿರುವ ಶಿವನ ಕೀರ್ತಿಯನ್ನು ನೋಡಲಾರದೆ, ನಿಷ್ಠುರನಾದ ದಕ್ಷನು, ಹೀಗೆ ಸುತ್ತಲೂ ತಲೆಯನ್ನು

ತಿರುಗಿಸುತ್ತಿರುವುದನ್ನು ಕಂಡು, ಪಾರ್ವತಿಯು ಆ ಯಾಗಶಾಲೆಯಲ್ಲಿರುವ ವಿಷ್ಣು, ಇಂದ್ರ, ಅಗ್ನಿ, ವರುಣ, ಕುಬೇರ ಮೊದಲಾದ ದೇವಪ್ರಮುಖ ರನ್ನು ಕುರಿತು 'ಇನ್ನು ನಾನು ಈ ಪಾಪಿಯಾದ ದಕ್ಷನ ಸಂಬಂಧವಾದ ಶರೀರವನ್ನು ಧರಿಸಿರಲಾರೆನು' ಎಂದು ಹೇಳಿದಳು. ೬೩

ಆಗ ದಕ್ಷನು, ಪಾರ್ವತಿಯನ್ನು ಕುರಿತು, 'ಎಲೌ, ನಿನ್ನನ್ನು ಇಲ್ಲಿಗೆ ಕರೆದವರಾರು ? ಇಲ್ಲಿ ಇರಲು ಅನುಮತಿ ಕೊಟ್ಟವರಾರು ? ತುಂಬಿದ ದೇವ ಸಭೆಯಲ್ಲಿ ದಕ್ಷಪಿತಾಮಹನಾದ ನನಗೆ ಅಪಮಾನ ಮಾಡಿದ ಆ ಮರುಳು ಶಂಕರನು ನನ್ನ ಅಳಿಯನೆಂತಾದಾನು ? ಅವನ ಅನುವರ್ತಿನಿಯಾದ ನೀನು ನನಗೆ ಮಗಳೆಂತಾದೀಯೆ ? ಇನ್ನು ನಿನ್ನ ಗಂಡನ ಸರ್ವೇಶತ್ವದ ಅವಧಿ ಮುಗಿಯಿತು. ಅವನನ್ನು ನಾಶಮಾಡದಿದ್ದ ಮೇಲೆ ನಾನು ದಕ್ಷನೆಂತಾ ದೇನು' ? ಎಂದು ಗರ್ಜಿಸಿ ಮಾತನಾಡಿದನು. ೬೪

ಆಗ ದಾಕ್ಷಾಯಣಿಯು, ತನ್ನ ಪತಿಯ ನಿಂದೆಯ ಮಾತುಗಳನ್ನು ಕೇಳಿ ಕುಪಿತಳಾಗಿ, ಕುರುಡನು ಕನ್ನಡಿಯನ್ನು ನೋಡದಿದ್ದರೆ ಕನ್ನಡಿಗೆ ಕಳಂಕವೆ ? ಹಾಗೆ ಸರ್ವಜ್ಞನಾದ ಶಂಕರನ ಮಹಿಮೆಯನ್ನು ನೀನು ಅರಿಯದಿದ್ದರೆ ಇದು ಆ ಮೃತ್ಯುಂಜಯನಿಗೆ ನ್ಯೂನತೆಯೆ ? ತಂದೆಯೇ, ಎಂತಹ ಅವಿವೇಕವಾದ ಮಾತನ್ನಾಡುತ್ತಿರುವೆ ? ಇದನ್ನು ನೋಡಿದರೆ ನಿನಗೆ ಕಡೆಗಾಲವು ಬಂದಂತೆ ತೋರುತ್ತದೆ. ಇದನ್ನು ಆಡುವ ನೀನೂ, ಲಾಲಿಸಿ ಸೈರಿಸಿದ ಈ ಸಭಿಕರೂ, ಶಿವಕೋಪದಿಂದ ನಾಶವಾಗತಕ್ಕವರೇ ಸರಿ ಎಂದು ಶಪಿಸಿದಳು. ಮೊದಲೇ ದಧೀಚಿಯ ಶಾಪದಿಂದ ದಗ್ಧರಾಗಿದ್ದ ಆ ದಕ್ಷಾದಿಗಳು ಈಗ ದಾಕ್ಷಾಯಣಿಯ ಶಾಪದಿಂದಲೂ ಹತರಾದರು. ಇದು ಸುಟ್ಟುದನ್ನು ಮತ್ತೆ ಸುಟ್ಟಂತಾಯಿತು.

ದಾಕ್ಷಾಯಣಿಯ ಈ ಶಾಪದ ಮಾತುಗಳನ್ನು ಕೇಳಿ ದಕ್ಷನಿಗೆ ಕೋಪವು ತಲೆಗೆ ಹತ್ತಿತು. ಆಗ ಕೋಪಾಟೋಪದಿಂದ ಅವನು ಮಿತಿಮೀರಿ ದನು. ಆಗ ಸಭೆಯಲ್ಲಿದ್ದ ವಿಷ್ಣು, ಬ್ರಹ್ಮ, ಇಂದ್ರ ಮೊದಲಾದವರ ಮುಂದೆ ಶಿವನನ್ನು ಮನಬಂದಂತೆ ನಿಂದಿಸಿ ಪರಿಹಾಸ್ಯಮಾಡಿದನು. ಈ

ಪರಿಸ್ಥಿತಿಯು ದಾಕ್ಷಾಯಣಿಗೆ ಮಿತಿಮೀರಿದ ಸಂತಾಪವನ್ನುಂಟುಮಾಡಿತು. ಅವಳು ಮನಸ್ಸಿನಲ್ಲಿ ಬಹಳವಾಗಿ ನೊಂದುಕೊಂಡು ಘುಡುಘುಡಿಸಿದಳು. ೬೬

ಆಗ ಶಿವಪತ್ನಿಯು, ಎಲೈ ದಕ್ಷಪಿತಾಮಹನೆ, ನೀನು ಇದುವರೆಗೆ ಮಾಡಿದ ಅನಂತ ಅಪರಾಧಗಳನ್ನು ಕ್ಷಮಿಸಿದೆನು. ಪತಿಯಾದ ಶಿವನ ನಿಂದೆಯನ್ನು ನಾನು ಸೈರಿಸಲಾರೆನು. ಶಿವದ್ವೇಷಿಯಾದ ನಿನಗೆ ನಾನು ಮಗಳಾಗಲಾರೆನು. ಆದ್ದರಿಂದ ನಿನ್ನ ಸಂಬಂಧವಾದ ಶರೀರವನ್ನು ತ್ಯಜಿಸುವೆನು. ಈ ನಿನ್ನ ಶಿವದ್ವೇಷಕ್ಕೆ ತಕ್ಕ ಪ್ರಾಯಶ್ಚಿತ್ತವಾಗುವುದು. ಅದನ್ನು ನೀನು ಅನುಭವಿಸದೆ ಗತಿಯಿಲ್ಲ. ಎಂದು ಹೇಳಿ ತರುಣೇಂದು ಧರನ ಸತಿಯಾದ ದಾಕ್ಷಾಯಣಿಯು ಆತ್ಮಾಹುತಿಗೆ ಸಿದ್ಧಳಾದಳು. ೬೭

ಅನಂತರ ಪತಿವ್ರತೆಯರ ಮನೆದೈವವಾದ ಆ ಮಹಾತಾಯಿಯು ಭುಗಿಲ್‌ಭುಗಿಲ್ ಎಂದು ವಿಜೃಂಭಿಸುತ್ತಿರುವ ಅಗ್ನಿಕುಂಡವನ್ನು ನಿಟ್ಟಿಸಿನೋಡಿ, ಬಿಸಿಯು ಮೂರುಲೋಕವನ್ನುವ್ಯಾಪಿಸಲು, ಅಗ್ನಿಯು ನಡುಗಲು, ಅಂತಃ ಕುಂಡಲಿಯಲ್ಲಿ ಯೋಗಮಾರ್ಗದಿಂದ ಪ್ರಾಣವನ್ನುನಿಲ್ಲಿಸಿ ಉರಿಯು ಗಗನವನ್ನು ವ್ಯಾಪಿಸುತ್ತಿರುವಲ್ಲಿ, ಸಹಸ್ರ ರವಿಪ್ರಭೆ ಬೆಳಗುವಂತೆ ಸಭಿಕರೆಲ್ಲರ ಕಣ್ಣುಗಳಿಗೆ ತಮಂಧವು ಕವಿಯಲು ಅಗ್ನಿಮುಖದಿಂದ ಆಗಸಕ್ಕೆ ಹಾರಿದಳು. ಆ ದಕ್ಷ ಸಂಬಂಧವಾದ ದೇಹವನ್ನು ತೊರೆದಳು. ೬೮

ಯಾಗಶಾಲೆಯಲ್ಲಿ ದಾಕ್ಷಾಯಣಿಯ ಈ ಪ್ರಚಂಡವಾದ ಆತ್ಮಾರ್ಪಣದಿಂದ ಎಲ್ಲರೂ ದಿಗ್ಭ್ರಾಂತರಾದರು. ಹಲವರು ಅಂಜಿ ಓಡಿದರು. ಇದನ್ನು ನೋಡಿ ದಕ್ಷನು ಎಲ್ಲರನ್ನೂ ಸಮಾಧಾನಮಾಡುತ್ತಾ, ಆ ದುರ್ದೈವಿಯ ಸಂಗದಿಂದ ಬುದ್ಧಿಗೆಟ್ಟು ಆಕಸ್ಮಿಕವಾದ ಉರಿಗೆ ಈಡಾದವಳ ವಿಯೋಗಕ್ಕಾಗಿ ಅಂಜುವಿರೇಕೆ ? ದಕ್ಷಪಿತಾಮಹನಾದ ನಾನು ಇರುವಾಗ ಯಾರ ಅಂಜಿಕೆಯೇನು ? ಎಂದು ಸಭಿಕರಿಗೆ ಧೈರ್ಯಹೇಳಿದನು. ಆಗ ಯಾಗಶಾಲೆಯ ಜನ ದಿಗ್ಭ್ರಾಂತರಾಗಿ, ಶಿವದ್ರೋಹ ವಿಧಿಯು ನಮ್ಮನ್ನು ಇಲ್ಲಿಂದ ಹೋಗಗೊಡುವುದೆಂತು ! ಎಂದು ನಿಟ್ಟುಸಿರು ಬಿಟ್ಟರು. ೬೯

7

ಇತ್ತ ದಕ್ಷಸಂಬಂಧವಾದ ದೇಹವನ್ನು ಅಗ್ನಿಮುಖದಿಂದ ನೀಗಿ ಜಗನ್ಮಾತೆಯು ಪುಟವಿಟ್ಟ ಚಿನ್ನದಂತೆ ಕೈಲಾಸಕ್ಕೆ ಬಂದು, ಮದನಾಂತಕನ ಪಾದಗಳ ಮೇಲೆ ಬಿದ್ದು, ಯಾಗಶಾಲೆಯಲ್ಲಿ ನಡೆದ ಪ್ರಸ್ತಾಪಗಳನ್ನು ತಿಳಿಸಿದಳು. ಅದನ್ನು ಕೇಳಿ ಶಿವನು ಪ್ರಳಯ ಭೈರವ ರೂಪವನ್ನು ಧರಿಸಿದನು. ಅದನ್ನು ಲೋಕದಲ್ಲಿ ಬಣ್ಣಿಸುವವರಾರು? ೭೦

(ಅಂತು ಸಂಧಿ ೧ ಕ್ಕಂ ಪದನು ೭೦ ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ)

ವೀರೇಶ ಚರಿತೆ ಕಥಾಸಾರ

——:——

(ಸಂಧಿ-೨)

ಇಂದಿನ ಶಿವನ ಕೋಪವು ಕಾಮದಹನ ಕಾಲದ, ತ್ರಿಪುರ ವಿನಾಶದ; ಅಂಧಕಾಸುರ ಮರ್ದನದ, ಯಮ ದಹನದ, ಗರಳಾಸುರ ವಿಧ್ವಂಸನದ ಕಾಲಗಳ ಕೋಪಕ್ಕಿಂತ ಎಷ್ಟೋ ಕೋಟಿಮಡಿ ಹೆಗ್ಗಿಳಾದುದೆಂದು ಲೋಕವು ಭಾವಿಸುತ್ತಿರಲು, ಶಿವನ ಶರೀರದಲ್ಲಿ ಭಯಂಕರವಾದ ಕೋಪವು ವ್ಯಾಪಿಸಿ, ಅದು ಭೋಂಕನೆ ಅವನ ಹಣೆಗಣ್ಣಿನ ಮುಗ್ಗಚ್ಚಿನ ಹಗ್ಗಿಯ ಮೊಗ್ಗರದಲ್ಲಿ ಥಳಥಳಿಸುತ್ತಿತ್ತು. ೧

ಪ್ರಳಯಕಾಲದ ಜ್ವಾಲೆಯ ಮುಚ್ಚುಳನ್ನು ತೆಗೆದಂತೆ ಶಿವನ ನಡುಗಣ್ಣೆವೆಯು ಘುಡುಘುಡಿಸುತ್ತ ಒಡೆಯಲು, ಪ್ರಚಂಡವಾದ ಕಿಡಿಗಳನ್ನು ಕೆದರುತ್ತ, ಪಳ್ಪುರಿ ಆಕಾಶವನ್ನು ತೀವುತ್ತ, ಬಿರುಬಿಸಿಯಿಂದ ಲೋಕವನ್ನು ಕಾಯಿಸುತ್ತ ಇರಲು, ಅದರ ಫಲವಾಗಿ ಶಿವನ ಜಡೆಯಲ್ಲಿದ್ದ ಗಂಗೆಯು ಮಡುಕಾದು ಉಕ್ಕಿ ಎಸರಾಯಿತು. ತಲೆಯಲ್ಲಿದ್ದ ಚಂದ್ರನು ಬೆವರಿಳಿದು ಚುಯ್ಯನೆ ಶಬ್ದಮಾಡುವ ಸುಧಾಬಿಂದುವಿನಿಂದ ಕರಗಿಹೋದನು ಎಂಬಂತಿರಲು, ಶಿವನ ಫಾಲನೇತ್ರಜ್ವಾಲೆಯಿಂದ ವೀರಕುಲಾಧೀಶ್ವರನು ಜಗತ್ತಿಗೆ ಕಾಣಿಸಿಕೊಂಡನು. ೨

ಘುಡುಘುಡು, ಧಗ ಧಗ, ಛಿಟಿ, ಛಿಟಿ, ಥಳ ಥಳ, ಭೂರ್ಭುಗಿಲ್ ಎಂಬ ಅಬ್ಬರವು ಮೂರು ಲೋಕವನ್ನು ವ್ಯಾಪಿಸುತ್ತಿರಲು, ಜಯತು ಜಯತು ಎಂದು ಗಣಕುಲವು ಕೂಗುತ್ತಿರಲು, ಸಮುದ್ರಗಳು ಉಚ್ಚಿತ್ತಿರಲು, ಗಿರಿಗಳು ನಡುಗುತ್ತಿರಲು, ಭೂಮಿಯು ಕಂಪಿಸುತ್ತಿರಲು, ಆಕಾಶವು ಅದುರಲು, ನಕ್ಷತ್ರಗಳು ಉದುರಲು, ಸೂರ್ಯ ಚಂದ್ರರು

ತಿರ್ರನೆ ತಿರುಗಲು, ಯಾಗಶಾಲೆಯ ಜನರ ಎದೆ ಒಣಗುತ್ತಿರಲು, ಥಟ್ಟನೆ ಶಿವನ ಫಾಲನೇತ್ರದಿಂದ ಭಯಂಕರ ರೂಪನಾದ ವೀರಭದ್ರನು ಸಾಕಾರವಾಗಿ ಭೂಮಿಗೆ ಲಂಘಿಸಿದನು. ೩

ಹೀಗೆ ಹಾರಿದ ಭಾರಕ್ಕೆ ಭೂಮಿಯು ಬಿರಿಯಿತು. ಆದಿಶೇಷನ ಹೆಡೆ ಮುರಿಯಿತು. ಕಮಠನ ಬೆನ್ನು ಪುಡಿಯಾಯಿತು. ಹೀಗಾಗಲು ಶಿವನ ಹಣೆಗಣ್ಣಿನಿಂದ ಜನಿಸಿದ ಆ ವೀರಭದ್ರನು ತ್ರಿಲೋಕವನ್ನು ವ್ಯಾಪಿಸುವಷ್ಟು ವಿಸ್ತಾರವಾಗಿ ಮುಂದೆ ನಿಂತುದನ್ನು ಕಂಡು ಜನ್ಮದಾತನಾದ ಶಿವನೇ ಬೆರಗಾಗಿ ಹೋದನು. ೪

ಆಗ ಶಿವನು ಇದು ನನ್ನ ಶರೀರದಲ್ಲಿರುವ ಕೋಪವಲ್ಲವೆ? ಹಣೆಗಣ್ಣಿನಿಂದ ಉದಿಸಿದ ಮೂರ್ತಿಯಲ್ಲವೆ? ಇದೇಕೆ ಇವನಿಂತು ಉಗ್ರರೂಪವನ್ನು ಧರಿಸಿದನು? ನನ್ನ ಅಪ್ಪಣೆಯಿಲ್ಲದೆ ಇವನಿಂತು ಕೋಪಿಸಲು ಕಾರಣವೇನು? ಎಂದು ಬೆರಗಾಗಿ, ಎಲೈ ವೀರಶಿಶುವೆ, ಸೈರಿಸು ಸೈರಿಸು. ಕೋಪವಬಿಡು. ನಿನ್ನ ಪರಾಕ್ರಮವನ್ನು ಬಡಲೋಕಗಳ ಮೇಲೆ ತೋರಿಸಬೇಡ. ಶಾಂತನಾಗು ಎಂದು ಹೇಳಲು, ಅಂತೆಯೇ ಆ ಉಗ್ರಮೂರ್ತಿಯು ಶಾಂತಮೂರ್ತಿಯಾಯಿತು. ೫

ಆ ಶಿವನ ಪಾಲನೇತ್ರದಿಂದ ಹುಟ್ಟಿದ ಆ ದಿವ್ಯಮೂರ್ತಿಯು ಬೆಂಕಿಯ ಮೈಬಣ್ಣದಿಂದಲೂ, ನಿಡುಜಡೆಮುಡಿಯಿಂದಲೂ, ನಡುನೆತ್ತಿಯ ಲಿಂಗದಿಂದಲೂ, ಮಕುಟ, ಮಣಿಕುಂಡಲಾದಿ ಆಭರಣಗಳಿಂದಲೂ, ಪಂಚಮುಖಗಳಿಂದಲೂ, ಸಹಸ್ರ ಭುಜಗಳಿಂದಲೂ, ಉಡುಗೆಯ ಚಲ್ಲಣದಿಂದಲೂ ಅನಂತ ದಿವ್ಯಾಯುಧಗಳಿಂದಲೂ, ಉರಿಗಣ್ಣಸ್ನು ಕೆದರುವ ನೋಟದಿಂದಲೂ ಪರಿಶೋಭಿಸುತ್ತಿತ್ತು. ಇಂತಹ ಆ ವೀರೇಶನ ನಿಲುವು ಯಾರನ್ನು ತಾನೇ ನಡುಗಿಸದು? ೬

ಯಮನ ಓಲಗ ಶಾಲೆಯಿಂದ ಹೊರಡುವ ಬಂಟರೋ? ಧನಂಜಯನ ಬತ್ತಳಿಕೆಯಿಂದ ಹೊರಡುವ ಕ್ರೂರವಾದ ಬಾಣಗಳೋ? ವಿಷದ ಹುತ್ತದಿಂದ ಹೊರಡುವ ಕ್ರೂರವಾದ ಸರ್ಪಗಳ ಸಮೂಹವೋ? ಎಂಬಂತಿರುವ

ಅಸಂಖ್ಯಾತ ಭೂತಗಣವು ಆ ವೀರಭದ್ರನ ಸಂಕಲ್ಪ ಮಾತ್ರದಿಂದ ಹುಟ್ಟಿ ಬರುತ್ತಿತ್ತು. ಈ ಕಳಕಳ ಧ್ವನಿಯಿಂದ ಶಿವನ ಕಿವಿಯು ಕಿವುಡಾಗಿ ಹೋಗುವಂತಿತ್ತು. ೭

ಈ ಪ್ರಕಾರವಾದ ಸೂರ್ಯಚಂದ್ರರನ್ನು ಒಡವೆಗಳನ್ನಾಗಿಯುಳ್ಳ, ರಾಕ್ಷಸರ ತಲೆಗಳನ್ನು ಗೆಜ್ಜೆಯ ಸರವನ್ನಾಗಿಯುಳ್ಳ, ಮೃತ್ಯು ರೂಪನಾದ ಹಲಗೆಯ ಕಡುಗಲಿ ವೀರಭದ್ರನು ಶಿವನ ಮುಂದೆ ಪರಿಶೋಭಿಸಿದನು. ೮

ಈ ವೀರಭದ್ರ ಮೂರ್ತಿಯು ಪ್ರಚಂಡವಾದ ಕಾಲಪುರುಷನ ಉಗ್ರ ವಾದ ಕೋಪದ ಬಂಟನು, ಪ್ರಳಯಕಾಲದ ಬೆಂಕಿಯಿಂದ ಕಾಯಿಸಿ, ರಾಹು ಕೇತುಗಳೆಂಬ ಇಕ್ಕಳಿನ ಸಹಾಯದಿಂದ, ಅಂಧಕಾಸುರನ ಎದೆಗಲ್ಲಿನ ಮೇಲೆ, ವಜ್ರದ ಚಮ್ಮಟಿಗೆಯಿಂದ ಹೊಡೆದು, ಕ್ರೂರಸರ್ಪನ ವಿಷದ ನೀರನ್ನು ಉಣಿಸಿ, ಸೂರ್ಯಮಂಡಲದಲ್ಲಿ ಮಸೆದು, ಎಳೆಮಿಂಚಿನಲ್ಲಿ ಪುಟಗೊಟ್ಟು ಮಾಡಿದ ಉಗ್ರರೂಪಿನ ವಿಗ್ರಹವೋ ಎಂಬಂತೆ ಅವನು ಶೋಭಿಸಿದನು. ಅದನ್ನು ನಾನು ಏನೆಂದು ಬಣ್ಣಿಸಲಿ? ೯

ಆಗ ಶ್ರೀ ವೀರಭದ್ರನು ದಿಗ್ಗಜಗಳು ಕಂಪಿಸುತ್ತಿರಲು ತನ್ನ ಧೀರ ಪ್ರತಿಜ್ಞೆಯನ್ನು ಇಂತೆಂದು ನಿರೂಪಿಸಿದನು:— ೧೦

ಎಲೈ ದೇವರ ಬಲ್ಲಹನಾದ ಶಂಕರನೆ, ಅಪ್ಪಣೆಯನ್ನು ನಿರೂಪಿಸು. ಇಂದ್ರ, ಅಗ್ನಿ, ಯಮ, ವರುಣಾದಿಗಳ ತಲೆಗಳನ್ನು ಕಡಿದು ನಿನ್ನ ಪಾದ ಸನ್ನಿಧಿಗೆ ತಂದೊಪ್ಪಿಸಲೋ? ನಿನ್ನ ಅನುಗ್ರಹರೂಪವಾದ ನನ್ನ ಈ ಪರಾಕ್ರ ಮಕ್ಕೆ ಯಾವುದನ್ನು ಬಲಿಗೊಡಲಿ? ಹೇಳು ಎಂದು ಉಗ್ಗಡಿಸಿದನು. ೧೧

ಭೂಮಿಯನ್ನು ಬಗೆಯಲೋ? ಆದಿಶೇಷನನ್ನು ಕೊಲ್ಲಲೋ? ಸಮು ದ್ರವನ್ನು ಕುಡಿಯಲೋ? ಬಡಬಾಗ್ನಿಯನ್ನು ಹಿಡಿಯಲೋ? ವಿಷ್ಣು ಬ್ರಹ್ಮಾದಿಗಳನ್ನು ಹೊಡೆಯಲೋ? ಕುಲಗಿರಿಗಳನ್ನು ಪುಡಿಮಾಡಲೋ? ಬ್ರಹ್ಮಾಂಡದ ಕೀಲುಗಳನ್ನು ಕಿತ್ತು ಬಿಡಲೋ? ನಕ್ಷತ್ರಗಳನ್ನು ಪುಡಿಮಾ ಡಲೋ? ಓ ಶಿವನೇ, ನನ್ನ ಕರ್ತವ್ಯವೇನೆಂಬುದನ್ನು ನನ್ನಾಣೆ ಹೇಳು ಎಂದು ವೀರಭದ್ರನು ವಿಜೃಂಭಿಸಿದನು. ೧೨

ಆಗ ಪರಶಿವನು ಅವನನ್ನು ಸಮಾಧಾನಮಾಡಿ, ಅಯ್ಯಾ ನಿನ್ನನ್ನು ದಕ್ಷಯಾಗದ ವಿನಾಶಕ್ಕಾಗಿ ಕಳಿಸಿಕೊಡುವೆನು. ವೇದವಿರೋಧಿಯಾದ, ಅಹಂಕಾರ ರೂಪಿ ಆ ದಕ್ಷನನ್ನೂ, ಅವನ ಅನುಯಾಯಿಗಳನ್ನೂ ಸದೆಬಡಿಯುವುದೇ ನಿನ್ನ ಅವತಾರದ ಮುಖ್ಯೋದ್ದೇಶ. ಆದ್ದರಿಂದ ಸಮಾಧಾನನಾಗು ನಿನ್ನನ್ನು ತಕ್ಕ ಕಾರ್ಯಕ್ಕೆ ಕಳಿಸಿಕೊಡುವೆನು ಎಂದು ಹೇಳಿದನು. ೧೩

ಆಗ ವೀರಭದ್ರನು ಅಪ್ಪಣೆಯನ್ನು ನಿರೀಕ್ಷಿಸುತ್ತಿರಲು ಸಪ್ತಸಮುದ್ರಗಳನ್ನು ಆಪೋಶನಮಾಡುವ ಸತ್ವಶಾಲಿಗಳಾದ ವಿಷ್ಣು ಬ್ರಹ್ಮೇಂದ್ರಾದಿ ಕಡುಗಲಿಗಳು ದಕ್ಷನ ಯಾಗದ ಸಂರಕ್ಷಣೆಗೆ ಕಂಕಣ ಕಟ್ಟಿದ್ದಾರೆ. ನೀನು ಹೋಗಿ ಆ ಶಿವದ್ರೋಹಿಯಾದ ದಕ್ಷನ ಯಾಗವನ್ನು ಧ್ವಂಸಮಾಡಿ, ಆ ವಿಷ್ಣು ಬ್ರಹ್ಮಾದಿಗಳನ್ನು ಕೊಲ್ಲದೆ, ನನ್ನೆಡೆಗೆ ಸೆಳೆದುಕೊಂಡು ಬಾ ಎಂದು ಹೇಳಿ ವೀರೇಶನನ್ನು ಪರಶಿವನು ಹರಸಿದನು. ೧೪

ಆಗ ವೀರಭದ್ರನು, ಒಡೆಯರು, ಬೆಸಸಿದ ಕರುಣಕ್ಕೆ ಹಸಾದ ಎಂದನು. ಆದರೆ, ಆ ಮುಂದಿನ ತುಮುಲಯುದ್ಧದಲ್ಲಿ ಮಲೆತ ದೇವತೆಗಳನ್ನು, ನಮ್ಮ ಗಣಂಗಳು ಚಚ್ಚದೆ ಬಿಡುವರೆ? ಶಂಕರಾ, ಇದಕ್ಕೆ ಅಪ್ಪಣೆಯೇನು ಎಂದು ಬಿನ್ನೈಸಿದನು. ೧೫

ಆಗ ಶಿವನು, ಅಹಂಕರಿಸಿದವರನ್ನು ಕೊಲ್ಲು. ಶರಣೆಂದವರನ್ನು ಕಾಯಿ. ನಿನಗೆ ತಕ್ಕುದನ್ನು ಮಾಡು. ಎಲೈ ವೀರಭದ್ರಾ, ಒಟ್ಟಿನಲ್ಲಿ ಈ ದಕ್ಷಯಾಗ ವಿನಾಶ ಕಾರ್ಯದಲ್ಲಿ ವಿವೇಕದಿಂದ ವರ್ತಿಸು, ಎಂದು ಬುದ್ಧಿ ಹೇಳುವಾಗ, ಶಿವನ ಸಂಕಲ್ಪ ಮಾತ್ರದಿಂದ ಇದ್ದಕ್ಕಿದಂತೆಯೇ ಓರ್ವ ಅಕಸ್ಮಿಕ ಸತಿಯು ಆ ಶಿವನ ಸನ್ನಿಧಿಯಲ್ಲಿ ತಲೆ ದೋರಿದಳು. ೧೬

ಹಾಗೆ ತಲೆದೋರಿದ ಆ ಭದ್ರಾಣಿಯು ಮೂರು ಉರಿಗಣ್ಣುಗಳಿಂದಲೂ, ನಂಜನ್ನು ಹೊರಸೂಸುವ ಮುಖಮುದ್ರೆಯಿಂದಲೂ, ದಶಾಯುಧಗಳಿಂದಲೂ, ಮಿಂಚನ್ನು ತಿರಸ್ಕರಿಸುವ ಅಲಂಕಾರಗಳಿಂದಲೂ ಪ್ರಾಣಗೊಂಡ ನೀಲಾದ್ರಿಯೋ ಎಂಬಂತೆ ಸಂಶೋಭಿಸಿದಳು. ೧೭

ಆಗ ಶಿವನು ಅನುರೂಪರಾದ ಆ ವೀರಭದ್ರನಿಗೂ, ಭದ್ರಕಾಳಿಗೂ, ಮದುವೆಯನ್ನು ಮಾಡಿ ಅವರನ್ನು ಹರಸಿದನು. ಅವರೀರ್ವರೂ ಶಿವನ ಪಾದಕ್ಕೆ ಬಲಗೊಂಡು ಪ್ರಯಾಣ ಸಿದ್ಧರಾದರು. ೧೮

ಹೀಗೆ ವೀರಭದ್ರನು ದಕ್ಷಯಾಗ ವಿನಾಶಕ್ಕೆ ಶಿವನಿಂದ ಅಪ್ಪಣೆಯನ್ನು ಪಡೆದುಕೊಂಡು ಹೊರಟುದನ್ನು ಕಂಡು, ನಾರದನು ಕುಣಿದನು. ಮರುಳುಗಳು ನಲಿದುವು. ಶಾಕಿನಿ, ಢಾಕಿನಿಯರು ಹಿಗ್ಗಿದರು. ಮೃತ್ಯು ಸತಿ ನಲಿದಳು. ಯಮನು ತನ್ನ ಪಟ್ಟಣದ ದಾರಿಯನ್ನು ಸರಿಪಡಿಸಿದನು. ಇತ್ತ ಯಾಗಮಂಟಪದಲ್ಲಿ ಅನಂತ ಅಪಶಕುನಗಳಾದುವು. ೧೯

ವೀರಭದ್ರನು ಕೈವೀಸಿ ಭುಜವನ್ನು ತಟ್ಟಕರೆದ ಕೂಡಲೇ ಅಸಂಖ್ಯಾತ ಭೂತಗಣಗಳು ಅವನ ಹಿಂದೆ ಹೊರಟವು. ಆ ಅಪಾರವಾದ ಸೈನ್ಯದ ಭಾರಕ್ಕೆ ಭೂಮಿ ಕಂಪಿಸಿತು. ಬೆಟ್ಟಗಳು ಪುಡಿಯಾದುವು. ಅಂದಮೇಲೆ ಅದನ್ನು ಬಣ್ಣಿಸುವುದಾದರೂ ಎಂತು ? ೨೦

ಆ ವೀರಭದ್ರನ ಸೈನ್ಯವು, ಕುಲಗಿರಿಗಳನ್ನು ಕೈಗುಂಡುಗಳನ್ನಾಗಿ ಮಾಡಿಕೊಂಡು, ಬ್ರಹ್ಮಾಂಡಗಳನ್ನು ಚೆಂಡುಗಳನ್ನಾಗಿ ಮಾಡಿಕೊಂಡು, ದಿಗ್ಗಜಗಳ ದಂತ, ಯಮನ ಕೋಣನಕೋಡು ಇವುಗಳಿಂದಾದ ಬಡಿಗೆಗಳನ್ನು ಹಿಡಿದ್ದುಕೊಂಡು, ಸೂರ್ಯಚಂದ್ರರನ್ನು ತಾಳಗಳನ್ನಾಗಿ ಮಾಡಿಕೊಂಡು ವೀರೇಶನ ಅಕ್ಕಪಕ್ಕದಲ್ಲಿ ಬರುತ್ತಿತ್ತು. ೨೧

ಆ ವೀರ ಸೈನಿಕರು ಹಿಡಿದ ಕೊಡೆಗಳು, ಸೂರ್ಯಚಂದ್ರರ ಪ್ರಕಾಶವನ್ನು ಮುಚ್ಚಿ ಜಗತ್ತನ್ನು ಅಂಧಕಾರಮಯವಾಗಿ ಮಾಡಿದುವು. ಆದರೆ, ಆ ಪಟುಭಟರ ಕೈಗತ್ತಿಗಳ ಪ್ರಕಾಶವು ಲೋಕಕ್ಕೆ ಬೆಳಕನ್ನುಂಟುಮಾಡಿತು ಎಂಬಂತೆ ಆ ಶಿವಗಣಂಗಳ ಸೈನ್ಯವು ಕಣ್ಣಿಗೆ ಶೋಭಿಸಿತು. ೨೨

ಮಾರ್ಗದಲ್ಲಿ ವಂದಿಮಾಗಧರು ದಾರಿಯನ್ನು ಬಿಡಿ ಬಿಡಿ, ಹರನ ಉರಿಗಣ್ಣಿನ ಮಗ ಬರುತ್ತಿದ್ದಾನೆ, ತೊಲಗಿ ತೊಲಗಿ, ಶಿವದೂಷಕಗಜಸಿಂಹನು ಬರುತ್ತಿದ್ದಾನೆ, ಎಂದು ಉದ್ಘೋಷಿಸುತ್ತಿರಲು ಸೇನಾ ಸಂಭ್ರಮದಿಂದ ಗಣಂಗಳ ಸೈನ್ಯವು ದಕ್ಷನ ಯಾಗಶಾಲೆಯ ಕಡೆಗೆ ಧಾವಿಸಿ ಬರುತ್ತಿತ್ತು. ೨೩

ಈ ಪ್ರಸಂಗದಲ್ಲಿ ಕಲಹಾಶನನಾದ ನಾರದನು ಒಂದು ಹಂಚಿಕೆಯನ್ನು ಚಿಂತಿಸಿದನು. ಏನೆಂದರೆ, ಈ ಗಣಗಳು ಒಂದೇ ಬಾರಿ ಯಾಗಶಾಲೆಯ ಮೇಲೆ ಬಿದ್ದು ದೇವತೆಗಳನ್ನು ಕೊಂದು ಹಾಕಿದರೆ, ತುಮುಲ ಯುದ್ಧ ನಡೆದಂತಾಗುವುದಿಲ್ಲ. ಆದರಿಂದ ನನ್ನ ಕಣ್ಣಿನ ಹಬ್ಬ ತೀರಿದಂತಾಗುವುದಿಲ್ಲ. ಅದು ಕಾರಣ, ನಾನು ಮೊದಲೇ ದಕ್ಷನಿಗೆ ಈ ವಾರ್ತೆಯನ್ನು ತಿಳಿಸಿ ಅವನನ್ನು ಯುದ್ಧಕ್ಕೆ ಪ್ರೋತ್ಸಾಹಿಸಬೇಕು ಎಂದು ನಿಶ್ಚೈಯಿಸಿದನು. ಅಂತೆಯೇ ಯಾಗಶಾಲೆಗೆ ಓಡಿಬಂದು ಎಲೋ ಮೂರ್ಖನಾದ ದಕ್ಷನೇ, ಈ ಮಣ್ಣಿನ ಯಾಗವನ್ನು ಯಾಕೆ ಕೈಕೊಂಡೆ? ಯುದ್ಧಕ್ಕೆ ಸಿದ್ಧನಾಗು. ಪ್ರಬಲನಾದ ಶತ್ರು ಯುದ್ಧಕ್ಕೆ ಬರುತ್ತಿದ್ದಾನೆ ಎಂದು ಹೇಳಿದನು. ೨೪

ಆಗ ನಾರದನ ಮಾತನ್ನು ಕೇಳಿ ದಕ್ಷ ಪಿತಾಮಹನು, ದೇವತೆಗಳನ್ನು ಕುರಿತು ರಾತ್ರಿಯು ಮುಳಿದು ಸೂರ್ಯನನ್ನು ಮಾಡುವುದಾದರೂ ಏನು? ಅಂತೆಯೇ ಆ ಬಡ ಶಿವಗಣಗಳು ಬಂದು ನಮ್ಮ ಪ್ರಚಂಡವಾದ ದೇವತೆಗಳ ಸೇನೆಯನ್ನು ಜಯಿಸುವುದಾದರೂ ಎಂತು? ಎಂದು ಗ್ರಹಿಸಿ ಸೊಕ್ಕಿನಿಂದ ಮಾತನಾಡಿದನು. ೨೫

ವೀರಭದ್ರನ ಆಗಮನ ವಾರ್ತೆಯನ್ನು ಕೇಳಿ ವಿಷ್ಣು ಬ್ರಹ್ಮದೇವೇಂದ್ರಾದಿಗಳೇ ಏಳಿರಿ, ಯುದ್ಧಕ್ಕೆ ಸಿದ್ಧರಾಗಿರಿ, ಆ ಬಡಶಿವನ ಬಲವೆಷ್ಟೆಂಬುದನ್ನು ನಾನು ಬಲ್ಲೆ! ಅವರ ಹಣೆಯಕ್ಕರವನ್ನು ಒರಸಿಬಿಡುತ್ತೇನೆ. ಎಂದು ಹೇಳುತ್ತ ತೊಡೆಯನ್ನು ತಟ್ಟಿ, ತನ್ನ ಸೈನಿಕರು ಸಿದ್ಧರಾಗಲು ಯುದ್ಧದ ಡಂಗುರವನ್ನು ಹೊಡೆಸಿದನು. ೨೬

ಅತ್ತ ವೀರಭದ್ರನ ಸೈನ್ಯವು ಅತ್ಯಂತ ಲಗುಬಗೆಯಿಂದಲೂ, ವೀರಾವೇಶದಿಂದಲೂ ಯಾಗಶಾಲೆಯ ಕಡೆಗೆ ನುಗ್ಗಿ ಮುಂದೆ ಬರುತ್ತಿತ್ತು. ೨೭

ಎರಡು ಪಕ್ಷಗಳಲ್ಲಿಯೂ, ಆನೆ, ಕುದುರೆ, ರಥ, ಪದಾತಿ ಮೊದಲಾದ ಚತುರಂಗ ಬಲಗಳು ಕಾಳಗಕ್ಕೆ ಸಿದ್ಧವಾದುವು. ೨೮

ವೀರಭದ್ರನ ಸೈನ್ಯದಲ್ಲಿ ವಾಯುವೇಗಕ್ಕಿಂತಲೂ ಇಮ್ಮಡಿ, ಮುಮ್ಮಡಿ, ನಾಲ್ಮಡಿ, ಐವಡಿ ವೇಗವುಳ್ಳ ಕುದುರೆಗಳ ಸೈನ್ಯವು ಪುಂಖಾನು ಪುಂಖವಾಗಿ ಬರುತ್ತಿತ್ತು. ೨೯

ಇತ್ತ ದಕ್ಷನ ಸೈನ್ಯಕ್ಕೆ ಮುಖಂಡರಾದ ವಿಷ್ಣು ಬ್ರಹ್ಮೇಂದ್ರಾದಿ ಅತಿರಥ ಮಹಾರಥರು ಶಸ್ತ್ರಸಜ್ಜಿತರಾಗಿ ಯುದ್ಧಕ್ಕೆ ಸಿದ್ಧರಾದರು. ೩೦

ಆ ಯುದ್ಧಭೂಮಿಯಲ್ಲಿ, ಗರಗಸ, ಕತ್ತಿ, ಕೊಂತ, ಗಂಡಸಿ, ನಖ, ಚಕ್ರ, ಪರಶು, ಫಳಕ, ಕುಠಾರ, ಬಡಿಗೆ, ಖೇಟಗ, ಕೈಗಲ್ ಮೊದಲಾದ ಬಗೆಬಗೆಯ ಆಯುಧಗಳನ್ನು ಹಿಡಿದು, ವೀರರಾದ ದೇವತೆಗಳು ಸಿಂಹನಾದ ಮಾಡಿದರು. ೩೧

ಆಗ ವಿಷ್ಣು ಬ್ರಹ್ಮಾದಿಗಳು ವ್ಯೂಹರಚನೆಯೇ ಮೊದಲಾದಗವುಳಿಂದ ತಮ್ಮ ಸೈನ್ಯ ಬಲವನ್ನು ಹೆಚ್ಚಿಸುತ್ತಿದ್ದರು. ೩೨

ಈ ಪ್ರಕಾರ ಮುಂದಕ್ಕೆ ಸಿದ್ಧವಾಗಿರುವ ದೇವತೆಗಳ ಸೈನ್ಯವು ಬಿರುಗಾಳಿಯ ಮುಂದಣ ಮೇಘಾವಳಿಯಂತೆ ತೋರಿಬರುತ್ತಿತ್ತು. ೩೩

ಅತ್ತ ಸೂರ್ಯೋದಯದಿಂದ ಕತ್ತಲೆಯು ದಿಕ್ಕೆಡುವಂತೆ ವೀರಭದ್ರನ ಸೈನ್ಯವು ದೇವತೆಗಳಿಗೆ ಎದುರಾದ ಕೂಡಲೇ ಊಹಾತೀತವಾದ ಆ ಸೈನ್ಯ ರಾಶಿಯನ್ನು ಕಂಡು ದೇವಪ್ರಮುಖರ ಎದೆ ಬಿರಿದುಹೋಯಿತು. ೩೪

ಯುದ್ಧವು ಮೊದಲಾದ ಕೂಡಲೇ ವಿಷ್ಣುವು ಸಿಂಹವನ್ನು ಕಂಡ ಆನೆಯಂತೆ ವೀರಭದ್ರನನ್ನು ಕಂಡು ಘಾಬರಿಯಾಗಿ ತನ್ನ ಚಕ್ರವನ್ನು ಬ್ರಹ್ಮನ ತಲೆಗಿಟ್ಟನು. ಇಂದ್ರನು ವರುಣನನ್ನು ಹೊಡೆದನು. ವರುಣನು ಕುಬೇರನ ಮೇಲೆ ಬಿದ್ದನು. ಹೀಗೆ ಶಿವನ ಮಾಯೆಯಿಂದ ದೇವತೆಗಳು ತಮ್ಮ ತಮ್ಮಲ್ಲಿಯೇ ಹೊಡೆದಾಡಿ ಯುದ್ಧದಲ್ಲಿ ಪರಾಜಿತರಾಗಿ ಓಡ ಲಾರಂಭಿಸಿದರು. ೩೫

ಯುದ್ಧಾತುರರಾದ ದೇವಪ್ರಮುಖರ ದಿವ್ಯಾಸ್ತ್ರಗಳನ್ನು ಭೂತಗಣ ಗಳು ಆವೇಶದಿಂದ ಕಿತ್ತು ಬಿಸಾಡುತ್ತಿದ್ದುವು. ೩೬

ಈ ಪ್ರಕಾರ ದೇವತೆಗಳು ವಿಜಯದ ಆಶೆಯನ್ನು ತೊರೆದು ಅಂಜಿ ಓಡಲಾರಂಭಿಸಿದರು. ೩೮

ಆಗ ವಿಷ್ಣುವು ಎರಳೆಯ ರೂಪವನ್ನು ಧರಿಸಿ ಓಡಿದನು. ೩೯

ಆಕ್ಷಣ ವೀರಭದ್ರನು ಜಿಂಕೆಯ ರೂಪದ ವಿಷ್ಣುವಿನ ಮೇಲೆ ಕ್ರೂರವಾದ ಬಾಣವನ್ನು ಹೊಡೆದನು. ಆ ಬಾಣವು ಜಿಂಕೆಯನ್ನು ಕೊಂದಿತು. ವಿಷ್ಣುವಿನ ಈ ಪರಿಸ್ಥಿತಿಯನ್ನು ಕಂಡು ವೀರಭದ್ರನು ನಸುನಕ್ಕನು. ೪೦

ಆಗ ಗಣಂಗಳು, ಜಯ ರಿಪುಕೋಲಾಹಲ, ಜಯ ಭವಬಾಳಾಂಬಕ ಸಂಭವ ಎಂದು ಮೊದಲಾಗಿ ವೀರಭದ್ರನನ್ನು ಸ್ತುತಿಸಿದರು. ೪೧

ಆಗ ಎಲ್ಲ ವಿಧದಿಂದಲೂ ಪರಾಜಿತನಾದ ವಿಷ್ಣುವು ತನ್ನ ನಿಜರೂಪವನ್ನು ಧರಿಸಿ ವೀರಭದ್ರನನ್ನು ದೈನ್ಯದಿಂದ ಮರೆಹೊಕ್ಕನು. ೪೨

ಆಗ ನಾಕದ ನಾಣಿಲಿಗಳಾದ ಶಕ್ರಾದಿಗಳ ಅಭಿಮಾನವನ್ನು ಭಂಗಪಡಿಸಿ ದಕ್ಷನ ಯಾಗಶಾಲೆಯ ಕಡೆಗೆ ವೀರೇಶನು ತಿರುಗಿದನು. ೪೩

ಆಗ ಒಬ್ಬ ದೂತನು ಓಡಿಬಂದು, ದಕ್ಷನನ್ನು ಕುರಿತು, ಎಲೈ ದಕ್ಷಾ, ವಿಷ್ಣು ಬ್ರಹ್ಮಾದಿಗಳೂ, ದೇವಪ್ರಮುಖರೂ ಸೋತು ಹೋದರು. ವೀರೇಶನು ಯಾಗಶಾಲೆಯ ಕಡೆಗೆ ಬರುತ್ತಿರುವನು. ಯುದ್ಧಕ್ಕೆ ಸಿದ್ಧನಾಗು ಎಂದನು. ಆಗ ಮೂರ್ಖನಾದ ದಕ್ಷನು ಹೂಂ! ಸತ್ತವರು ಸಾಯಲಿ. ಹೋಮವು ನಡೆಯಲಿ. ಗಣಂಗಳು ಇಲ್ಲಿಗೆ ಬಂದರೆ ನಾನು ಕೈದೋರುವೆನು ಎಂದನು. ೪೪

ಅಷ್ಟು ಹೊತ್ತಿಗೆ ವೀರಭದ್ರನ ಸೈನಿಕರು ಬಂದು ಯಜ್ಞಶಾಲೆಯ ಮೇಲೆ ಉಗ್ರವಾಗಿ ಲಗ್ಗೆ ಮಾಡಿದರು. ೪೫

ಅನಂತರ ಕಡುಗಲಿಯಾದ ವೀರೇಶನು ಘುಡುಘುಡಿಸುತ್ತ ಬಂದು ಯಜ್ಞ ದೀಕ್ಷಿತನಾಗಿ ಕುಳಿತಿರುವ ದಕ್ಷನ ತಲೆಯನ್ನು ಹಿಡಿದು, ಕೈಖಡ್ಗ

ದಿಂದ ಕತ್ತರಿಸಿ ಶಿವದ್ರೋಹಿಯಾದ ನಿನಗೆ ಇದು ತಕ್ಕ ಪ್ರಾಯಶ್ಚಿತ್ತವೆಂದು ಅವನ ತಲೆಯನ್ನು ಅಗ್ನಿಕುಂಡದಲ್ಲಿ ಹಾಕಿ ಸುಟ್ಟುಬಿಟ್ಟನು. ಅಲ್ಲದೆ ಆ ದಕ್ಷಯಾಗಕ್ಕೆ ಸಹಾಯನಾದ ಅಗ್ನಿಯನ್ನೂ ಶಿಕ್ಷಿಸಿದನು. ೪೬

ವೀರಭದ್ರನ ಕಿಂಕರರು ವಾಣಿಯ ಕಿವಿಯನ್ನು ಕುಯ್ದರು. ಮುನಿಗಳ ಮಾಸೆಗಳಿಗೆ, ಗಡ್ಡಗಳಿಗೆ ಉರಿ ಹಚ್ಚಿದರು. ದೇವಸ್ತ್ರೀಯರನ್ನು ಸೆರೆ ಹಿಡಿದರು. ದಕ್ಷನ ಮುಂಡವನ್ನು ಚಂಡಿನಂತೆ ಒದ್ದಾಡಿದರು. ಆ ಯಾಗ ಶಾಲೆಯನ್ನು ಧ್ವಂಸಮಾಡಿದರು. ೪೭

ಆಗ ದಕ್ಷನ ಪತ್ನಿಯ ಕೋರಿಕೆಯಂತೆ, ವೀರಭದ್ರನು ಯಾಗಶಾಲೆ ಯಲ್ಲಿದ್ದ ಅಜಪಶುವಿನ ತಲೆಯನ್ನು ಕತ್ತರಿಸಿ, ದಕ್ಷನ ಮುಂಡಕ್ಕೆ ಕೂಡಿಸಿ ಅವನಿಗೆ ಕರುಣೆಯಿಂದ ಜೀವದಾನ ಕೊಟ್ಟನು. ೪೮

ಮುನಿಗಳನ್ನೂ, ದೇವಪ್ರಮುಖರನ್ನೂ, ವಿಷ್ಣುಬ್ರಹ್ಮಾದಿಗಳನ್ನೂ ಗಣಂಗಳು ಸೆರೆಹಿಡಿದರು. ೪೯

ಆಗ ವಿಜಯೋನ್ಮತ್ತರಾದ ಗಣಂಗಳೊಡನೆ ವೀರಭದ್ರನು ಕೈಲಾಸದ ಕಡೆಗೆ ಸೆರೆಸಿಕ್ಕಿದ ದಕ್ಷಾದಿಗಳು ಸಹಿತ ಅಭಿಮುಖನಾದನು. ೫೦

ಆಗ ಮಾರ್ಗಮಧ್ಯೆ, ಹರಸುವ, ಮಾರಿ, ಮಸಣಿ, ಶಾಕಿನಿ, ಢಾಕಿನಿ, ಬೇತಾಳ ಮೊದಲಾದ ಮರುಳುಗಳನ್ನು ಕಂಡು ನಗುತ್ತ ವೀರಭದ್ರನು ಮುಂದೆ ನಡೆದನು. ೫೧

ಮಾರ್ಗ ಮಧ್ಯದಲ್ಲಿ ಸ್ತ್ರೀಯರು ಕುರಿದಲೆಯ ದಕ್ಷನನ್ನು ಕಂಡು ಅಣ ಕಿಸುತ್ತ ವೀರೇಶನನ್ನು ಹರಸುತ್ತಿದ್ದರು. ೫೨

ಆಗ ಪಟುಭಟರು ವೀರಭ್ರನ ಗುಣಗಾನಮಾಡುತ್ತಿದ್ದರು. ವಿಜಯ ಸೂಚಕವಾದ ಕಹಳಾಧ್ವನಿಯಾಯಿತು ಆಗ ವೀರಭದ್ರನು ಕೈಲಾಸದ ಅರಮನೆಯನ್ನು ಹೊಕ್ಕನು. ೫೩

ವೀರಭದ್ರನು ವಿಷ್ಣುಬ್ರಹ್ಮಾದಿಗಳನ್ನು ಹೊರಗೆಬಿಟ್ಟು, ಒಳಗೆ ಹೋಗಿ ಶಿವನ ಪಾದಗಳನ್ನು ಅಪ್ಪಿ ಎಲ್ಲ ಸಂಗತಿಗಳನ್ನೂ ತಿಳಿಸಿದನು. ೫೪

ಇದು ದಕ್ಷನ ಕಿರೀಟ, ಇದು ಕಾಲನ ತೋಳು, ಇದು ಇಂದ್ರನ ಕಣ್ಣು, ಇದು ಆದಿತ್ಯನ, ಹಲ್ಲು, ಇದು ವಾಣಿಯ ಮೂಗು, ಇದು ಗದೆ,

ಇದು ಚಕ್ರ, ಇವು ಇಂದ್ರಾದಿಗಳ ಶಾಸ್ತ್ರಾಸ್ತ್ರಗಳು, ಎಂದು ಗಣಂಗಳು ಶಿವನ ಪಾದಕ್ಕೆ ದಿಗ್ವಿಜಯದ ಕಾಣಿಕೆಯನ್ನು ಒಪ್ಪಿಸಿದರು. ೫೫

ಆಗ ದಕ್ಷನು, "ಹಿಂದೆ ನಾನು ಅಜ್ಞಾನದಿಂದ ನಿಮ್ಮನ್ನು ನಿಂದಿಸಿದ್ದರಿಂದ ಇಂದು ನನಗೆ ಕುರಿಮೊಗವಾಯ್ತು. ಎಲೈ ಶಂಕರಾ, ಎನ್ನ ಅಪರಾಧವನ್ನು ಕ್ಷಮಿಸು, ನಾನು ಪಶು, ನೀನು ಪಶುಪತಿ. ಆದ್ದರಿಂದ ನೀನು ನನ್ನನ್ನು ರಕ್ಷಿಸಿ ಕಾಪಾಡು' ಎಂದು ದೈನ್ಯದಿಂದ ಬೇಡಿಕೊಂಡನು. ಆಗ ಶಿವನು ಅವನನ್ನು ಕ್ಷಮಿಸಿ, ಅವನಿಗೆ ಶತಯಜ್ಞಗಳ ಫಲವನ್ನು ಅನುಗ್ರಹಿಸಿ ಕೊಟ್ಟು ಕಾಪಾಡಿದನು. ೫೬

ಅನಂತರ ಕರುಣಾಕರನಾದ ಶಂಕರನು ಎಲ್ಲ ದೇವತೆಗಳಿಗೂ ಪ್ರಾಣದಾನ ಮಾಡಿದನು. ಅಪರಾಧಿಗಳಾದ ವಿಷ್ಣು ಬ್ರಹ್ಮಾದಿಗಳನ್ನೆಲ್ಲ ಕ್ಷಮಿಸಿ ಇನ್ನು ಮುಂದೆ ಹೀಗೆ ಅಶಾಸ್ತ್ರೀಯ ಮಾರ್ಗಗಳಲ್ಲಿ ವರ್ತಿಸದಂತೆ ಬುದ್ಧಿ ಹೇಳಿ, ಅವರಿಗೆ ತನ್ನ ಅಪರಾವತಾರ ಮೂರ್ತಿಯಾದ ಶ್ರೀ ವೀರಭದ್ರನ ಮಹಿಮೆಯನ್ನು ತಿಳಿಸಿ, ಅನುಗ್ರಹಿಸಿ, ಅವರವರ ಲೋಕಂಗಳಿಗೆ ಕಳಿಸಿದನು. ಈ ಬಗೆಯಿಂದ ಹಂಪೆಯ ಕವಿರಾಯ ಹರಿಹರನ ವರಸುತನಾದ ರಾಘವದೇವನು ಹೇಳಿದ 'ವೀರೇಶ ಚರಿತೆ' ಎಂಬ ಬಿನ್ನಪವನು ಲೋಕದ ಸದ್ಭಕ್ತರು ಲಾಲಿಸಲಿ. ೫೭

(ಮುಗಿಮುದು)

ವಿಶೇಷ ವಿಚಾರಗಳು:

೧. ವೀರಭದ್ರ :– ಇವನು ಕೈಲಾಸದ ಗಣದೇವತೆಗಳಲ್ಲಿ ಬಹಳ ಮುಖ್ಯನು. ಶಿವನ ಮೂರು ಮಂದಿ ಪುತ್ರರಲ್ಲಿ (ಗಣಪತಿ, ಕುಮಾರ, ವೀರಭದ್ರ) ಪರಿಗಣಿತನಾಗಿದ್ದಾನೆ. ವೀರಭದ್ರನ ಅವತಾರವು ಶಿವನ ಪಂಚವಿಂಶತಿ ಲೀಲೆಗಳಲ್ಲಿ ಹನ್ನೆರಡನೆಯ ಲೀಲೆಯೆಂದು ಶಿವಾಗಮಗಳಲ್ಲಿಯೂ ಶಿವಪುರಾಣಗಳಲ್ಲಿಯೂ ಹೇಳಿದೆ. ದಕ್ಷಯಾಗವನ್ನು ನಾಶಮಾಡುವ ಸಲುವಾಗಿ ಶಿವನ ಹಣೆಗಣ್ಣಿನಿಂದ ಇವನು ಜನಿಸಿದನೆಂದು ಕೆಲವು ಗ್ರಂಥಗಳಲ್ಲಿ ಹೇಳಿದೆ. ಮತ್ತೆ ಕೆಲವು ಗ್ರಂಥಗಳಲ್ಲಿ ಶಿವನು ಸತೀವಿಯೋಗ

ದಿಂದುಂಟಾದ ಕೋಪದಿಂದ ತನ್ನ ಜಡೆಯನ್ನು ಕೈಲಾಸದ ಶಿಖರಕ್ಕೆ ಅಪ್ಪಳಿಸಲು ಆದರಿಂದ ವೀರಭದ್ರನು ಜನಿಸಿದನೆಂದು ಹೇಳಿವೆ.

ವೇದಪ್ರಾಚೀನವಾದ ಶೈವಧರ್ಮದಲ್ಲಿ ವೀರಭದ್ರನು ಬಹು ಮುಖ್ಯ ವ್ಯಕ್ತಿ. ಶೈವಧರ್ಮದ ಅಂಗವಾದ ವೀರಶೈವಧರ್ಮದಲ್ಲಿ ವೀರಭದ್ರನಿಗೆ ಅಗ್ರಸ್ಥಾನವಿದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾದ ಹಲವು ವೀರಭದ್ರ ದೇವಾಲಯಗಳಿವೆ. ಶ್ರೀ ಶೈಲದ ನಾಗಲೂಟ, ಕುಂಭಕೋಣಂ ಪೆರಿಯುಮಠಂ, ಕಂಚಿಯ ಕಲ್ಲುಮಠ, ನಾಗಮಂಗಲದ ವೀರಭದ್ರ, ಬೆಂಗಳೂರಿನ ಪ್ರಳಯಕಾಲ ವೀರಭದ್ರ, ಓರುಂಗಲ್ಲಿನ ವೀರಭದ್ರ ದೇವರು, ಮಂಗಳೂರು ಜಿಲ್ಲೆಯ ಕಾರ್ಕಳದ ವೀರಭದ್ರ, ತುಮಕೂರು ವೀರಭದ್ರ, ಕೆಳದಿಯ ವೀರಭದ್ರ ದೇವರು, ಮಧುರಾಜಿಲ್ಲಾ ಪೆರ್ರೈಯೂರಿನ ವೀರಭದ್ರ, ಗೋಕರ್ಣದ ಹಾಗೂ ಕೊಲ್ಲೂರಿನ ವೀರಭದ್ರ ಮೊದಲಾದುವುಗಳನ್ನು ನಾವು ಉದಾಹರಿಸಬಹುದು. ಹಂಪೆಯಲ್ಲಿರುವ ಉದ್ಧಾನ ವೀರಭದ್ರ, ಬೆಂಗಳೂರು ಜಿಲ್ಲಾ ನಿಜಗಲ್ಲುಬೆಟ್ಟದಲ್ಲಿರುವ ಉದ್ಧಾನ ವೀರಭದ್ರ ಇವೆರಡೂ ಕರ್ಣಾಟಕದಲ್ಲಿ ಪ್ರಸಿದ್ಧವಾದ ವೀರಭದ್ರಮೂರ್ತಿಗಳು. ಈ ಉಭಯ ಮೂರ್ತಿಗಳೂ ಸುಮಾರು ಇಪ್ಪತ್ತು ಅಡಿ ಎತ್ತರವಾಗಿಯೂ, ತಕ್ಕಷ್ಟು ಅಗಲಗಿಯೂ ಇವೆ. ವೀರಭದ್ರದೇವಾಲಯಗಳಿರುವ ಕಡೆಯಲ್ಲೆಲ್ಲ ವರುಷಕ್ಕೊಮ್ಮೆ ಅಗ್ನಿಕುಂಡ ನಡೆಯುತ್ತದೆ. ಆ ಕಾಲದಲ್ಲಿ ಭಕ್ತರು ಅಗ್ನಿಯನ್ನು ಹಾಯುತ್ತಾರೆ. ಇದು ವೀರಭದ್ರನು ದಕ್ಷಯಾಗವನ್ನು ನಾಶಮಾಡಿದ ಸ್ಮಾರಕ, ವೀರಶೈವರ ಮದುವೆಗಳಲ್ಲಿ ನಡೆಯುವ ಮುಗ್ಗಳಿಕ್ಕೂ ಇದೇ ಅರ್ಥ. ವೀರಶೈವ ಸಮಾಜದಲ್ಲಿ ಇರುವ ಪಂಚಗೋತ್ರಗಳಲ್ಲಿ (ವೀರ, ನಂದಿ. ಭೃಂಗಿ, ವೃಷಭ, ಸ್ಕಂದ) ಒಂದಾದ ವೀರಗೋತ್ರಕ್ಕೆ ವೀರಭದ್ರನು ಅಧಿಪತಿಯಾಗಿದ್ದಾನೆ. ವೀರಶೈವ ಸಮಾಜಕ್ಕೆ ಪೂಜ್ಯ ಗುರುಗಳಾದ ಶ್ರೀ ಭಗವತ್ಪಾದ ರೇಣುಕಾಚಾರ್ಯರ ಪರಂಪರಾಗತವಾದ ಮಠಗಳಲ್ಲಿ ವೀರಭದ್ರ ಮೂರ್ತಿಯು ಆರಾಧ್ಯದೇವತೆಯಾಗಿದೆ. ಶ್ರೀ ಶಿವಗಂಗಾ ಮೇಲಣಗವಿ ವೀರಸಿಂಹಾಸನಮಠ, (ಬೆಂಗಳೂರು ಜಿಲ್ಲಾ) ಶ್ರೀ ರಂಭಾಪುರಿ ವೀರಸಿಂಹಾಸನಮಠ (ಚಿಕ್ಕಮಗ

ಳೂರು ಜಿಲ್ಲಾ) ಸುತ್ತೂರು ವೀರಸಿಂಹಾಸನ ಮಠ (ಮೈಸೂರು ಜಿಲ್ಲಾ) ಕುಂಭಕೋಣಂ ವೀರಸಿಂಹಾಸನ ಮಠ ಮೊದಲಾದ ಶ್ರೀ ರೇಣುಕರ ಸಂಬಂಧವಾದ ಮಠಗಳಲ್ಲೆಲ್ಲ ಇಂದಿಗೂ ಶ್ರೀ ವೀರಭದ್ರ ದೇವರು ಪ್ರಮುಖ ದೈವವೆನಿಸಿದೆ. ಇದರಿಂದ ವೀರಶೈವ ಧರ್ಮಕ್ಕೂ, ವೀರಭದ್ರ ದೇವರಿಗೂ ನಿಕಟ ಸಂಬಂಧವಿದೆಯೆಂದು ವಿದಿತವಾಗುತ್ತದೆ. ಹಿಮಾಲಯದಿಂದ ರಾಮೇಶ್ವರದವರೆಗೆ ಹಾಗೂ ಲಂಕಾದ್ವೀಪದ ಜಾಪ್ನಾದಲ್ಲಿ ವೀರಭದ್ರನ ಗುಡಿಗಳಿವೆ.

ಶ್ರೀ ವೀರಭದ್ರನಿಗೆ ೧೦೦೦ ಮುಖ, ೨೦೦೦ ಹಸ್ತ, ೩೦೦೦ ನೇತ್ರಗಳು ಎಂದು ಚೆನ್ನಬಸವಪುರಾಣದಲ್ಲಿ ಹೇಳಿದೆ. ಕೆಲವುಕಡೆ ವೀರಭದ್ರನಿಗೆ ಪಂಚಮುಖ ಸಹಸ್ರಭುಜ ಎಂಬೂ, ಮತ್ತೆ ಕೆಲವು ಕಡೆ, ಏಕಮುಖ ಮೂವತ್ತೆರಡು ಭುಜ ಎಂದೂ, ಇನ್ನೂ ಕೆಲವುಕಡೆ ಏಕಮುಖ, ಚತುರ್ಭುಜ ಎಂದೂ ಹೇಳಿದೆ. ಈ ಕಾವ್ಯದಲ್ಲಿ ರಾಘವಾಂಕನು ವೀರಭದ್ರನಿಗೆ ಪಂಚಮುಖ, ಸಹಸ್ರಭುಜ ಎಂದು ಹೇಳಿದ್ದಾನೆ. (ಪದ್ಯ. ೬. ಸಂ ೨)

ಅಲ್ಲದೆ ಕವಿಯು ವೀರಭದ್ರನನ್ನು ವೀರಕುಲಾಧೀಶ್ವರ, ಹಲಗೆಯ ಕಡುಗಲಿ ಎಂದು ಬಣ್ಣಿಸಿದ್ದಾನೆ. ಮತ್ತು ವೀರಭದ್ರನು "ನಡುನೆತ್ತಿಯ ಲಿಂಗ" ಯುಕ್ತನಾಗಿದ್ದನೆಂದು ಕವಿಯು ಹೇಳಿ, ಈ ವೀರಭದ್ರನು ಲಿಂಗಧಾರಿಯಾದ ವೀರಶೈವನೆಂದು ಸ್ಪಷ್ಟಪಡಿಸಿದ್ದಾನೆ. ಸಂಸ್ಕೃತ ಸ್ಕಾಂದಪುರಾಣದಲ್ಲಿ ವೀರಭದ್ರನು ಶ್ರೀ ಮಾರುತಿಗೆ ಲಿಂಗಧಾರಣ ಮಾಡಿದನೆಂದು ಹೇಳಿದೆ. ಬೆಂಗಳೂರು ಗವಿಪುರದಲ್ಲಿರುವ ವೀರಭದ್ರ ದೇವಾಲಯದಲ್ಲಿ ಲಿಂಗಧಾರಿಯಾದ ಮಾರುತಿಯ ವಿಗ್ರಹವನ್ನು ನಾವು ನೋಡಬಹುದು.

೨ ಭದ್ರಾಣಿ:-ಇವಳು ವೀರಭದ್ರನ ಹೆಂಡತಿ. ಇವಳನ್ನು 'ಭದ್ರಕಾಳಿ' ಎಂದು ಕೂಡ ಕರೆಯುತ್ತಾರೆ. ಇವಳು 'ದಶಾಯುಧ ಸಂಯುತೆ' ಎಂದು ರಾಘವಾಂಕನು ಹೇಳುತ್ತಾನೆ. ಇವಳು ನೀಲಾದ್ರಿಸದೃಶ ಶರೀರವುಳ್ಳವಳೆಂದು ಕವಿಗಳು ಬಣ್ಣಿಸಿದ್ದಾರೆ. ವೀರಭದ್ರನ ಕೋಪವನ್ನು ಶಾಂತಮಾಡುವ ಸಲುವಾಗಿ ಇವಳನ್ನು ಶಿವನು ಸೃಷ್ಟಿಮಾಡಿದನೆಂದೂ, ಅನುರೂಪನಾದ ವೀರಭದ್ರನಿಗೆ ಲಗ್ನಮಾಡಿದನೆಂದೂ ಪುರಾಣಗಳಲ್ಲಿ ಹೇಳಿದೆ. ಇವಳು ಆಕಸ್ಮಿಕಸತಿಯಾಗಿ ಶಿವನ ಸಂಕಲ್ಪಮಾತ್ರದಿಂದ 'ಬೊಬ್ಬಿಡುತ್ತ, ಅಬ್ಬರಿ

ಸುತ್ತ ತಲೆದೋರಿದಳು' ಎಂದು ರಾಘವಾಂಕನು ಹೇಳುತ್ತಾನೆ. (ಸಂಧಿ ೨. ಪದ್ಯ ೧೬)

೩. ದಕ್ಷಬ್ರಹ್ಮ :—ಇವನು ನವಬ್ರಹ್ಮರಲ್ಲಿ ಒಬ್ಬನು. ಇವನಿಗೆ 'ದಕ್ಷ ಪ್ರಜಾಪತಿ' ಎಂಬ ಹೆಸರೂ ಉಂಟು. ಇವನೇ ಸ್ತ್ರೀಯರ ಸಂಪರ್ಕದಿಂದ ಪ್ರಜೋತ್ಪತ್ತಿಯ ಕಾರ್ಯವನ್ನು ಮೊದಲು ಪ್ರಾರಂಭಿಸಿದುದರಿಂದ ಇವನಿಗೆ 'ಪ್ರಜಾಪತಿ' ಎಂಬ ಹೆಸರು ಪ್ರಾಪ್ತವಾಗಿದೆ. ಇವನು ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಬಲಗೈ ಹೆಬ್ಬೆಟ್ಟಿನಿಂದ ಹುಟ್ಟಿನವೆಂದು ಆದಿತ್ಯ ಪುರಾಣದಲ್ಲಿ ಹೇಳಿದೆ. ಇವನಿಗೆ ೬೦ ಮಂದಿ ಹೆಣ್ಣುಮಕ್ಕಳು, ಈ ಹೆಣ್ಣುಮಕ್ಕಳನ್ನು ಚಂದ್ರ, ಧರ್ಮಋಷಿ, ಭೃಗು, ಆಂಗಿರಸ, ಪೌಲಸ್ತ್ಯ, ಪುಲ, ಕೃತು, ಅತ್ರಿ, ವಸಿಷ್ಠ ಮೊದಲಾದವರಿಗೆ ಕೊಟ್ಟು ಲಗ್ನಮಾಡಿದ ನೆಂದು ಪುರಾಣಗಳಲ್ಲಿ ಹೇಳಿದೆ. ಇವನು ಶಿವದ್ವೇಷಮಯವಾದ ಯಾಗ ವನ್ನು ಮಾಡಿದ್ದರಿಂದ, ವೀರಭದ್ರನಿಂದ ಹತನಾದನೆಂಬ ಕಥೆ ಭಾಗವತಾದಿ ಗ್ರಂಥಗಳಲ್ಲಿಯೂ ಪ್ರಸಿದ್ಧವಾಗಿದೆ. ಈ ದಕ್ಷಯಾಗದಲ್ಲಿ ವೀರಭದ್ರನು ಇವನ ತಲೆಯನ್ನು ಕತ್ತರಿಸಿದನೆಂದೂ, ಕಡೆಗೆ ದಕ್ಷನ ಪತ್ನಿಯ ಪ್ರಾರ್ಥನೆ ಯಂತೆ ಅವನಿಗೆ ಒಂದು ಕುರಿಜು ತಲೆಯನ್ನು ಗಂಟುಹಾಕಿ ಪ್ರಾಣ ಪ್ರತಿಷ್ಠೆಮಾಡಿದನೆಂದೂ, ಆದ್ದರಿಂದ ಇವನಿಗೆ 'ಕುರಿದಲೆಯುವ' ನೆಂಬ ಹೆಸರುಂಟಾಯಿತೆಂದೂ ಪುರಾಣಗಳು ಹೇಳುತ್ತವೆ.

೪. ದಾಕ್ಷಾಯಣಿ :– ಇವಳು ದಕ್ಷಬ್ರಹ್ಮನ ಮಗಳು. ಇವಳಿಗೆ 'ಸತೀದೇವಿ' ಎಂಬ ಮತ್ತೊಂದು ಹೆಸರುಂಟು. ಇವಳು ಕೈಲಾಸದ ಪರಮೇಶ್ವರನನ್ನು ಮದುವೆಯಾಗಿದ್ದಳು. ತಂದೆಯಾದ ದಕ್ಷನು ಶಿವದ್ವೇಷಿ ಯಾಗಿ ನಿರೀಶ್ವರಯಾಗವನ್ನು ಕೈಗೊಂಡಾಗ ಅವನಿಗೆ ಬುದ್ಧಿ ಹೇಳುವ ಸಲುವಾಗಿ ಯಾಗಶಾಲೆಗೆ ಬಂದಳು. ಅಲ್ಲಿ ಶಿವನಿಂದೆಯನ್ನು ಕೇಳಲಾರದೆ ಯೋಗಾಗ್ನಿಯಲ್ಲಿ ಸುಟ್ಟುಹೋದಳು. ಮುಂದೆ ಗಿರಿರಾಜನ ಪತ್ನಿಯಾದ ಮೇನಾದೇವಿಯ ತಪಸ್ಸಿಗೆ ಮೆಚ್ಚಿ ಅವರಿಗೆ ಮಗಳಾಗಿ ಹುಟ್ಟಿದಳೆಂದು ಪುರಾಣಗಳಲ್ಲಿ ಹೇಳಿದೆ. ಈ ದಾಕ್ಷಾಯಣಿಯು ಪಾತಿವ್ರತ್ಯದ ಪರಮಾವಧಿ

ಯೆಂದೂ, ಸ್ತ್ರೀಕುಲದ ಆದರ್ಶಮೂರ್ತಿಯೆಂದೂ ಕವಿಗಳು ಬಹಳವಾಗಿ ವರ್ಣಿಸಿದ್ದಾರೆ. ಈ ಗ್ರಂಥದಲ್ಲಿ ದಾಕ್ಷಾಯಣಿಯು ಅಗ್ನಿಮುಖದಿಂದ ಕೈಲಾಸಕ್ಕೆ ಹೋದಳೆಂದು ಹೇಳಿದೆ.

೫. ಭಗವಾನ್‌ಶಂಕರ ;--ಇವನು ದಾಕ್ಷಾಯಣಿಯ ಪತಿ. ವೀರ ಭದ್ರನ ತಂದೆ. ದಕ್ಷಬ್ರಹ್ಮನ ಅಳಿಯ. ಕೈಲಾಸದ ಅಧಿಪತಿ ! ಸಮಸ್ತ ಲೋಕಗಳ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣಕರ್ತ. ವಿಷ್ಣು, ಬ್ರಹ್ಮ, ಇಂದ್ರಾದಿ ದೇವತೆಗಳು ಇವನಿಗೆ ವಿಧೇಯರು, ಇವನನ್ನು ಪರಬ್ರಹ್ಮ, ಪರಮಪುರುಷ, ಪರಮೇಶ್ವರ ಎಂದು ಮೊದಲಾಗಿ ವೇದಾಗಮಗಳು ಉದ್ಘೋಷಿಸಿವೆ. ಇವನ ಹಣೆಗಣ್ಣಿನಲ್ಲಿಯೇ ವೀರಭದ್ರನು ಹುಟ್ಟಿದನು. ಕೈಲಾಸ ಎಂಬುದು ಇವನ ರಾಜಧಾನಿ. ಶಿವಗಣಂಗಳು ಇವನ ಸಭಿಕರು. ಹಿಮಾಲಯದ ಉತ್ತರ ದಿಕ್ಕಿಗಿರುವ ಕೈಲಾಸಪರ್ವತವನ್ನು ಶಿವನ ರಾಜಧಾನಿ ಯೆಂದು ಕೆಲವರು ಹೇಳುವುದುಂಟು.

ದಧೀಚಿ :--ಇವನು ಪ್ರಾಚೀನಕಾಲದ ಪರಿಶುದ್ಧ ಋಷಿಗಳಲ್ಲಿ ಪ್ರಸಿದ್ಧನಾದವನು. ಇವನು ಉಗ್ರ ಶಿವಭಕ್ತ. ದಕ್ಷನ ಯಾಗಶಾಲೆಯಲ್ಲಿ ಶಿವನು ಇಲ್ಲದಿರುವುದನ್ನು ಕಂಡು, ಆ ಯಾಗವು ನಾಶವಾಗುವಂತೆ ಶಪಿಸಿ ದನು. ಹಲವು ವೀರಶೈವ ಗ್ರಂಥಗಳಲ್ಲಿ ಇವನಿಗೆ ಲಿಂಗಧಾರಣವಾಗಿದೆ. ಪ್ರಾಚೀನ ಶೈವಧರ್ಮದ ಉದ್ಧಾರಕರಲ್ಲಿ ದಧೀಚಿಯು ಒಬ್ಬನೆಂದು ಹೇಳ ಬಹುದು. ಇವನು ಪಂಪಾಕ್ಷೇತ್ರದಲ್ಲಿ ತನ್ನ ಆಶ್ರಮವನ್ನು ಮಾಡಿಕೊಂಡಿದ್ದ ನೆಂದು ಕವಿ ರಾಘವಾಂಕನು (ದೇಶಾಭಿಮಾನದಿಂದ) ಹೇಳಿದ್ದಾನೆ ಈ ವೀರೇಶ ಚರಿತೆಯಲ್ಲಿ (ಸಂಧಿ-೧, ಪದ್ಯ ೪೩)

೭. ನಾರದ :-ಇವನು ಹಿಂದುಗಳ ಪುರಾಣಗಳಲ್ಲಿ ಅತ್ಯಂತ ಪ್ರಸಿದ್ಧನಾದ ಮಹರ್ಷಿ. ಇವನು ಬ್ರಹ್ಮಮಾನಸಪುತ್ರನು. ನೈಷ್ಠಿಕ ಬ್ರಹ್ಮಚಾರಿ. ಇವನನ್ನು ಕವಿಗಳು ಉದಂತವೇದಿ, ಕಲಹಾಶನ, ಕಲಹ ಪ್ರಿಯ, ದುಗುಡಾಂಬುಧಿ ಮಂದಿರ ಎಂದು ಮೊದಲಾಗಿ ಕರೆದಿದ್ದಾರೆ. ಪ್ರಾಯೇಣ ನಮ್ಮ ಪ್ರಾಚೀನಕಾಲದ ಯಾವ ಗ್ರಂಥಗಳಲ್ಲಿ ನೋಡಿದರೂ ನಾರದನ ಪಾತ್ರವಿದ್ದೇಇದೆ. ಪ್ರಕೃತ ಕಾವ್ಯದಲ್ಲಿಯೂ ನಾರದನು ಒಂದು ಪ್ರಮುಖ ಪಾತ್ರವನ್ನು ವಹಿಸಿಯೇ ಇದ್ದಾನೆ. 'ನಾರದ' ಎಂಬ ಶಬ್ದಕ್ಕೆ ಜ್ಞಾನವನ್ನು ಉಪದೇಶಿಸತಕ್ಕವನು ಎಂದರ್ಥ (ನಾರಂ ದದಾತೀತಿ ನಾರದಃ)

೮. ಮಂತ್ರಿ ವಿದಗ್ಧ : ಇವನು ದಕ್ಷಬ್ರಹ್ಮನ ಮುಖ್ಯಮಂತ್ರಿ. ಯಾಗ ಪ್ರಾರಂಭದ ಮೊದಲು ಇವನು ತನ್ನ ದೊರೆಗೆ ಬಹಳವಾಗಿ ಬುದ್ಧಿ ಹೇಳುತ್ತಾನೆ. ಆದರೂ ಮುರ್ಖನಾದ ದಕ್ಷನು ಇವನ ಮಾತಿಗೆ ಕಿವಿ ಗೊಡುವುದಿಲ್ಲ. ಈ ಕಾವ್ಯದಲ್ಲಿ ಇವನ ವ್ಯಕ್ತಿತ್ವವು ಚೆನ್ನಾಗಿ ನಿರೂಪಿಸ ಲ್ಪಟ್ಟಿದೆ.

೯. ಕೈಲಾಸ ಪರ್ವತ : ಇದು ಭಗವಾನ್ ಶಂಕರನ ನಿವಾಸಸ್ಥಾನ. ಇದನ್ನು 'ಬೆಳ್ಳಿಯ ಬೆಟ್ಟ' ಎಂದು ಕನ್ನಡ ಕವಿಗಳು ಕರೆಯುತ್ತಾರೆ. ಈ ಕೈಲಾಸವು ಕಣ್ಣಿಗೆ ಕಾಣವ ಆಕಾಶದ ತುತ್ತತುದಿಯಲ್ಲಿದೆಯೆಂದು ಪೌರಾಣಿ ಕರು ಹೇಳುತ್ತಾರೆ. ಆದರೆ ಹಿಮಾಲಯದ ಉತ್ತರದಲ್ಲಿರುವ ಕೈಲಾಸ ಪರ್ವತವೇ ಪುರಾಣ ಪ್ರಸಿದ್ಧವಾದ ಕೈಲಾಸವೆಂದು ಇತಿಹಾಸಕಾರರು ಅಭಿ ಪ್ರಾಯ ಪಡುತ್ತಾರೆ. ಪ್ರಾಚೀನ ಕಾಲದಲ್ಲಿ, ನಂದಿ, ಭೃಂಗಿ, ವೃಷಭ, ಸ್ಕಂದ, ರೇಣುಕ, ದಾರುಕ ಮೊದಲಾದ ಗಣಕುಲದ ಜನರು ಈ ಕೈಲಾಸ ಪರ್ವತದಲ್ಲಿ ವಾಸವಾಗಿದ್ದರೆಂದೂ, ಅವರೇ ದ್ರಾವಿಡರ ಮೂಲ ಪುರುಷರೆಂದೂ, ಈ ದ್ರಾವಿಡ ಕುಲದ ಅಧಿಪತಿಯೇ ಶಂಕರನೆಂದೂ ಮತ್ತೆ ಕೆಲವರು ಹೇಳುತ್ತಾರೆ. ಈ ಕಾವ್ಯದಲ್ಲಿ 'ಕೈಲಾಸವು ಮೇರುವಿನ ಉತ್ತರ ಕ್ಕಿದೆ' ಎಂದು ಹೇಳಿದೆ. ಇದು ಹಿಮಾಲಯದ ಉತ್ತರದಲ್ಲಿದ್ದು ಈಗ ಟಿಬೆಟ್ಟಿಗೆ ಸೇರಿದೆ.

೧೦. ಕನಖಳಪುರ : ಇದು ದಕ್ಷನು ಯಾಗವನ್ನು ಮಾಡಿದ ಪ್ರದೇಶ. ಇದು ಕಾಶಿಗೆ ಪಡುವಣದಿಕ್ಕಿನಲ್ಲಿದೆಯೆಂದು ರಾಘವಾಂಕನು ಹೇಳಿದ್ದಾನೆ. ಉತ್ತರ ಹಿಂದುಸ್ಥಾನದ ಪ್ರಸಿದ್ಧವಾದ ಒಂದು ಕ್ಷೇತ್ರವೆನಿಸಿ ರುವ ಹರಿದ್ವಾರದ ಸಮೀಪದಲ್ಲಿ ಈ ಕನಖಳಪುರ ಪ್ರದೇಶವನ್ನು ಜನರು ಈಗಲೂ ತೋರಿಸುತ್ತಾರೆ. ದಕ್ಷನು ಗಂಗಾಮೂಲದಲ್ಲಿ ತನ್ನ ಯಾಗಶಾಲೆ ಯನ್ನು ಮಾಡಿದ್ದನೆಂದು ವಿರೂಪಾಕ್ಷ ಪಂಡಿತನು ಚೆನ್ನಬಸವಪುರಾಣದಲ್ಲಿ ಹೇಳಿದ್ದಾನೆ. (ಕಾಂಡ ೩, ಸಂಧಿ ೩, ಪ ೨೨)

೧೧. ಪಂಪಾಕ್ಷೇತ್ರ : ಇದಕ್ಕೆ 'ದಕ್ಷಿಣಕಾಶಿ' ಎಂಬ ಹೆಸರಿದೆ. ಈ ಕಾವ್ಯದಲ್ಲಿ ದಧೀಚಿಯು ಇಲ್ಲಿ ತಪಸ್ಸುಮಾಡುತ್ತಿದ್ದನೆಂದು ಕವಿಯು ಹೇಳು ತ್ತಾನೆ. ಈ ಕ್ಷೇತ್ರವು ಕರ್ಣಾಟಕ ದೇಶದ ಬಳ್ಳಾರಿ ಜಿಲ್ಲೆಯಲ್ಲಿದೆ.

ಪವಿತ್ರವಾದ ಈ ಕ್ಷೇತ್ರದಲ್ಲಿ ಮತಂಗ, ಮಾಲ್ಯವಂತ, ಋಷ್ಯಮೂಕ, ಕಿಷ್ಕಿಂಧ ಮತ್ತು ಹೇಮಕೂಟ ಎಂಬ ಪಂಚ ಪರ್ವತಗಳಿವೆ. ಇಲ್ಲಿ ಮಂಗಳ ಪ್ರದವಾದ ಪಂಪಾಸರೋವರವಿದೆ. ಮತ್ತು ಶಬರಿಯ ಆಶ್ರಮವಿದೆ. ರಾಮಾಯಣದಲ್ಲಿ ಪ್ರಸಿದ್ಧನಾದ ಮಾರುತಿಯು ಈ ಕ್ಷೇತ್ರದಲ್ಲಿ ವಾಸ ವಾಗಿದ್ದ ಅಂಜನಾದೇವಿಯ ಮಗನೆಂದು ತಿಳಿದುಬಂದಿದೆ. ಆತನು ಹುಟ್ಟಿದ ಸ್ಥಳವನ್ನು ಜನ ತಿಳಿಸುತ್ತಾರೆ. ಕರ್ಣಾಟಕದ ಪ್ರಸಿದ್ಧ ರಾಜಧಾನಿಗಳಾದ ಕಿಷ್ಕಿಂಧೆ (ಆನೇಗುಂದಿ) ಮತ್ತು ವಿಜಯನಗರ ಈ ಕ್ಷೇತ್ರದಲ್ಲಿಯೇ ಇವೆ. ಪಂಪಾವಿರೂಪಾಕ್ಷನು ಈ ಕ್ಷೇತ್ರದ ಅಧಿಪತಿ. ಇಲ್ಲಿ, ಪಂಪಾಪತಿಯ ದೊಡ್ಡ ಗುಡಿಯಿದೆ. ಹಲವು ಶತಮಾನಗಳಿಂದ ಇಲ್ಲಿ, ಹರಿಹರ, ರಾಘವಾಂಕ,ಲಕ್ಕಣಾ ಮಾತ್ಯ, ಜಕ್ಕಣಾರ್ಯ, ಚಾಮರಸ, ವಿರೂಪಾಕ್ಷಪಂಡಿತ, ಅದ್ರೀಶಕವಿ ಮೊದಲಾದ ಮಹಾಕವಿಗಳು ಆಗಿ ಹೋಗಿದ್ದಾರೆ. ರಾಮಾಯಣದಲ್ಲಿಯೂ, ಕರ್ಣಾಟಕದ ಚರಿತ್ರೆಯಲ್ಲಿಯೂ ಪಂಪಾಕ್ಷೇತ್ರವು ಪ್ರಖ್ಯಾತಿಯನ್ನು ಪಡೆ ದಿದೆ. ವಿದ್ಯಾರಣ್ಯರು ತಪಸ್ಸಿದ್ಧಿಯನ್ನು ಪಡೆದುದು ಈ ಪುಣ್ಯಭೂಮಿಯ ಲ್ಲಿಯೇ. ರಾಮಾಯಣದಲ್ಲಿ ಪ್ರಸಿದ್ಧರಾದ, ವಾಲಿ, ಸುಗ್ರೀವ ಮೊದಲಾದ ವಾನರ ಕುಲದ ಜನ ಇಲ್ಲಿನವರೇ. ಸಂಶೋಧಕರು ಈ ವಾನರರನ್ನು ಕನ್ನಡಿಗರ ಮೂಲಪುರುಷರೆನ್ನುತ್ತಾರೆ.

೧೨. ವಸಿಷ್ಠ ಮತ್ತು ವಿಶ್ವಾಮಿತ್ರ : ಇವರಿಬ್ಬರೂ ಪ್ರಾಚೀನ ಕಾಲದ ಪ್ರಸಿದ್ಧರಾದ ಮಹರ್ಷಿಗಳು. ವಶಿಷ್ಠನು ಬ್ರಹ್ಮರ್ಷಿ. ವಿಶ್ವಾ ಮಿತ್ರನು ರಾಜರ್ಷಿ. ಇವರೀರ್ವರ ದೀರ್ಘದ್ವೇಷದ ಫಲವೇ ಹರಿಶ್ಚಂದ್ರನ ಕಥೆ. ಈ ಗ್ರಂಥದಲ್ಲಿ ಇವರ ಹೆಸರು ಎಲ್ಲೋ ಒಂದು ಕಡೆ ಬರುತ್ತದೆ. (ಸಂಧಿ ೧. ಪದ್ಯ. ೧೩.)

೧೩. ಅಗ್ನಿಷ್ಟೋಮ : ಇದು ಷೋಡಶ ಯಾಗಗಳಲ್ಲಿ ಪ್ರಸಿದ್ಧ ವಾದುದು. ದಕ್ಷನು ಶಿವನನ್ನು ನಾಶಮಾಡುವ ಸಲುವಾಗಿ ಈ ಯಾಗವನ್ನು ಕೈಗೊಂಡನೆಂದು ರಾಘವಾಂಕನು ಹೇಳಿದ್ದಾನೆ. ಈ ಯಾಗದ ಲಕ್ಷಣ ವನ್ನು ನೋಡಿದರೆ ಇದು ಹಿಂಸಾಮಯವಾದ ಯಜ್ಞವೆಂದು ತೋರಿಬರು ತ್ತದೆ. ದಕ್ಷನು ಅಶ್ವಮೇಧಯಾಗ ಮಾಡಿದನೆಂದು ಚೆನ್ನಬಸವಪುರಾಣದಲ್ಲಿ ಹೇಳಿದೆ. (ಕಾಂಡ ೩. ಸಂಧಿ ೩. ಪ ೨೩.)

೧೪. ನರಸಿಂಹ :– ಹಿರಣ್ಯಕಶ್ಯಪು ಎಂಬ ರಾಕ್ಷಸನನ್ನು ಕೊಲ್ಲಲು ನಾರಾಯಣನು ಧರಿಸಿದ ಒಂದು ಅವತಾರದ ಹೆಸರು. ತಲೆಯು ಸಿಂಹನಂತೆಯೂ, ಉಳಿದ ದೇಹವು ಮನುಷ್ಯನಂತೆಯೂ ಇದ್ದುದರಿಂದ ಈ ಅವತಾರಕ್ಕೆ ನರಸಿಂಹಾವತಾರವೆಂದು ಹೆಸರಾಯಿತು. ಹೀಗೆ ಹಿರಣ್ಯಕಶ್ಯಪುವಿನ ರಕ್ತವನ್ನು ಕುಡಿದು ನರಸಿಂಹನು ಪ್ರಮತ್ತನಾಗಿ ಲೋಕಗಳನ್ನು ಹಿಂಸಿಸಲು ಪ್ರಾರಂಭಿಸಿದಾಗ, ವೀರಭದ್ರನು ದೇವತೆಗಳ ಪ್ರಾರ್ಥನಾನುಸಾರ, ಶರಭಾವತಾರವನ್ನು ಧರಿಸಿ ನರಸಿಂಹಾವತಾರವನ್ನು ಪರಿಸಮಾಪ್ತಿಮಾಡಿ ಲೋಕಗಳನ್ನು ಕಾಪಾಡಿದನೆಂದು ಪುರಾಣಗಳಲ್ಲಿ ಕಥೆಯಿದೆ. ಈ ವಿಷಯವಾಗಿ ರಾಘವಾಂಕನು 'ಶರಭ ಚಾರಿತ್ರ' ಎಂಬ ಒಂದು ಗ್ರಂಥವನ್ನು ಬರೆದಿರುವನೆಂದು ಪ್ರತೀತಿಯಿದೆ. ಆದರೆ ಆ ಗ್ರಂಥ ಇನ್ನೂ ಹಸ್ತಗತವಾಗಿಲ್ಲ. [ಪದ್ಯ ೪೨, ಸಂಧಿ ೨] ಈ ಹೆಸರಿನ ಇನ್ನೊಂದು ಗ್ರಂಥವಿದ್ದು 'ನಿಶ್ಚಿತಾತ್ಮ' ಕವಿಯಿಂದ ರಚಿತವಾಗಿದೆ.

೧೫. ಕೃಷ್ಣಾಜಿನ:– ಈ ಗ್ರಂಥದಲ್ಲಿ ಕೃಷ್ಣಾಜಿನದ ವಿಚಾರ ಬಂದಿದೆ. ಅದರ ತಾತ್ಪರ್ಯವೇನಂದರೆ :–ಶ್ರೀ ಮಹಾವಿಷ್ಣುವು ದಕ್ಷಯಾಗದ ಸಂರಕ್ಷಣೆ ಮಾಡುವಾಗ ವೀರಭದ್ರನಕೂಡ ಭಯಂಕರವಾಗಿ ಯುದ್ಧಮಾಡಿದನೆಂದೂ, ಕಡೆಗೆ ವೀರಭದ್ರನ ಪ್ರತಾಪ ಹೆಚ್ಚಾಗಲು ಆಗ ವಿಷ್ಣುವು ಅಂಜಿ ಪ್ರಾಣ ರಕ್ಷಣೆಗಾಗಿ ಜಿಂಕೆಯ ಆಕಾರವನ್ನು ಧರಿಸಿ ಓಡಲು ಪ್ರಾರಂಭಿಸಿದನೆಂದೂ, ಆಗ ವೀರಭದ್ರನು ತನ್ನ ಕ್ರೂರವಾದ ಬಾಣಗಳಿಂದ ಜಿಂಕೆಯನ್ನು ಹೊಡೆದನೆಂದೂ, ಆಗ ವಿಷ್ಣುವು ಜಿಂಕೆಯ ಆಕಾರವನ್ನು ಬಿಟ್ಟು ತನ್ನ ನಿಜಸ್ವರೂಪದಿಂದ ಕೈಮೋರಿ ವೀರಭದ್ರನನ್ನು ಕ್ಷಮಾಯಾಚನೆ ಮಾಡಿದನೆಂದೂ, ಆಗ ಜಿಂಕೆಯ ಚರ್ಮವನ್ನು ಸುಲಿದು ಯಜ್ಞಗಳಿಗೆ ಶಿವಧ್ಯಾನಾದಿಕಾಲಗಳಿಗೆ ಉಪಯೋಗಿಸುವ ಸಲುವಾಗಿಯೂ, ವಿಷ್ಣುವು ಜಿಂಕೆಯ ಸ್ವರೂಪವನ್ನು ಧರಿಸಿದ್ದರ ಸ್ಮಾರಕವಾಗಿಯೂ ವೀರಭದ್ರನಿಂದ ಕೃಷ್ಣಾಜಿನವು ಪರಿಗ್ರಹಿಸಲ್ಪಟ್ಟಿತೆಂದೂ ಪುರಾಣಗಳಲ್ಲಿ ಹೇಳಲ್ಪಟ್ಟಿದೆ.

೧೬. ನಂದಿ ಮತ್ತು ಭೃಂಗಿ:– ಇವರೀರ್ವರೂ ಕೈಲಾಸದಲ್ಲಿ ಅತ್ಯಂತ ಪ್ರಮುಖರಾದ ಪ್ರಮಥರು. ನಂದಿಯು ಶಿವನ ಅಪರಾವತಾರನೆಂದು ಬಸವ ಪುರಾಣಗಳಲ್ಲಿ ಹೇಳಿದೆ. ಸ್ಕಾಂದಪುರಾಣದ ದಕ್ಷಯಾಗದ ಕಥೆಯಲ್ಲಿ

ನೈಮಿಷಾರಣ್ಯದಲ್ಲಿ ಕೂಡಿದ್ದ ಋಷಿಗಳ ಒಂದು ಸಭೆಯಲ್ಲಿ, ಶಿವನು ದಕ್ಷ ಬ್ರಹ್ಮನಿಗೆ ಸನ್ಮಾನವನ್ನು ಮಾಡಲಿಲ್ಲವೆಂಬ ಕಾರಣದಿಂದ, ದಕ್ಷನು ಶಿವನ ಮೇಲೆ ಕೋಪಿಸಿಕೊಂಡಾಗ ಶಿವಭಕ್ತ ಶಿರೋಮಣಿಯಾದ ನಂದಿಯು ದಕ್ಷನನ್ನು ಶಪಿಸಿದನೆಂದು ಹೇಳಿದೆ. ಮುಖ್ಯವಾಗಿ ಶಿವಧರ್ಮ ಶಾಸ್ತ್ರದಲ್ಲಿ ನಂದಿಗೆ ಅತ್ಯಂತ ಪ್ರಾಮುಖ್ಯತೆಯಿದೆ. ಈ ನಂದಿಯ ಮುಖವು ಮಾರುತಿಯ ಮುಖದಂತಿದೆ. ನಂದಿಯ ಅವತಾರವೇ ಹನುಮಂತನೆಂಬ ಹೇಳಿಕೆಯೂ ಇದೆ.

ಭೃಂಗಿಯು ಮೂರು ಕಾಲುಳ್ಳವನೆಂದೂ, ಶಿವನಸಭೆಯಲ್ಲಿ ನರ್ತನ ಮಾಡತಕ್ಕವನೆಂದೂ, ಮಾಯೆಯನ್ನು ಗೆದ್ದವನೆಂದೂ ಶಿವಪುರಾಣಗಳಲ್ಲಿ ಪ್ರಸಿದ್ಧನಾಗಿದ್ದಾನೆ. ರಾಘವಾಂಕನು ಬರೆದ ಸಿದ್ಧರಾಮ ಪುರಾಣದಲ್ಲಿ ಈ ಭೃಂಗಿಯು ಕೈಲಾಸದ ಸಭೆಯಲ್ಲಿ, ಅದ್ರಿಶಿರ, ಊರ್ಧ್ವಶಿರ ಎಂಬ ಗ್ರಂಥ ರ್ವರು ತನ್ನನ್ನು ನೋಡಿ ನಕ್ಕುದರ ದೆಸೆಯಿಂದ, ಅವರು ನರಜನ್ಮದಲ್ಲಿ ಹುಟ್ಟುವಂತೆ ಶಾಪವನ್ನು ಕೊಟ್ಟನೆಂದೂ, ಮತ್ತೆ ಅವರ ಕೋರಿಕೆಯಂತೆ ಅವರ ಹೊಟ್ಟೆಯಲ್ಲಿ ಓರ್ವ ಶಿವಯೋಗಿಯು ಮಗನಾಗಿ ಹುಟ್ಟಿದರೆ ಅವರ ನರಜನ್ಮ ಹೋಗುವುದೆಂದು ವಿಶಾಪವನ್ನು ಕೊಟ್ಟನೆಂದೂ, ಈ ಶಾಪ ವಿಶಾಪಗಳ ಫಲವಾಗಿ ಗಂಧರ್ವರು ಸೊನ್ನಲಿಗೆಯಲ್ಲಿ ಮುದ್ದುಗೊಂಡ ಮತ್ತು ಸುಗ್ಗವ್ವೆ ಎಂಬ ದಂಪತಿಗಳಾಗಿ ಹುಟ್ಟಿದರೆಂದೂ ಅವರ ಹೊಟ್ಟೆಯಲ್ಲಿ ಶಿವನ ಅಪ್ಪಣೆಯಂತೆ ಶಿವಯೋಗಿ ಸಿದ್ಧರಾಮನು ಮಗನಾಗಿ ಜನಿಸಿದುದ ರಿಂದ ಅವರ ನರಜನ್ಮದ ದೋಷವು ಹೋಯಿತೆಂದೂ ಹೇಳಿದೆ.

ಈ ನಂದಿ ಮತ್ತು ಭೃಂಗಿಗಳು ಶಿಲಾದಮುನಿಯ ಮಕ್ಕಳೆಂದು ಪಾಲ್ಕು ರಿಕೆ ಸೋಮೇಶ್ವರ ಪುರಾಣದಲ್ಲಿದೆ. ಈ ನಂದಿ-ಭೃಂಗಿಗಳೇ ಲಿಂಗಧಾರಣ ರೂಪವಾದ ಶಿವಧರ್ಮವನ್ನು (ವೀರಶೈವ ಧರ್ಮ) ಭೂಮಿಯಲ್ಲಿ ಪ್ರತಿಷ್ಠಿಸಿದ ರೆಂದು, ಸ್ಕಾಂದ, ಶಿವಧರ್ಮ ಇತ್ಯಾದಿ ಸಂಸ್ಕೃತಪುರಾಣ ಗ್ರಂಥಗಳಲ್ಲಿ ಹೇಳಿವೆ.

ಶಬ್ದಕೋಶ

ಅ

ಅಂಕಿಸು	೧—೧೧	ವ್ಯಕ್ತಪಡು
ಅಗ್ಗಿಸು	೨—೨೭	ಅವನತಿಗೆ ಕಾರಣನಾಗು
ಅಜಪಶು	೨—೪೫	ಯಜ್ಞಕ್ಕೆ ತಂದ ಮೇಕೆ
ಅಟವಟಿಸು	೧—೪೫	ಆತುರಪಡು, ತವಕಿಸು
ಅಟ್ಟು	೧—೩೦	ಕಳುಹಿಸು
ಅಡಗು	೧—೭	ಮಾಂಸ
ಅಣಕಿಸು	೧—೧೦	ಹೀಯಾಳಿಸು
ಅಂತಸ್ಥ	೧—೨೨	ಮನಸ್ಸಿನ ಗುಟ್ಟು
ಅದ್ದಿಸು	೨—೨೫	ಮುಳುಗಿಸು
ಅಧ್ವರ	೧—೧, ೧—೬೮	ಯಜ್ಞ, ಯಾಗ
ಅನುವು	೧—೬೯	ವಿಚಾರ, ನೀತಿ
ಅರೆವೆಣ್ಣು	೧—೪೮	ಅರ್ಧನಾರೀಶ್ವರ, ಶಿವ
ಅವಿ	೨—೫೫	ಟಗರು, ಹೋತ
ಅಸಿಲತೆ	೨—೨೨	ಒಳುಕುವ ಖಡ್ಗ
ಅಸ್ಫಾಟಿಸು	೨—೩೫	ತೊಡೆತಟ್ಟಿ ಶಬ್ದಮಾಡು
ಅಳವಡು	೨—೫	ಮನೋಹರವಾಗು
ಅಳಿಯ	೧—೪೮	ಮಗಳಗಂಡ, ಜಾಮಾತ
ಅಳಿ	೧—೩೭	ನಾಶ
ಅಕ್ಷರ	೧—೩	ನಾಶವಾಗದುದು
ಅಕ್ಷಯ	೧—೩	ನಾಶರಹಿತ

ಆ

ಆಳಾಪ	೧—೧	ಆರ್ಭಟೆ
ಆಣತಿ	೧—೧೮	ಆಜ್ಞೆ
ಆರ್ತ	೧ ೭೦	ದುಃಖಿತ

ಇ

ಇಡುಕುರ	೧—೨, ೧—೪೪	ಗುಂಪು, ದಟ್ಟವಾದ
ಇಸ್ಸಿ	೨—೫೦	ಅಸಹ್ಯ, ಜಿಗುಪ್ಸೆ

ಇಡಿಕು	೧_೨೯	ಬೇಸರಪಡು
ಇಂಧನ	೧_೫೪	ಕಟ್ಟಿಗೆ, ಸೌದೆ

ಉ

ಉಡು	೧_೨	ತಾರೆ, ನಕ್ಷತ್ರ
ಉಡುಕುಳಿ	೧_೯	ಸಾಮಾನ್ಯ, ಕೇವಲ
ಉಡುಗೊರೆ	೧_೧೯	ಬಹುಮಾನ,
ಉಬ್ಬೆಗ	೧_೨೫	ಉದ್ವೇಗ, ವ್ಯಸನ
ಉರವಣಿಸು	೧_೨೬	ಗರ್ವಪಡು, ಅಹಂಕರಿಸು
ಉರಿಗಣ್ಣ ಮಗ	೨_೨೩	ವೀರಭದ್ರ (ಶಿವನ ಹಣೆಗಣ್ಣಿನಲ್ಲಿ ಹುಟ್ಟಿದವ)
ಉಲಿ	೨_೨೩	ಧ್ವನಿಮಾಡು, ಕೂಗು

ಎ

ಎರಗು	೧_೨೦	ನಮಸ್ಕರಿಸು, ಶರಣುಬಾ
ಎರಳೆ	೨_೧೧	ಜಿಂಕೆ, ಚಿಗರೆ
ಎಸಕ	೧_೪೨	ಕೀರ್ತಿ, ಯಶಸ್ಸು
ಎಸರು	೨_೨	ಕುದಿಯುವ ನೀರು

ಐ

ಐವೇದ	೧_೨೦	ಐದು ವೇದ
ಐದರೆ	೧_೫೮ ೨_೧೪	ಇದ್ದಾರೆ

ಒ

ಒಡ್ಡು	೨_೧೦	ಅಣೆಕಟ್ಟು
ಒದೆಸೆಂಡು	೨_೪೭	ಕಾಲುಚೆಂಡು
ಒರಲು	೧_೫೫	ಕೂಗು, ಅರಚು
ಒಬ್ಬಳಿ	೧_೧೧	ಸಮೂಹ, ಗುಂಪು

ಕ

ಕರ್ಕಶ	೧_೩	ಕ್ರೂರವಾದ
ಕಕ್ಕುಲತೆ	೧_೫೩	ಸಂದೇಹ
ಕಂದ	೧_೧೧	ಫಲ, ಹಣ್ಣು
ಕಂದೆರವೆ	೦_೨೫	ದಿಟ್ಟಿಸಿದ ನೋಟ
ಕಡಲು	೧_೪	ಸಮುದ್ರ
ಕಡ್ಡಣಿಕೆ	೧_೨ ೨_೨೦	ಜಡೆ
ಕಡೆಗಾಲ	೨_೨	ಪ್ರಳಯಕಾಲ
ಕಡೆಗೊಂಟು	೧_೨೧	ಕಡೆಯ ಮೂಲೆ
ಕಣ	೧_೪	ಆಸರೆ, ಆಶ್ರಯಸ್ಥಾನ
ಕಣೆ	೨_೪೦	ಬಾಣ, ಅಂಬು
ಕರ್ಪರ	೨_೪	ಚಿಪ್ಪು, ಸಿಂಪು
ಕಾಳಗ	೨_೨೪	ಯುದ್ಧ, ಸಮರ
ಕುತ್ತಾರ	೧_೧೬	ಗಂಪು, ಪೊದೆ
ಕುನ್ನಿ	೧_೬೫	ಕ್ಷುದ್ರಪ್ರಾಣಿ, ನಾಯಿ
ಕುಳಿಕ	೨_೯	ಕೃಷ್ಣಸರ್ಪ
ಕುಂತ	೧_೨೩	ಒನಕೆ (ಒಂದು ಆಯುಧ)
ಕೂರ್ತು	೧_೧	ಪ್ರೀತಿಸಿ, ಒಲಿದು
ಕೆಡುನುಡಿ	೧_೬೫	ಕೆಟ್ಟಮಾತು
ಕೆಲಸಾರು	೧_೫೬	ಹತ್ತಿರ ಬಾ
ಕೇಳಿಕೆ	೧_೫೬	ನೃತ್ಯದಿಂದ ಕೂಡಿದ ಗಾಯನ
ಕೈವಾರ	೧_೧೮	ಹೊಗಳಿಕೆ
ಕೊಸರು	೧_೨೬	ಹೊರಸೂಸು
ಕೃತಿ	೧_೮	ಕಾವ್ಯ

ಖ

ಖಂಡೆಯ	೨_೯	ಖಡ್ಗ
ಖಳ	೨_೨೬	ನಿರುತಿ, ಕೆಟ್ಟವ

ಖೇಚರ	೧_೩೫	ಆಕಾಶಗಾಮಿ
ಖೇಟಗ	೨_೩೧	ಡಾಲು, ಗುರಾಣಿ

ಗ

ಗಜಪಡೆ	೨_೩೩	ಆನೆಯ ಗುಂಪು
ಗುರುಲಘುವರಿಯದಳು	೧_೬೯	ತಿಳಿವಳಿಕೆ ಇಲ್ಲದವಳು
ಗೆಲ್ಲುವರೆ	೨_೫೧	ಜಯಭೇರಿ
ಗೋವಳಗಟ್ಟಿಗೆ	೨_೭೩	ದನಗಾಯಿಗಳ ಕೈಗೋಲು

ಘ

ಘಿಮ್ಮಿಡು	೨_೭	ಘಿಮ್ಮೆಂದು ಶಬ್ಧ ಮಾಡು
ಘೂರ್ಮಿಸು	೨_೬೪	ಗರ್ಜಿಸು

ಚ

ಚಮೂವರ	೧_೩೨	ದಂಡನಾಯಕ, ಮಂತ್ರಿ
ಚಿತ್ತದ ಕಂಗಳು	೧_೨೦	ಮನದ ಕಣ್ಣುಗಳು

ಜ

ಜನ್ನ	೧_೨೭	ಯಜ್ಞ
ಜಡೆಯ ಜಡರು	೧_೬೫	ಮೂರ್ಖ ಸಂನ್ಯಾಸಿಳು
ಜಯಸೇಸೆ	೧_೧೭	ಗೆಲುವನ್ನು ಕೋರುವ ಮಂತ್ರಾಕ್ಷತೆ

ತ

ತಾರೆ	೧_೩೪	ಎಕ್ಕದ ಗಿಡ, ನಕ್ಷತ್ರ
ತಾವರೆಗಣ್ಣ	೧_೨೦	ವಿಷ್ಣು, ಕಮಲಾಕ್ಷ
ತುತಿಸು	೧_೯	ಸ್ತೋತ್ರಮಾಡು
ತೊಡೆಸೋಂಕು	೧_೧೫	ಸಮೀಪ, ಸನಿಹ

ತವಕ	೧_೪೩	ಆತುರ
ತವನಿಧಿ	೧_೪೩	ಭಂಡಾರ, ಅಕ್ಷಯನಿಧಿ
ತುಡುಕು	೧_೬೫	ಹಿಡಿ, ಮೇಲೆಬೀಳು
ತಮಂಧ	೧_೬೪	ಕತ್ತಲು, ಅಂಧಕಾರ
ತಳಿ	೨_೧೩	ಒಣಗಿದ ಮರದ ಗುಂಪು

ಥ

ಥರ	೧_೧೫	ರೀತಿ, ವಿಧಾನ

ದ

ದುಗುಡ	೧_೫೬	ಚಿಂತೆ, ತಾಪ
ದಣ್ಣನೆವಣೆ	೧_೨	ತೃಪ್ತಿಪಡು
ಧನಿ	೧_೬೩	ಕುಬೇರ
ದಿಙ್ನಾಥರು	೨_೧೦	ದಿಕ್ಪಾಲಕರು
ದಳ್ಪುರಿ	೨_೨	ಚಾಚುವ ಬೆಂಕಿ
ದೊಣೆ	೨_೩೦	ಬತ್ತಳಿಕೆ
ದೂವಾಳಿಸು	೨_೩೦	ಓಡು

ನ

ನಿಗುಚು	೨_೯	ನೆಟ್ಟಗೆ ಮಾಡು
ನಿಗುರು	೧_೧೨	ನೆಟ್ಟಗಾಗು
ನಿಚ್ಚಟರು	೧_೭, ೧_೯	ನಿಷ್ಕಪಟರು
ನಡುಗಣ್	೧_೫	ಶಿವನ ಫಾಲನೇತ್ರ
ನಿಟ್ಟೊಗೆ	೧_೨೬	ನಿಟ್ಟುಸಿರು
ನಾಣಿಲಿ	೨_೪೩	ನಾಚಿಕೆ ಇಲ್ಲದವನು
ನೇಸರು	೨_೯	ಸೂರ್ಯ
ನೆಗಳು	೨_೧೧	ಮೊಸಳೆ

ಪ

ಪರಕೆ	೨_೧೪	ಹರಕೆ, ಆಶೀರ್ವಾದ
ಪರಪರಿಸುವ	೧_೧೫	ಅಹಂಕರಿಸುವ
ಪರಿಸ	೧_೧೨	ಸ್ಪರುಶಮಣಿ
ಪೊಸಿದ	೧_೪೯	ಧರಿಸಿದ
ಪೊಷ	೧_೫೦	ಸೂರ್ಯ
ಪ್ರಚಯ	೧_೫೬	ಸಮೂಹ
ಪೊಣ್ಮು	೧_೫೪	ಹೊರಹೊರಡು
ಪಕ್ಕರಿಕೆ	೨_೩೦	ಕುದುರೆಯ ಜೀನು
ಪಿಲ್ಲಣಗೆ	೨_೨೧	ಗದೆ
ಪೆರ್ಬಾಳು	೨_೩೧	ದೊಡ್ಡ ಕತ್ತಿ

ಬ

ಬಾದಣ	೨_೮	ಕಿಟಕಿ, ವಾತಾಯಣ
ಬಾಳ್	೧_೧೮	ಖಡ್ಗ, ಕತ್ತಿ
ಬಿನದ	೧_೨೧	ವಿನೋದ
ಬಿಸುಗಣ್ಣ	೨_೨೧	ಶಿವ, ಅಗ್ನಿನೇತ್ರವುಳ್ಳವನು
ಬೆಳಶಿಗೆ	೧_೧೬	ಬಿಳುಪಾದ, ಹೊಳಪಾದ
ಬೇಗೆ	೧_೫೬	ಬೆಂಕಿ, ಅಗ್ನಿ

ಭ

ಭವಿ	೨_೩೩	ಹುಟ್ಟುಸಾವಿಗೆ ಕಟ್ಟುಬಿದ್ದವ
ಭಾಷೆ	೨_೧೧	ಪ್ರತಿಜ್ಞೆ

ಮ

ಮಖಶಾಲೆ	೨_೭೫	ಯಜ್ಞಶಾಲೆ
ಮದ	೧_೬೦	ಅಹಂಕಾರ
ಮರುಳ	೧_೨೨	ಹುಚ್ಚ

ಮುಸುಳು	೧_೬೩	ಹಿಂಗು, ಕಾಂತಿಶೂನ್ಯನಾಗು
ಮಂತಣ	೧_೨೩	ಆಲೋಚನೆ
ಮಂತ್ರ	೧_೩೩	ಉಪಾಯ
ಮಿಡುಗುರಿ	೨_೪೭	ಸಿಡಿಯುವ ಬೆಂಕಿ
ಮೊಗರಂಗ	೨_೨೮	ಆನೆಗಳ ಮುಖವಾಡ
ಮೊರಡಿ	೧_೩೪	ಗುಡ್ಡ, ದಿಣ್ಣೆ

ಯ

ಯೂಪ	೧_೩೮	ಯಜ್ಞಶಾಲೆಯಲ್ಲಿ ಪಶುಗಳನ್ನು ಕಟ್ಟುವ ಕಂಭ

ರ

ರಜ	೨_೨೩	ಧೂಳು
ರಿಂಗಣಗುಣಿತ	೨_೧೯	ಒಂದು ಬಗೆಯ ನರ್ತನ

ಲ

ಲೆಕ್ಕಿಸು	೧_೬೪	ಗೌರವಿಸು
ಲಾಳಿ	೨_೨೮	ಕೈಚಳಕ

ಸ

ಸತ್ತಿಗೆ	೨_೪	ಕೊಡೆ, ಛತ್ರಿಕಾ
ಸಮ್ಮಟಿಗೆ	೨_೯	ಕೊಡತಿ
ಸೀಗುರಿ	೧_೧೪	ಪತಾಕೆ, ಚಾಮರ
ಸುತ	೧_೮	ಮಗ (ಶಿಷ್ಯ)
ಸುದತಿ	೧_೭೦	ಹೆಂಗುಸು
ಸುತ್ತುಗೆ	೧_೧೬	ಸುತ್ತಿರುವ ಗುಂಪು
ಸುರಗಿರಿ	೧_೧೦	ಮೇರುಪರ್ವತ
ಸೂರುಳು	೨_೧೩	ಆಣೆ, ಪ್ರತಿಜ್ಞೆ
ಸಂತೆ	೧_೧೫	ಜನರ ಗುಂಪು

ಸಿಂಪು	೧_೨೨	ಚಿಪ್ಪು
ಸ್ರುಕ್	೧_೫೫	ಹೂವಿನ ದಂಡೆ
ಸ್ರುವ	೨_೫೫	ಯಜ್ಞದ ಸೌಟು

ಹ

ಹಗ್ಗಿ	೨_೧	ಬೆಂಕಿ
ಹೊಗರಿಡು	೧_೪೯	ಪ್ರಕಾಶಿಸು
ಹುರಿಗುಟ್ಟು	೧_೨೪	ತನ್ನನ್ನು ತಾನೇ ಹಳಿದುಕೊಳ್ಳು
ಹುಗ್ಗಿ	೨_೧೫	ಗೋಧಿಯ ಪಾಯಸ
ಹುಡಿಗೆಯ್	೧_೭	ಪುಡಿಮಾಡು
ಹದುಳ	೧_೬೦	ಕ್ಷೇಮ
ಹಳಚು	೧_೧೦	ತಾಕು
ಹರವಡೆ	೧_೨೫	ಪ್ರಸಿದ್ಧಿ, ಪ್ರಖ್ಯಾತಿ
ಹಾಹೆ	೨_೬	ಕಾಲುಪಡೆಯ ಗುಂಪು
ಹೊಲ್ಲ	೧_೨೫	ಅಯೋಗ್ಯ
ಹೋಮ	೧_೩೦	ಯಜ್ಞ
ಹಳವಿಗೆ	೨_೮೦	ಬಾವುಟ, ಧ್ವಜ

ಶರಣಸಾಹಿತ್ಯ ಗ್ರಂಥಮಾಲಾ, ಬೆಂಗಳೂರು-೨

೧	ಪುರಾತನರ ತ್ರಿವಿಧಿ—(ತೃತೀಯ ಮುದ್ರಣ)	ನಿಜಗುಣ ಶಿವಯೋಗಿ	2 00
೨	ವೀರೇಶ ಚರಿತೆ (ದ್ವಿತೀಯ ಮುದ್ರಣ)	ರಾಘವಾಂಕ ಕವಿ	3-00
*೩	ಮನೋವಿಜಯಂ (ಸಟೀಕ)	ಗುರುಬಸವ ಕವಿ	3-00
*೪	ಬಸವೋದಾಹರಣಂ ,,	ಪಾಲ್ಕುರುಕಿ ಸೋಮನಾಥ	1-00
೫	ಶಿವ ಶರಣರ ತ್ರಿವಿಧಿಗಳು ಮತ್ತು ವೇದಾಂತ ಶಿಖಾರತ್ನ ಪ್ರಕಾಶಿಕಾ		1-25
*೬	ಘನಲಿಂಗಿದೇವರ ವಚನಗಳು [ಸಟೀಕ]	ಘನಲಿಂಗಿದೇವರು	3-00
*೭	ಯುಗವಾಣಿ.... [ಕವನ ಸಂಗ್ರಹ]		1-00
*೮	ಸಂಕ್ಷಿಪ್ತ ಶಿವಪೂಜಾವಿಧಿ	ಕೈ॥ ವಿರೂಪಾಕ್ಷ ಒಡೆಯರ್	1-00
೯	ತುರುಗಾಹಿ ರಾಮಣ್ಣ ಹಾಗೂ ಇತರ ವಚನಗಳು		3-00
೧೦	ಕರ್ಣಾಟಕ ಸಂದರ್ಶನ (ಭಾಗ-೧)	ಬಿ. ಶಿವಮೂರ್ತಿ ಶಾಸ್ತ್ರೀ	5-00
೧೧	ನ್ಯಾಯಶತಕಮ್ [ಸಟೀಕ]	ರಾಮೇಶ್ವರ ಮಖಿ	2-00
*೧೨	ಕನ್ನಡಕಲಿ ಸಿರುಮನ ಚರಿತೆ	ದಿ॥ ಹು. ಶ್ರೀ. ಜೋಯಿಸರು	1-00
೧೩	ದುಂಬಿ - ನಾದ [ಕವನ ಸಂಗ್ರಹ]	ಬಿ. ಶಿವಮೂರ್ತಿಶಾಸ್ತ್ರೀ	2-00
*೧೪	ಕನ್ನಡ ಆದಿತ್ಯ ಪುರಾಣಂ [ಭಾಗ ೧]	ಕವಿರಾಜ ಕಂಠೀರವ	1-00
*೧೫	ವೀರಶೈವ ಮಹಾಪುರುಷರು (ಭಾಗ ೧-೨)	ಬಿ. ಶಿವಮೂರ್ತಿಶಾಸ್ತ್ರೀ	10-00
೧೬	ವೀರಶೈವ ಸಾಹಿತ್ಯ-ಇತಿಹಾಸ [ಭಾಗ ೧]	ಬಿ. ಶಿವಮೂರ್ತಿಶಾಸ್ತ್ರೀ	3-(,)
*೧೭	ಸರ್ವಜ್ಞಮೂರ್ತಿ (ಕವಿಕಾವ್ಯ ವಿಚಾರ)	ಬಿ. ಶಿವಮೂರ್ತಿಶಾಸ್ತ್ರೀ	2-00
೧೮	ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ (ಭಾಗ-೧).........		1-00
೧೯	ಷಡಕ್ಷರ ಮಂತ್ರಮಹಿಮೆ (ದ್ವಿತೀಯ ಮುದ್ರಣ)	ಕೊಂಡಗುಳಿ ಕೇಶಿರಾಜ	2-00
೨೦	ಗಣಸಹಸ್ರ ನಾಮಾವಳಿ ಮತ್ತು ಬಸವ ಸ್ತೋತ್ರಗಳು	ಪಾಲ್ಕುರುಕಿ ಸೋಮೇಶ್ವರ	2-00
೨೧	ಪಂಪಾಸ್ಥಾನ ವರ್ಣನಂ	ಅಷ್ಟಭಾಷಾ ಚಂದ್ರಕವಿ	2-00
೨೨	ಕನ್ನಡ ಶತಕ ಸಾಹಿತ್ಯ (ಆರು ಶತಕಗಳು).........		3-00
೨೩	ಮಾದೇಶ್ವರ ಸಾಂಗತ್ಯ	ಹಲಗೂರು ಗುರುಸಿದ್ಧಕವಿ	2-00
೨೪	ಕರ್ಣಾಟಕ ವಿಜಯಂ (ನಾಟಕ)	ಬಿ. ಶಿವಮೂರ್ತಿಶಾಸ್ತ್ರೀ	3-00
೨೫	ವೀರಶೈವ ಸಾಹಿತ್ಯ ಮತ್ತು ಇತಿಹಾಸ (ಭಾಗ ೨)	....	5 00
೨೬	ಕೆಳದಿಯ ರಾಣಿ ಚೆನ್ನಮ್ಮಾಜಿ (ನಾಟಕ)	....	2-00
೨೭	ಬಿದನೂರುಪ್ರಭು ಶಿವಪ್ಪನಾಯಕ (ಭಾಗ ೧-೨)	ಬಿ. ಶಿವಮೂರ್ತಿಶಾಸ್ತ್ರೀ	2-00
೨೮	ವೀರಶೈವ ಸಾಹಿತ್ಯ ಮತ್ತು ಇತಿಹಾಸ [ಭಾಗ ೩]	,,	4-00
*೨೯	ವೀರಶೈವ ಧರ್ಮ ಮತ್ತು ವಿಭೂತಿಗಳು (ಭಾಗ-೪)	,,	5-00
*೩೦	ಕರ್ಣಾಟಕ ಸಾಹಿತ್ಯ-ಸಂದರ್ಶನ (ಅಮೌಲ್ಯ ಜ್ಞಾನ ಭಂಡಾರ)	,,	10-00

*ಈ ಪುಸ್ತಕಗಳು ಮತ್ತೆ ಅಚ್ಚಿನಲ್ಲಿವೆ.

ಪ್ರಕಾಶಕರು :

141, ಶರಣ ಸಾಹಿತ್ಯ ಕಾರ್ಯಾಲಯ

ರಂಗಸ್ವಾಮಿ ಗುಡಿ ಬೀದಿ, P. O. ಬೆಂಗಳೂರು-2.